
ರಂಜನೆ ಬೋಧನೆ

ಲಂಕೇಶ್

ಏಪ್ರಿಲ್ 1, 2009 ರೂ. 12/-

HKE ಚುನಾವಣೆ ಗೆಲುವಿನ ಉಮೇದಿನಲ್ಲಿ ಹೆಗ್ಗಣಗಳು



ಯಡ್ಡಿ ಬಿಜೆಪಿ V/s ಮೂಲ ಬಿಜೆಪಿ

ಪುತ್ರನನ್ನು ಗೆಲ್ಲಿಸಲು 100 ಕೋಟಿ

ಪ್ರತಿ ಬೂತ್‌ಗೆ ಎರಡು ಲಕ್ಷ


ಕಾಂಜಿಪಿಂಜಿಗಳ ಖರೀದಿ

ಶಿವಮೊಗ್ಗ

ಹರಾಜ್

BJP ಬಣಜಿಗರಿಗೆ ಟಿಕೆಟ್ ಪಂಚಮಸಾಲಿಗಳಿಗೆ ಬಕೆಟ್!

ಚುನಾವಣೆ:
ಹಾವೇರಿ, ಬೀದರ್,
ಬೆಳಗಾವಿ, ಕಲಬುರ್ಗಿ



ಅಡ್ನಾಡಿ
ಸುರೇಶ್ ಅಂಗಡಿಯ
ಕನ್ನಡ ದ್ರೋಹ

ಎಲ್ಲಿಗೆ ಪಯಣ ಯಾವುದು ಪಕ್ಷ



ಭಯೋತ್ಪಾದನೆ, ದೇಶಪ್ರೇಮ ಮತ್ತು IPL ಎಂಬ ಉದ್ಯಮ

ಚಾರ್ವಾಕ

ಶಿವಸುಂದರ್

ಕಳೆದ ನವಂಬರ್ 26ರಂದು ಬಾಂಬೆ ಮೇಲೆ ಭಯೋತ್ಪಾದಕರ ದಾಳಿ ನಡೆದಿತ್ತಲ್ಲ, ಆ ದಿನಗಳಲ್ಲಿ ದೇಶಪ್ರೇಮದ ಬಗ್ಗೆ, ಇಡೀ ಭಾರತದ ರಕ್ಷಣೆಯ ಬಗ್ಗೆ ಉದ್ಬುದ್ಧ ಭಾಷಣ ಮಾಡಿದವರು ಯಾರ್‍ಯಾರು ಎಂಬುದು ನೆನಪಿರಬೇಕಲ್ಲವೇ? ಪ್ರೀತಿ ಜಿಂಟಾ ಎಂಬ ಬಾಲಿವುಡ್‌ನ ಆರಬೆಂದ ನಾಯಕಿಮಣಿ ಇದ್ದಕ್ಕಿದ್ದಂತೆ ಮಹಾನ್ ದೇಶಪ್ರೇಮಿಯಾಗಿ ಬದಲಾಗಿ ಪಾಕಿಸ್ತಾನದ ಮೇಲೆ ದಾಳಿ ನಡೆಸಬೇಕೆಂದು ಕರೆ ಕೊಟ್ಟಿದ್ದಳು. ದೇಶದ ರಕ್ಷಣೆಯ ಮುಂದೆ ಮಿಕ್ಕಿದ್ದೆಲ್ಲಾ ಗೌಣ ಎಂದು ಟಿವಿ ಕ್ಯಾಮರಾಗಳ ಮುಂದೆ ಗಂಟೆಗಟ್ಟಲೆ ಭಾಷಣ ಮಾಡಿದ್ದಳು. ದೇಶದ ಮತ್ತೊಬ್ಬ ದೊಡ್ಡ ಉದ್ಯಮಿ ವಿಜಯ್ ಮಲ್ಯ ದೇಶ ರಕ್ಷಣೆ ಮತ್ತು ಭಯೋತ್ಪಾದನೆಯ ವಿರುದ್ಧ ಯುದ್ಧ ಅತ್ಯಂತ ಪ್ರಮುಖವಾದದ್ದು ಎಂಬ ಮುತ್ತುಗಳನ್ನು ಉದುರಿಸಿದ್ದರು. ಭಾರತದ ನಂ.1 ಉದ್ಯಮಿ ಮುಕೇಶ್ ಅಂಬಾನಿ, ಬಾಲಿವುಡ್ ಬಾದ್‌ಷಾ ಶಾರುಕ್ ಖಾನ್, ಕ್ರಿಕೆಟ್ ತಾರೆಯರಾದ ಸಚಿನ್, ಸೌರವ್, ಭಜ್ಜಿ ಎಲ್ಲರೂ ದೇಶ ಅಪಾಯದಲ್ಲಿದೆ, ಅದಕ್ಕಾಗಿ ಜನರು ಯಾವುದೇ ತ್ಯಾಗಕ್ಕೂ ಸಿದ್ಧರಾಗಬೇಕೆಂದೂ, ತಾವೂ ಸಹ ಎಂಥ ತ್ಯಾಗಕ್ಕೂ ಸಿದ್ಧರೆಂದೂ ಉದ್ಬುದ್ಧ ಭಾಷಣ ಮಾಡಿ ದೇಶಪ್ರೇಮ ಮೆರೆದಿದ್ದರು.

ಇದೆಲ್ಲಾ ನಡೆದು ಇನ್ನೂ ನಾಲ್ಕು ತಿಂಗಳು ಸಹ ಕಳೆದಿಲ್ಲ. ಈಗ ಮೇಲೆ ಉಲ್ಲೇಖಿಸಿದ ಮಹಾಜನರೇ ದೇಶಕ್ಕಾಗಿ ಮತ್ತು ದೇಶ ರಕ್ಷಣೆಗಾಗಿ ತಾವು ಉದ್ರಿಯಾಗಿ ಪಡೆದುಕೊಳ್ಳುತ್ತಿರುವ ಲಾಭದ ಒಂದು ಪಾಲನ್ನು ತ್ಯಾಗ ಮಾಡಬೇಕಾಗಿ ಬಂದಕೂಡಲೇ ಪ್ಲೇಟೇ ಬದಲಾಯಿಸುತ್ತಿದ್ದಾರೆ.


ಇದೇ ಏಪ್ರಿಲ್ 10 ರಿಂದ ಮೇ 24ರವರೆಗೆ 45 ದಿನಗಳ ಕಾಲ ಐಪಿಎಲ್ ಪ್ರಾಯೋಜಿತ ಟ್ವೆಂಟಿ-ಟ್ವೆಂಟಿ ಕ್ರಿಕೆಟ್ ಟೂರ್ನಮೆಂಟ್ ನಡೆಯಬೇಕಿದೆ. ಇದರಲ್ಲಿ ದೇಶ-ವಿದೇಶಗಳ 100 ಕ್ರಿಕೆಟ್ ತಾರೆಯರು ಭಾಗವಹಿಸಲಿದ್ದಾರೆ. ಈ ಟೂರ್ನಮೆಂಟಿನ ಟಿವಿ ಪ್ರಸಾರದ ಹಕ್ಕಿನ ಮಾರಾಟ ಒಂದರಿಂದಲೇ ಐಪಿಎಲ್ ಮತ್ತು ಬಿಸಿಸಿಐ ಹಲವು ಸಾವಿರ ಕೋಟಿ ರೂಪಾಯಿಗಳ ಲಾಭ ಮಾಡಿಕೊಳ್ಳಲಿದೆ. ಈ ಟೂರ್ನಮೆಂಟಿನ ತಂಡಗಳನ್ನು ಕೊಂಡುಕೊಂಡಿರುವ ದೇಶದ ವಿವಿಧ ಉದ್ಯಮಿಗಳು ಆಟಗಾರರ ಮತ್ತು ಆಟದ ಪ್ರಾಯೋಜನೆಯನ್ನು ಮಾರಿಕೊಳ್ಳುವುದರಿಂದ ಬರುವ ಸಾವಿರಾರು ಕೋಟಿ ಲಾಭದ ನಿರೀಕ್ಷೆಯಲ್ಲಿ ತಂಡಗಳ ಮೇಲೆ ನೂರಾರು ಕೋಟಿ ರೂಗಳನ್ನು ಹೂಡಿವೆ. ಉದಾಹರಣೆಗೆ ಪ್ರೀತಿ ಜಿಂಟಾ ಮತ್ತು ಕತ್ರೀನಾ ಕೈಫ್ ಎಂಬ ಬಾಲಿವುಡ್ ರಾಣಿಯರು ಪಾಲುದಾರರಾಗಿರುವ ಜೈಪುರ್ ರಾಯಲ್ಸ್ ತಂಡದ ಪ್ರಾಯೋಜಕರು ತಂಡದ ಫ್ರಾಂಚೈಸಿ(ಗುತ್ತಿಗೆ) ಪಡೆದುಕೊಳ್ಳಲು 268 ಕೋಟಿ ರೂ. ತೆತ್ತಿದ್ದಾರೆ. ಭಾರತದ ನಂ.1 ಉದ್ಯಮಿ ಮುಖೇಶ್ ಅಂಬಾನಿ ಮುಂಬೈ ಇಂಡಿಯನ್ಸ್‌ನ ಗುತ್ತಿಗೆ ಕೊಂಡುಕೊಳ್ಳಲು 448 ಕೋಟಿ ರೂ. ಹೂಡಿದ್ದಾನೆ. ಬ್ಯಾಂಗಲೂರ್ ರಾಯಲ್ ಚಾಲೆಂಜರ್ಸ್‌ನ ಒಡೆಯ ವಿಜಯ್ ಮಲ್ಯ ಆ ತಂಡದ ಗುತ್ತಿಗೆ ಪಡೆಯಲು 446 ಕೋಟಿ ರೂಗಳನ್ನು ಹೂಡಿದ್ದಾನೆ. ಹೀಗೆ ಒಟ್ಟು ಎಂಟು ತಂಡಗಳ ಫ್ರಾಂಚೈಸಿಯನ್ನು ಕೊಂಡುಕೊಳ್ಳಲು ದೇಶದ ದೊಡ್ಡ ಉದ್ಯಮಿಗಳು ಮತ್ತು ಸಿನಿಮಾ ಸ್ಟಾರ್‌ಗಳು ಒಟ್ಟು 3000 ಕೋಟಿ ರೂ.ಗಳನ್ನು ಹೂಡಿದ್ದಾರೆ. ಇದಲ್ಲದೆ ಪ್ರತಿಯೊಬ್ಬ ಗುತ್ತಿಗೆದಾರರು ತಮ್ಮ ಆಟಗಾರರನ್ನು ಬಿಡ್‌ನಲ್ಲಿ ಕೊಂಡುಕೊಳ್ಳಲು ಒಟ್ಟು 500 ಕೋಟಿ ರೂಗಳನ್ನು ಹೂಡಿದ್ದಾರೆ. ಅಂದರೆ ಐಪಿಎಲ್ ಟೂರ್ನಮೆಂಟ್ ಎಂಬುದು ಆಟಕ್ಕಿಂತ ಮಿಗಿಲಾಗಿ ಕಡಿಮೆ ರಿಸ್ಕಿನಲ್ಲಿ ಹೆಚ್ಚು ಲಾಭ ಗಳಿಸಬಹುದಾದ ಉದ್ಯಮವೇ ಆಗಿದೆ.



ಈಗ ಈ ಪ್ರಮಾಣದ ಹಣ ಹೂಡಿಕೆಗೆ ಪ್ರತಿಯಾಗಿ ದುಪ್ಪಟ್ಟು ಲಾಭ ಬರಬೇಕೆಂದರೆ ಆಟಗಳು ನಡೆದು ಅದರ ಟಿವಿ ಪ್ರಸಾರ ಆಗಿ ಅದರ ಪ್ರತಿ ಸೆಕೆಂಡಿನ ಜಾಹೀರಾತುಗಳನ್ನು ಮಾರಾಟ ಮಾಡಬೇಕಿದೆ. ಉದಾಹರಣೆಗೆ ಐಪಿಎಲ್‌ನ ಅಧ್ಯಕ್ಷ ಲಲಿತ್ ಮೋದಿ ಈ ಸಾಲಿನ ಟ್ವೆಂಟಿ-ಟ್ವೆಂಟಿ ಸರಣಿಯ ಪ್ರಸಾರದ ಹಕ್ಕನ್ನು ಸೋನಿ ಎಂಟರ್‌ಟೈನ್‌ಮೆಂಟ್ ಟೆಲಿವಿಷನ್‌ಗೆ ಮಾರಿಕೊಂಡು ಕೋಟ್ಯಂತರ ಲಾಭ ಮಾಡಿಕೊಂಡಿದ್ದರು. ಅಲ್ಲದೆ ಅದೇ ಹಕ್ಕನ್ನೇ ವರ್ಲ್ಡ್‌ಟೆಲ್ ಸಂಸ್ಥೆಗೂ ಮರುಗುತ್ತಿಗೆ ನೀಡಿ ಈಗ ಕೋರ್ಟ್‌ನ ಮೆಟ್ಟಿಲೇರಿರುವುದು ಮತ್ತೊಂದು ಕಥೆ. ಅದಿರಲಿ. ಕಳೆದ ಬಾರಿ ಈ ಟಿವಿ ಪ್ರಸಾರದ ಹಕ್ಕನ್ನು ಇಎಸ್‌ಪಿಎನ್ ಚಾನೆಲ್‌ಗೆ 900 ಮಿಲಿಯನ್ ಡಾಲರ್‌ಗೆ ಮಾರಿಕೊಂಡಿದ್ದರು. ಹೀಗಾಗಿ ಐಪಿಎಲ್ ಪಂದ್ಯಾವಳಿ ದೇಶಪ್ರೇಮ, ರೋಚಕತೆ, ಕ್ರಿಕೆಟೆಂಬ ಆಟವಾಗಿ ಮಾತ್ರವಲ್ಲದೆ ದೊಡ್ಡ ಲಾಭವಿರುವ ಉದ್ಯಮವಾಗಿಯೂ ಬೆಳೆದಿದೆ. ರಾಜಕಾರಣವನ್ನು ಆಡಿಸುವುದೇ ಈ ಉದ್ಯಮಿಗಳಾದ್ದರಿಂದ ಈಗ ರಾಜಕಾರಣವನ್ನೂ, ಕ್ರಿಕೆಟ್ಟನ್ನೂ ಹಿಡಿತದಲ್ಲಿಟ್ಟುಕೊಂಡಿರುವ ಈ ಉದ್ಯಮಿಗಳ ಆಸಕ್ತಿಯನ್ನೆ ದೇಶದ ಮತ್ತು ಜನತೆಯ ಆಸಕ್ತಿಗಳಿಗಿಂತ ಪ್ರಧಾನ ಮಾಡಿಕೊಳ್ಳಬೇಕಿದೆ.

ಈ ಸಾಲಿನ ಟ್ವೆಂಟಿ-ಟ್ವೆಂಟಿ ಪಂದ್ಯಾವಳಿ ನಡೆಸುವ ಹೊತ್ತಿಗೆ ಉದ್ಯಮಿಗಳ ಈ ಲಾಭಾಸಕ್ತಿ ಮತ್ತು ದೇಶದ ಹಾಗೂ ಜನತೆಯ ರಕ್ಷಣೆಯ ವಿಷಯ ಪರಸ್ಪರ ಎದುರಾಗಿದೆ. ಈ ಪಂದ್ಯಾವಳಿಯ ವೇಳಾಪಟ್ಟಿ ಏಪ್ರಿಲ್10ರಿಂದ ಮೇ24. ಆದರೆ ಅದೇ ಸಮಯದಲ್ಲಿ ಭಾರತದ 14ನೇ ಲೋಕಸಭೆಗೆ ಮಹಾಚುನಾವಣೆಯ ವೇಳಾಪಟ್ಟಿಯೂ ಘೋಷಿತವಾಗಿದೆ. ಅದು ಏಪ್ರಿಲ್10ರಿಂದ ಪ್ರಾರಂಭವಾಗಿ ಆರು ಹಂತಗಳಲ್ಲಿ ಮೇ 12 ರ ತನಕ ನಡೆಯಲಿದೆ. ನವೆಂಬರ್‌ನಲ್ಲಿ ಮುಂಬೈ ಮೇಲೆ ದಾಳಿ ನಡೆದು, ಕಳೆದ ಫೆಬ್ರವರಿಯಲ್ಲಿ ಪಾಕಿಸ್ತಾನದಲ್ಲಿ ಶ್ರೀಲಂಕಾದ ಕ್ರಿಕೆಟ್ ಆಟಗಾರರ ಮೇಲೂ ದಾಳಿ ನಡೆದ ನಂತರ ಕ್ರಿಕೆಟ್ ಮತ್ತು ಕ್ರಿಕೆಟ್ ಆಟಗಾರರು ಸಹ ಭಯೋತ್ಪಾದಕರ ದಾಳಿಗೆ ತುತ್ತಾಗಬಲ್ಲರೆಂಬುದು ಆತಂಕ ಹುಟ್ಟಿಸಿದೆ. ಹೀಗಾಗಿ ಕ್ರಿಕೆಟ್ ಆಟಗಾರರ, ಆಟ ನಡೆಯುವ ಸ್ಟೇಡಿಯಂಗಳಲ್ಲಿ ಆಟ ನೋಡಲು ಬರುವ ಜನತೆಯ ರಕ್ಷಣೆಯ ವಿಷಯ ಗಂಭೀರವಾದ ವಿಷಯವಾಗಿ ಪರಿಣಮಿಸಿದೆ. ಆದ್ದರಿಂದ ಸೂಕ್ತ ರಕ್ಷಣೆಯ ವ್ಯವಸ್ಥೆಯಾಗದೆ ಇಂಥ ಪಂದ್ಯಾವಳಿಗೆ ಅವಕಾಶ ಕೊಡುವುದು ಅಪಾಯಕ್ಕೆ ಆಹ್ವಾನ ಕೊಟ್ಟಂತೆ. ಅದರಲ್ಲೂ ಈಗ ಚುನಾವಣೆಯು ಘೋಷಣೆಯಾಗಿ ಎಲ್ಲಾ ಪಕ್ಷಗಳು ಪ್ರಚಾರ, ಸಭೆಗಳಲ್ಲಿ ತೊಡಗಿಕೊಳ್ಳುವ ಸಮಯ. ಇಂಥ ಸಂದರ್ಭ ಭಯೋತ್ಪಾದನಾ ದಾಳಿಗೂ ಅನುಕೂಲಕರ.

ಅಂದರೆ ಏಕಕಾಲದಲ್ಲಿ ಕ್ರಿಕೆಟ್ ಪಂದ್ಯಾವಳಿಗೂ, ಚುನಾವಣೆಗೂ ರಕ್ಷಣೆ ಕೊಡಲು ಸಾಧ್ಯವಿಲ್ಲ ಎಂದಾದಾಗ ಯಾವುದು ಮುಖ್ಯವಾಗಬೇಕು? ಯಾವುದೇ ದೇಶಭಕ್ತ ಜವಾಬ್ದಾರಿಯುತ ನಾಗರಿಕನ ಆಯ್ಕೆ ಚುನಾವಣೆಯನ್ನು ನಿರಾತಂಕವಾಗಿ ನಡೆಸುವುದೇ ಆಗಿರುತ್ತದೆ ಹೊರತು ಕ್ರಿಕೆಟ್ಟಲ್ಲ. ಏಕೆಂದರೆ ಚುನಾವಣೆ 116 ಕೋಟಿ ಭಾರತೀಯರ ಬದುಕಿನ ಗತಿಯನ್ನು ಪ್ರಭಾವಿಸುತ್ತದೆ. ಟ್ವೆಂಟಿ-ಟ್ವೆಂಟಿ ಕೇವಲ ಎಂಟು ಉದ್ಯಮಿಗಳ ಲಾಭದ ಪ್ರಮಾಣವನ್ನಷ್ಟೇ ಪ್ರಭಾವಿಸುತ್ತದೆ.



ಆದರೆ ಈ ದೇಶದ ಪ್ರಜಾಪ್ರಭುತ್ವದ ಅಸಲಿ ಸ್ವರೂಪವೇನೆಂದರೆ, ಎಷ್ಟೇ ದೊಡ್ಡ ಪ್ರಜಾಪ್ರಭುತ್ವ ನಮ್ಮದು ಎಂದು ಬೊಬ್ಬೆ ಹೊಡೆದುಕೊಂಡರೂ ಈ ದೇಶದ ರಾಜಕಾರಣವನ್ನು ನಿಯಂತ್ರಿಸುತ್ತಿರುವುದು 116 ಕೋಟಿ ಜನರ ಮತಗಳಲ್ಲ, ಈ ಎಂಟು ಹತ್ತು ಉದ್ಯಮಿಗಳ ಹಣದ ಥೈಲಿಗಳು. ಹೀಗಾಗಿಯೇ ಪ್ರಾರಂಭದಲ್ಲಿ ಐಪಿಎಲ್ ಪಂದ್ಯಾವಳಿಗೆ ಬಿಲ್‌ಕುಲ್ ರಕ್ಷಣೆ ಕೊಡಲು ಸಾಧ್ಯವಿಲ್ಲ ಎಂದು ಕೂಗಾಡಿದ್ದ ಕೇಂದ್ರ ಸರ್ಕಾರ ಈಗ ದೇಶದ ಜನತೆಯ ರಕ್ಷಣೆಯ ಜೊತೆ ರಾಜಿ ಮಾಡಿಕೊಂಡು ಉದ್ಯಮಿಗಳ ಲಾಭದ ರಕ್ಷಣೆ ಮಾಡಲು ತೀರ್ಮಾನಿಸಿದೆ. ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಐಪಿಎಲ್ ಪಂದ್ಯಾವಳಿಗೆ ಅನುಮತಿ ನೀಡಿದೆ. ಇದು ಈ ದೇಶದ ಉದ್ಯಮಪತಿಗಳ ಆಸಕ್ತಿಯ ಮುಂದೆ ಜನತೆಯ ರಕ್ಷಣೆ, ದೇಶಪ್ರೇಮ ಇತ್ಯಾದಿಗಳೆಲ್ಲವೂ ಹುಸಿ ಎಂಬುದನ್ನು ರುಜುವಾತು ಮಾಡಿದೆ. ಅಷ್ಟು ಮಾತ್ರವಲ್ಲ, ಮುಂಬೈ ದಾಳಿ ಸಂದರ್ಭದಲ್ಲಿ ದೇಶದ ರಕ್ಷಣೆಯ ಮುಂದೆ ಮಿಕ್ಕಿದ್ದೆಲ್ಲಾ ಗೌಣ ಎಂದೂ, ಮುಂಬೈಯನ್ನು ಭಯೋತ್ಪಾದಕರ ದಾಳಿಯಿಂದ ರಕ್ಷಿಸಿದ ಯೋಧರು ಎಂಥ ಹೀನಾಯ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದೂ ಪುಗಸಟ್ಟೆ ಭಾಷಣ ಮಾಡಿದ ಅಂಬಾನಿಗಳು, ಪ್ರೀತಿ ಜಿಂಟಾಗಳು ಈಗ ಅದೇ ಯೋಧರಿಗೆ ಎರಡೆರಡು ಕಡೆ ರಕ್ಷಣೆ ಒದಗಿಸುವುದರಿಂದ ಉಂಟಾಗುವ ಒತ್ತಡದ ಬಗ್ಗೆ ಮತ್ತು ಕೇವಲ ತಮ್ಮ ಲಾಭದ ಹಿತಾಸಕ್ತಿಗಾಗಿ ಅವರನ್ನು ಸಾವಿನ ದವಡೆಗೆ ದೂಡುತ್ತಿರುವುದರ ಬಗ್ಗೆ ಚಕಾರ ಎತ್ತುತ್ತಿಲ್ಲ.

ಹೀಗಾಗಿ ಇವರು ದೇಶರಕ್ಷಣೆಯ ಬಗ್ಗೆ ಮಾತನಾಡಿದರೆ ದೇಶದ ಭೂಪಟದ ರಕ್ಷಣೆಯೇ ವಿನಃ ದೇಶದ ಜನರ ರಕ್ಷಣೆಯಲ್ಲ. ದೇಶಪ್ರೇಮದ ಬಗ್ಗೆ ಮಾತನಾಡಿದರೆ ಅದು ಒದಗಿಸುವ ಮಾರುಕಟ್ಟೆಯ ಬಗೆಗಿನ ಪ್ರೇಮ. ಆದ್ದರಿಂದ ದೇಶಭಕ್ತಿ ಎಂಬ ಅವರ ಮಾತು ದೊಡ್ಡರಾಜಕೀಯ ಕುತಂತ್ರವಷ್ಟೇ. ■

No Comments

"ಕಳೆದ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದ 543 ಪ್ರತಿನಿಧಿಗಳಲ್ಲಿ 219 ಪ್ರತಿನಿಧಿಗಳು ಮಾತ್ರ ಚಲಾವಣೆಗೊಂಡ ಮತಗಳಲ್ಲಿ ಶೇ. 50ಕ್ಕಿಂತ ಜಾಸ್ತಿ ಮತ ಪಡೆದಿದ್ದರು. ಉಳಿದ 314 ಪ್ರತಿನಿಧಿಗಳು ಸಾರಾಂಶದಲ್ಲಿ ಬಹುಸಂಖ್ಯಾತ ಮತದಾರರ ಪ್ರತಿನಿಧಿಗಳಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ."

-ಚುನಾವಣಾ ಆಯೋಗ



"ಈ ಚುನಾವಣೆಯಲ್ಲಿ ಯಾರೂ ಅಸ್ಪೃಶ್ಯರಲ್ಲ, ಶಿವಸೇನಾ ಸಹ."

-ಶರದ್ ಪವಾರ್



"ಲಂಚ ತೆಗೆದುಕೊಳ್ಳುವಾಗ ಸಿಕ್ಕಿಬಿದ್ದ ಇನ್ಸ್‌ಪೆಕ್ಟರ್ ಮುದವಿ ಅಮಾನತ್ತಿಗೆ ಅರ್ಹನಲ್ಲ ಎಂದಾದರೆ ಭ್ರಷ್ಟಾಚಾರವನ್ನು ಸಕ್ರಮಗೊಳಿಸಿ ಬಿಡುವುದು ಉತ್ತಮ."

-ಸಂತೋಷ್ ಹೆಗ್ಡೆ

"ಮಹಿಳೆಯರನ್ನು ಗೃಹ ಬಳಕೆ ವಸ್ತುಗಳೆಂಬಂತೆ ಕಾಣಲಾಗುತ್ತಿದೆಯೇ ಹೊರತು ಆಕೆಗೆ ಯಾವ ಗೌರವವೂ ಸಿಗುತ್ತಿಲ್ಲ."

-ಕಿರಣ್ ಬೇಡಿ

"ಪ್ರಧಾನಿಯಾಗುವವರಿಗೆ ಬೌದ್ಧಿಕ ಪ್ರಾಮಾಣಿಕತೆ ಬೇಕು. ದೇಶವನ್ನು ಮುನ್ನಡೆಸುವ ಸಾಮರ್ಥ್ಯ ನರೇಂದ್ರ ಮೋದಿಗಿದೆ ಎಂದು ನಾನು ಭಾವಿಸುವುದಿಲ್ಲ."

-ರೂಸಿ ಮೋದಿ, ಉದ್ಯಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಕನ್ನಡ ಚಲನಚಿತ್ರದ ಅಮೃತ ಮಹೋತ್ಸವದಲ್ಲಿ ಅಮೃತ ಮಾತ್ರ ಇರಲಿಲ್ಲ."

-ಶಿವರಾಂ, ನಟ

"ಈ ಬಾರಿ ಮಾಯಾವತಿ ಪ್ರಧಾನಿಯಾಗುವುದನ್ನು ತಡೆಯುವುದು ಯಾರಿಂದಲೂ ಸಾಧ್ಯವಿಲ್ಲ."

-ಮಾರಸಂದ್ರ ಮುನಿಯಪ್ಪ, ಬಿಎಸ್ಪಿ ನಾಯಕ

"ಕೇರಳ ಗೃಹಿಣಿಯರಿಗೆ ವೇತನ ಕೊಡಬೇಕೆಂದು ಆಗ್ರಹಿಸುವ ಕೇರಳ ಗೃಹಿಣಿಯರ ಟ್ರೇಡ್ ಯೂನಿಯನ್ ಕಟ್ಟಲು ಮುಂದಾಗಿದೆ."

-ಪತ್ರಿಕಾ ವರದಿ

"ನಾವು ಎಡಪಕ್ಷಗಳ ಹಳೆಯ ಸ್ನೇಹಿತರು. ನಮ್ಮ ದೃಷ್ಟಿಕೋನಗಳೂ ಸಹ ಒಂದೇ ತರಹದ್ದು."

-ಶರದ್ ಯಾದವ್, ಜೆಡಿಯು ಪಕ್ಷದ ರಾಷ್ಟ್ರೀಯ ನಾಯಕ

ನಗರದ ಬಡವರು ಎಲ್ಲಿಗೆ ವಲಸೆ ಹೋಗಬೇಕು?

"ಜನತೆಯ ಬಡತನ ಹೋಗಲಾಡಿಸಬೇಕೆಂದರೆ ಜನರು ಹಳ್ಳಿಯಿಂದ ನಗರಕ್ಕೆ ವಲಸೆ ಹೋಗುವುದನ್ನು ಪ್ರೋತ್ಸಾಹಿಸಬೇಕು."

-ವಿಶ್ವ ಬ್ಯಾಂಕಿನ *2009*ರ ಅಭಿವೃದ್ಧಿ ವರದಿ

ವೋಟು ಇದ್ದರೆ ಹೋಗುತ್ತಿದ್ದಿರಾ?

"ಎರಡು ಗೊಡ್ಡೆಮ್ಮೆ, ಗೊಡ್ಡು ದನ ಕಟ್ಟಿಕೊಂಡು ಫೋಟೋಗೆ ಪೋಜು ಕೊಡೋ ಅವರ ಬಳಿ ವೋಟೂ ಇಲ್ಲ, ಪಾಟೂ ಇಲ್ಲ, ಅವರು ಬಿಜೆಪಿ ಸ್ವಾಮಿ."

-ಬಂಗಾರಪ್ಪ

ವೇದನೆ, ಸಂವೇದನೆ ಇರದ ಬರಹ ಬರಹವಾದೀತೆ?

"ಸಾಹಿತ್ಯದಲ್ಲಿ ಸ್ತ್ರೀ, ಮುಸ್ಲಿಂ, ದಲಿತ ಸಂವೇದನೆ ಅಂತಿಲ್ಲ, ಸಂವೇದನೆ ಅಂತಿದ್ರೆ ಅದು ಕನ್ನಡದ ಸಂವೇದನೆ ಮಾತ್ರ. ಇಲ್ಲಿ ಎಲ್ಲರೂ ಒಂದೇ. ಬರಹ, ಬರಹವಾಗಿಯೇ ನೋಡಬೇಕೇ ವಿನಃ ಕಂದಕ ಸೃಷ್ಟಿಸಬಾರದು."

-ಅಬ್ದುಲ್ ರಷೀದ್, ಲೇಖಕ

ಸನಾತನ ನವೋದಯ ವಾದ!

"ದಲಿತ, ಮುಸ್ಲಿಂ, ಮಹಿಳಾ ಸಾಹಿತಿಗಳು ತಮ್ಮ ಸಂವೇದನೆ ಇಟ್ಟುಕೊಂಡು ಸಾಹಿತ್ಯ ರಚಿಸುವಂತೆ ಒತ್ತಾಯಿಸುತ್ತಿರುವುದು ಕನ್ನಡ ಸಾಹಿತ್ಯದಲ್ಲಿ ಅನಾರೋಗ್ಯಕರ ಬೆಳವಣಿಗೆ."

-ಗಿರಡ್ಡಿ ಗೋವಿಂದರಾಜ್

ತನ್ನವರಿಗೇ ಲಂಚಕೊಡುವ ಪಕ್ಷ

"ಅಣು ಒಪ್ಪಂದದ ಸಂದರ್ಭದಲ್ಲಿ ಬಸನಗೌಡ ಪಾಟೀಲ್ ಯತ್ನಾಳರು ತಾವು ಪ್ರತಿನಿಧಿಸುವ ಬಿಜೆಪಿ ಪಕ್ಷದಿಂದಲೇ 2 ಕೋಟಿ ರೂ. ಲಂಚ ಪಡೆದಿದ್ದರು."


-ವಿಠಲ್ ಕಟಕಗೊಂಡ, ಬಿಜೆಪಿ ಶಾಸಕ

ಹೊಟ್ಟೆಗೆ ಹಿಟ್ಟು ಕೊಡದವರು, ಕಿವಿಗೆ ಹೂವು ಮತ್ತು ಮೊಬೈಲ್ ಮುಡಿಸುತ್ತಾರೆ!

"ಬಿಜೆಪಿ ಅಧಿಕಾರಕ್ಕೆ ಬಂದರೆ ಬಡವರಿಗೆ ಉಚಿತವಾಗಿ ಮೊಬೈಲ್ ಫೋನ್ ಕೊಡುತ್ತೇವೆ."

-ಬಿಜೆಪಿ ಪ್ರಣಾಳಿಕೆ

ಇವರು ನಮ್ಮ ಸಾಂಸ್ಕೃತಿಕ ನಾಯಕರು!



"ಕನ್ನಡ ಮಾತನಾಡಲು ಬರದವರಿಗೆ ರೇಷನ್ ಕಾರ್ಡ್ ಕಟ್ ಮಾಡಿ, ಕುಡಿಯೋ ನೀರು ಕೊಡಬೇಡಿ, ಮನೆ ಬಾಡಿಗೆ ಕೊಡಬೇಡಿ..."

- ವಿಷ್ಣುವರ್ಧನ್

ಚಿಂತಕರ ಚಾವಡಿ

"ಫ್ಯಾಷನ್ನಿನ ಜಾಗತೀಕರಣದಿಂದಾಗಿ ಇಂದು ನಾವು ಎರಡು ಬಗೆಯ ಬೆಳವಣಿಗೆಗಳನ್ನು ಕಾಣುತ್ತಿದ್ದೇವೆ. ಒಂದನೆಯದು, ಈಗಾಗಲೇ ಪ್ರಚಲಿತದಲ್ಲಿರುವ ಸಿದ್ಧಮಾದರಿಗಳ ರೀತಿಯಲ್ಲೇ ಎಲ್ಲರೂ ಕಾಣಲು ಪ್ರಯತ್ನಿಸುತ್ತಿರುವುದರಿಂದ ವೈವಿಧ್ಯತೆಗಳು ತೀವ್ರಗತಿಯಲ್ಲಿ ಕಡಿಮೆಯಾಗುತ್ತಿವೆ. ಇದಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿರುವ ಮತ್ತೊಂದು ಬೆಳವಣಿಗೆಯೆಂದರೆ ಸಿದ್ಧ ಮಾದರಿಗಿಂತ ಭಿನ್ನವಾಗಿ ಕಾಣುವವರೆಲ್ಲರನ್ನೂ ಉದ್ದೇಶಪೂರ್ವಕವಾಗಿ ವಿಚಿತ್ರವೆಂಬಂತಲೋ ಅಥವಾ ಹಾಸ್ಯದ ವಸ್ತುವೆಂಬಂತಲೋ ಚಿತ್ರಿಸುತ್ತಿರುವುದು. ಈ ತಮಾಷೆಯ ವಸ್ತುವಾಗಿ ಕಾಣುವ ಜನರೇ ಜಾಹೀರಾತು ಉದ್ಯಮದಲ್ಲಿ ಕಾಣಿಸಿಕೊಳ್ಳುವ 'ನಿಜವಾದ' ಜನರು. ಇದು ಪರಿಣಾಮದಲ್ಲಿ ಈಗಾಗಲೇ ಇರುವ ಮಾರುಕಟ್ಟೆ ಪ್ರಣೀತ ಸಿದ್ಧಮಾದರಿಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ."

- ಸಂತೋಷ್ ದೇಸಾಯಿ, ಮಾಧ್ಯಮ ವಿಶ್ಲೇಷಕ

ಜನರಿಗೆ ಹೆದರುತ್ತಿರುವ ವಿಧಾನಸೌಧ



ಕಂಡಹಾಗೆ

■ ಗೌರಿ ಲಂಕೇಶ್

ಹೊಸ ಚುನಾವಣೆಗಳು ಎದುರಾಗಿರುವ ಈ ...ರ್ಷದಲ್ಲಿ ಅತಿದೊಡ್ಡ ಪ್ರಜಾಪ್ರಭುತ್ವವಾದ ಈ ... ಎಷ್ಟರಮಟ್ಟಿಗೆ ಜನಪರವಾಗಿದೆ? ಈ ಪ್ರಶ್ನೆಗೆ ...ವನ್ನು ಕಳೆದ ನಾಲ್ಕು ...ಗಳಲ್ಲಿ ನಮ್ಮ ...ನಸೌಧ ಮತ್ತು ಅದರ ...ಯ ಆಗಿರುವ ...ಾವಣೆಗಳೇ ...ುತ್ತವೆ ಅನ್ನಿಸುತ್ತದೆ. ...ನನಗಿನ್ನೂ ನೆನಪಿದೆ. ...ಗ ಎಂಟೋ, ...ಿ ವರ್ಷ ...ಸ್ಸಿದ್ದಿರಬೇಕು. ...ನೂರಿನಿಂದ ಬಂದಿದ್ದ ...ಮುತ್ತಜ್ಜಿ ಚೆನ್ನವಜ್ಜಿಯನ್ನು ಒಂದು ಭಾನುವಾರ ...ನಸೌಧ ತೋರಿಸಲು ಕರೆದುಕೊಂಡು ಹೋಗಿದ್ದೆವು. ...ಹೊತ್ತು ವಿಧಾನಸೌಧದ ಎದುರಿನ ಹುಲ್ಲು ಹಾಸಿನ ... ಕೂತು, ಕಳ್ಳೆಪುರಿ ಇತ್ಯಾದಿಗಳನ್ನು ತಿನ್ನುತ್ತಾ ಕತ್ತಲಾಗು...ಾಗಿ ನಾವೆಲ್ಲ ಕಾಯುತ್ತಿದ್ದೆವು. ಕತ್ತಲಾಗುತ್ತಿದ್ದಂತೆ ...ನಸೌಧನ ದೀಪಗಳೆಲ್ಲ ಹತ್ತಿಕೊಂಡು ಜಗಮಗಿಸಲಾ...ಸಿದಾಗ ಯಾವುದೋ ಅದ್ಭುತ ದೃಶ್ಯವನ್ನು ನೋಡಿ...ಂತೆ ಜನರಿಂದ ಕರತಾಡನ. ಚೆನ್ನವಜ್ಜಿಗಂತೂ ...ಅಲಂಕೃತವಾದ ವಿಧಾನಸೌಧವನ್ನು ನೋಡಿ ರಾಜರ ...ಬನೆಯನ್ನೇ ಕಣ್ಣಾರೆ ಕಂಡಷ್ಟು ಸಂಭ್ರಮ.



...ಸ್ವಲ್ಪ ಹೊತ್ತಿನ ನಂತರ ನಾವೆಲ್ಲ ವಿಧಾನಸೌಧದ ...ಲುಗಳನ್ನೇರಿ ಆ ಕಟ್ಟಡವನ್ನು ಪ್ರವೇಶಿಸಿ ಅದರೊಳ...ಪ ಗಂಧದ ಬಾಗಿಲನ್ನು ಇತರೆ ಅಲಂಕಾರಗಳನ್ನು ...ಿ ಆನಂದಿಸಿದ್ದೆವು. ಹಾಗೆಯೇ ಮೂರನೆ ಮಹಡಿಗೆ ...ಗಲು ಲಿಫ್ಟ್ ಮುಂದೆ ಇತರರೊಂದಿಗೆ ಸಾಲುಗಟ್ಟಿ...ವು. ಚೆನ್ನವಜ್ಜಿಗೆ ಅದೇ ಮೊದಲನೆ ಲಿಫ್ಟ್ ಅನುಭವ. ಮೇಲಕ್ಕೇರಲಾರಂಭಿಸಿದಾಗ ಅದೆಲ್ಲ ಅಕಸ್ಮಾತ್ ಬಿದ್ದು ಹೋಗುತ್ತದೋ ಎಂಬ ಆತಂಕದಲ್ಲಿ ಆಕೆ ನನ್ನ ಅಮ್ಮನ ಕೈಯನ್ನು ಬಿಗಿಯಾಗಿ ಹಿಡಿದಿದ್ದರು. ಕೆಲವೇ ಕ್ಷಣಗಳಲ್ಲಿ ಆ ಪುಟ್ಟ ಡಬ್ಬ ನಮ್ಮನ್ನೆಲ್ಲ ಮೂರನೆ ಮಹಡಿಗೆ ತಲುಪಿಸಿದಾಗ ಚೆನ್ನವಜ್ಜಿಗೆ ಅಚ್ಚರಿ!

ಇಲ್ಲಿ ನಮ್ಮ ಚೆನ್ನವಜ್ಜಿ ಬಗ್ಗೆ ಸ್ವಲ್ಪ ಹೇಳಬೇಕು. ಗ್ರಾಮೀಣ ರೈತಾಪಿ ಮಹಿಳೆಯಾಗಿದ್ದ ಚೆನ್ನವಜ್ಜಿ ತನ್ನ ಇಡೀ ಬದುಕನ್ನು ಕಳೆದದ್ದು ಇಳ್ಕಲ್ ಸೀರೆಗಳಲ್ಲಿ. ಬೆಳ್ಳಗೆ, ಎತ್ತರಕ್ಕೆ ಇದ್ದ ಬೆಕ್ಕಿನ ಕಣ್ಣಿನ ಆಕೆ ತೊಡುತ್ತಿದ್ದ ಕುಪ್ಪಸ ಹೇಗಿರುತ್ತಿತ್ತು ಗೊತ್ತಾ? ಆ ಕುಪ್ಪಸಕ್ಕೆ ಗುಂಡಿಗಳೇ ಇರುತ್ತಿರಲಿಲ್ಲ. ಬದಲಾಗಿ 'ಬಾಬಿ' ಚಿತ್ರದಲ್ಲಿ ಡಿಂಪಲ್ ಕಪಾಡಿಯಾ ಧರಿಸಿ ಫೇಮಸ್ ಮಾಡಿದ ಬ್ಲೌಸ್ ಅನ್ನು ಹೋಲುತ್ತಿತ್ತು. ಅಂದರೆ ಬಾಬಿಯಂತೆಯೇ ಚೆನ್ನವಜ್ಜಿ ಕೂಡ ತನ್ನ ಕುಪ್ಪಸವನ್ನು ಎದೆಯ ಮೇಲೆ ಎಳೆದು ಕೊಂಡು ಗಂಟು ಹಾಕಿಕೊಳ್ಳುತ್ತಿದ್ದಳು. ಇಂತಹ ನಮ್ಮ ಚೆನ್ನವಜ್ಜಿ 70 ರ ದಶಕದಲ್ಲಿ ಯಾರ ಅಡತಡೆಯೂ ಇಲ್ಲದೆ, ಯಾರ ಅನುಮತಿಯ ಅವಶ್ಯಕತೆಯೂ ಇಲ್ಲದೆ ವಿಧಾನಸೌಧವನ್ನು ಪ್ರವೇಶಿಸಬಹುದಿತ್ತು. ಆದರೆ ಇವತ್ತು ಚೆನ್ನವಜ್ಜಿಯಂತಹ ಮಹಿಳೆಯರಿಗೆ ಅದೇ ವಿಧಾನಸೌಧದ ಬಾಗಿಲುಗಳು ಮುಚ್ಚಿ ಕೊಂಡಿದೆ.



ಎಂಭತ್ತರ ದಶಕದಲ್ಲೂ ವಿಧಾನಸೌಧದ ಎದುರಿನ ಗೋಪಾಲಗೌಡ ವೃತ್ತದಲ್ಲಿ ಹಲವಾರು ಪ್ರತಿಭಟನೆಗಳು ನಡೆಯುತ್ತಿದ್ದವು. ಅದೆಷ್ಟೋ ಸಂಘಟನೆಗಳು ಆ ವೃತ್ತದ ಹತ್ತಿರ ಬಿಡಾರಗಳನ್ನೇ ಹೂಡಿ ವಿಧಾನಸೌಧದಲ್ಲಿದ್ದ 'ಜನ ನಾಯಕರು' ತಮ್ಮ ಮುಂದೆ ಪ್ರತ್ಯಕ್ಷವಾಗಿ ತನ್ನ ಅಹವಾಲನ್ನು ಕೇಳುವವರೆಗೆ ವಾರಗಟ್ಟಲೆ ಅಲ್ಲೇ ಮೊಕ್ಕಾಂ ಹೂಡುತ್ತಿದ್ದರು.

ಆದರೆ ವರ್ಷಗಳು ಉರುಳಿದಂತೆ, ಹೊಸ ಸರ್ಕಾರಗಳು ಅಸ್ತಿತ್ವಕ್ಕೆ ಬರುತ್ತಿದ್ದಂತೆ ಅವೆಲ್ಲ ಎಷ್ಟು ಜನವಿರೋಧಿಗಳಾಗುತ್ತಾ ಹೋದವೆಂದರೆ ಸಹಜವಾಗಿಯೇ ಗೋಪಾಲಗೌಡ ವೃತ್ತದಲ್ಲಿ ಪ್ರತಿಭಟನಾಕಾರರ ಸಂಖ್ಯೆ ಹೆಚ್ಚಾಗುತ್ತಲೇ ಹೋಯಿತು. ಅಷ್ಟೊತ್ತಿಗಾಗಲೇ ವಿಧಾನಸೌಧದ ದ್ವಾರದಲ್ಲಿ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಕೆತ್ತಿಸಲಾಗಿತ್ತಾದ್ದರಿಂದ ಅದರೊಳಗಿದ್ದ ಜನನಾಯಕರು ತಾವೇ ದೇವರುಗಳೆಂದು ಭ್ರಮಿಸಲಾರಂಭಿಸಿದರು. ಆ ದೇವಮಾನವರಿಗೆ ತಮ್ಮ ವಿರುದ್ಧ ಪ್ರತಿಭಟಿಸುತ್ತಿದ್ದ ಹುಲುಮಾನವರನ್ನು ಕಂಡು ರೇಗಿ ಹೋಯಿತು. ಆಗ ಅವರು "ಸರ್ಕಾರದ ವಿರುದ್ಧ ಹೀಗೆ ಎಲ್ಲರ ಕಣ್ಣಿಗೆ ಕಾಣಿಸುವಂತೆ ಪ್ರತಿಭಟಿಸುವುದು ಸರಿಯಲ್ಲ" ಎಂದು ಹೇಳಿ ಒಂದು ಆದೇಶವನ್ನು ಹೊರಡಿಸಿದರು. ಅದರ ಪ್ರಕಾರ ಗೋಪಾಲಗೌಡ ವೃತ್ತದಲ್ಲಿ ಪ್ರತಿಭಟನೆಗಳನ್ನು ನಿಷೇಧಿಸಲಾಯಿತು. ಮಾತ್ರವಲ್ಲ, ಸಾಮಾನ್ಯ ಜನರ ಪ್ರತಿಭಟನೆಗಳು ತಮ್ಮ ಕಣ್ಣಿಗೆ ಬೀಳದಂತಹ, ಕಿವಿಗೆ ಕೇಳಿಸದಂತಹ ಸ್ಥಳಗಳಲ್ಲಿ ಮಾತ್ರ ನಡೆಯಬಹುದು ಎಂದು ಆದೇಶಿಸಿದರು. ಅಷ್ಟರ ಮಟ್ಟಿಗೆ ವಿಧಾನಸೌಧವು ಜನರಿಂದ ದೂರವಾಯಿತು. ಆನಂತರದ ದಿನಗಳಲ್ಲಿ ಪ್ರತಿಭಟನೆಗಳನ್ನು ಕೆ.ಆರ್. ಸರ್ಕಲ್‌ಗೆ ಸ್ಥಳಾಂತರಿಸಲಾಯಿತು. ಆದರೆ ಕೆಲ ದಿನಗಳಲ್ಲಿ ಅಲ್ಲೂ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಎಂದು ಹೇಳಿ ಮೈಸೂರ್ ಬ್ಯಾಂಕ್ ಸರ್ಕಲ್ ತನಕ ದೂಡಲಾಯಿತು. ಆಮೇಲೆ ಅಲ್ಲಿಂದ ಬನಪ್ಪ ಪಾರ್ಕ್‌ಗೆ ಸೀಮಿತಗೊಳಿಸಲಾಯಿತು. ಇತ್ತೀಚೆಗೆ ವಿಧಾನಸೌಧದಿಂದ ಇನ್ನೂ ದೂರವಿರುವ ಟೌನ್‌ಹಾಲ್ ಈಗ ಪ್ರತಿಭಟನಾಕಾರರ ಸ್ಥಳವಾಗಿದೆ. ಅಲ್ಲೂ ಪ್ರತಿಭಟನೆ ನಡೆಸಲು ಅನುಮತಿ ಸಿಗುವುದೂ ಇತ್ತೀಚೆಗೆ ಕಷ್ಟವಾಗುತ್ತಿದೆ.

ಈ ಮಧ್ಯೆ ಪ್ರತಿಭಟನೆಗಳೂ ಒಂದು ಶೋಕೇಸ್ ಪ್ರಕ್ರಿಯೆ ಎಂಬಂತೆ ಹಳೆ ಜೈಲಿದ್ದ ಜಾಗೆಯಲ್ಲಿ ಅವುಗಳನ್ನು ನಡೆಸಬಹುದು ಎಂಬ ಹಾಸ್ಯಾಸ್ಪದ ಆಲೋಚನೆಯೂ ಸರ್ಕಾರಕ್ಕೆ ಇತ್ತು. ಈಗ ಆ ಶೋಕೇಸ್ ಜಾಗೆಯನ್ನು ನಿರಾಕರಿಸಲಾಗಿದೆ!

ಇಲ್ಲಿ ಇನ್ನೊಂದು ಕಾಕತಾಳೀಯ ಬೆಳವಣಿಗೆಯನ್ನು ಕಾಣಿಸಲೇಬೇಕು. ಅದೇನೆಂದರೆ 1996 ರಲ್ಲಿ ಪ್ರತಿಭಟನಾಕಾರರನ್ನು ಕೆ.ಆರ್. ಸರ್ಕಲ್‌ನಿಂದ ಎತ್ತಂಗಡಿ ಮಾಡಲಾಯಿತಲ್ಲದೆ, ಅದೇ ವರ್ಷ ವಿಧಾನಸೌಧದ ಬಾಂಕ್ವೆಟ್ ಹಾಲ್


▶▶▶12

HKE ಚುನಾವಣೆ: ಗೆಲ್ಲುವ ಉಮೇದಿನಲ್ಲಿ ಹೆಗ್ಗಣಗಳು

'ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ' ತನ್ನ ...ರ್ಣ ಮಹೋತ್ಸವ ಸಂಭ್ರಮದ ಹೊಸ್ತಿಲಲ್ಲಿ ನಿಂತಿದೆ. ...ಪವು 1956, ನವೆಂಬರ್ 1 ರಂದು ವಿಶಾಲ ...ರ್ನಾಟಕದ ಭಾಗವಾದೊಡನೆ, ಈ ಭಾಗದ ಜನರ ...ಣಿಕ ಪ್ರಗತಿಯ ಕನಸುಕಂಡ ಮುತ್ಸದ್ದಿ ಎಸ್. ...ಲಿಂಗಪ್ಪನವರು ಅಂದಿನ ವಿಭಾಗಾಧಿಕಾರಿ ...ಎಸ್. ಹಿರಣ್ಣಯ್ಯನವರಿಗೆ ಅದಕ್ಕಾಗಿ ...ಷ ಯೋಜನೆಯೊಂದನ್ನು ರೂಪಿಸಲು ...ದ ಸೂಚನೆಯ ಫಲವೇ ಹೈದರಾಬಾದ್ ...ರ್ನಾಟಕ ಶಿಕ್ಷಣ ಸಂಸ್ಥೆ. ಬಹುತೇಕ ಹೈಕದ ...ಯಚೂರು, ಗುಲ್ಬರ್ಗಾ, ಬೀದರ್‌ಗಳ ಜನ ...ಮಾನ್ಯರ ಬೆವರ ಹಣವನ್ನು ಸಂಗ್ರಹಿಸಿಯೇ ...ಭಗೊಂಡ ಈ ಸಂಸ್ಥೆಯನ್ನು ಈಗ ಬೆರ...ಕೆಯ ಕೆಲ ಹೆಗ್ಗಣಗಳು ಯಾವ ಪರಿ ...ಚಿ ಮುಕ್ಕುತ್ತಿದ್ದಾರೆಂದರೆ ತನ್ನ ಸಾವನ್ನು ...ದು ನೋಡುತ್ತಿರುವ ರೋಗಿಯಂತೆ ಸಂಸ್ಥೆ ನೋಡು...



ಈ ಸಂದರ್ಭದಲ್ಲಿ ಈ HKE ಸಂಸ್ಥೆಯ ಆಡಳಿತ ...ಡಳಿಗೆ ಚುನಾವಣೆ ನಡೆಯಲಿದೆ. ಸಂಸ್ಥೆಯನ್ನು ಇಲ್ಲಿಯ...ಗೂ ಬಂದು ಮುಕ್ಕಿದವರೇ, ಸುಳ್ಳುಪಳ್ಳು ಹೇಳಿ, ...ನನ್ನು ಯಾಮಾರಿಸಿ ಮತ್ತೊಂದು ಅವಧಿಗೂ ಕೊಳ್ಳೆ ...ಡೆಯುವ ಸನ್ನಾಹದಲ್ಲಿದ್ದಾರೆ. ಮೊನ್ನೆ HKE ಸಂಸ್ಥೆಯ ...ಣ ಸಂಚಿಕೆ'ಯೊಂದು ಬಿಡುಗಡೆಯಾಗಿದೆ. ಅದರಲ್ಲಿ ...ಯ ಸ್ಥಾಪಕ ಅಧ್ಯಕ್ಷರೆಂದು ದಿ. ಶ್ರೀ ಮಹಾದೇವಪ್ಪ ...ಪುರೆ ಅಂತ ಕಾಣಿಸಿದ್ದಾರೆ. ಅದು ನಿಜವಲ್ಲ, ದಿ. ...ರಾಂಪುರೆಯವರು ಅದರ ಮೂರನೇ ಅಧ್ಯಕ್ಷರಾಗಿದ್ದರು. ...ದ್ದೂ ಅವರನ್ನೇ ಮೊದಲ ಅಧ್ಯಕ್ಷರು ಎಂದು ...ರ ಮಾಡುತ್ತಿರುವುದರಲ್ಲಿ ಒಂದು ಕುತಂತ್ರವಿದೆ. ... ದಿ. ರಾಂಪುರೆಯವರ ಪುತ್ರರತ್ನ ಶರದ್ ರಾಂಪುರೆ ... ಚೋರ್‌ಗುರು ಹಾಗೂ ಅವನ ಬೆನ್ನಿಗಿರುವ ಚೋರ್ ಚಮಚಾಗಳದ್ದು. ಸಂಸ್ಥೆ ಆರಂಭವಾದ ಕೆಲ ವರ್ಷಗಳಲ್ಲೇ ಹಗಲುರಾತ್ರಿ ದುಡಿದು, ಅದನ್ನು ಉತ್ತುಂಗಕ್ಕೇರಿಸಿದ್ದ ಕೀರ್ತಿ ದಿ. ಮಹದೇವಪ್ಪ ರಾಂಪುರೆ ಅವರದ್ದು. ಅವರ ನಂತರ ಸಂಸ್ಥೆಯ ಅಧಿಕಾರ ವಹಿಸಿಕೊಂಡವರಲ್ಲಿ ಬಹಳ ಜನ ಮೆಯ್ದಿದ್ದೇ ಹೆಚ್ಚು. ಉಳಿಸಿದ್ದು ಕಡಿಮೆ. ರಾಂಪುರೆ ಇರುವಾಗ ಪ್ರತಿ ತಿಂಗಳ ಒಂದನೇ ತಾರೀಖಿಗೇ ನೌಕರರಿಗೆ ಸಂಬಳ ಸಿಗುತ್ತಿತ್ತಂತೆ. ಈಗಲಾದರೋ, ಆಯಾ ತಿಂಗಳ ಸಂಬಳ ಅದೇ ತಿಂಗಳು, ಕೆಲವೊಮ್ಮೆ ಅದೇ ವರ್ಷ ಸಿಕ್ಕಿದರೆ ಅದೇ ಪುಣ್ಯ ಎಂಬಂತಾಗಿದೆ. ಇನ್ನು ತುಟ್ಟಿಭತ್ಯೆ, ರಜಾನಗದೀಕರಣ ಕೇಳಲೇಬೇಡಿ.



ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಹುಟ್ಟಿ ಎಷ್ಟೋ ವರ್ಷಗಳಾದ ಮೇಲೆ ಆರಂಭಗೊಂಡ ಸಂಸ್ಥೆಗಳು ಉತ್ತಮವಾಗಿಯೇ ನಡೆಯುತ್ತಿರುವಾಗ HKE ಸಂಸ್ಥೆ ಈ ದುಸ್ಥಿತಿ ತಲುಪಿರಬೇಕಾದರೆ ಸೋರಿಹೋಗಿರುವ ಸಂಪತ್ತು ಎಷ್ಟು ಎಂದು ತಿಳಿಯಬೇಕಾದರೆ ಒಂದಾದರೂ ಸಿಬಿಐ ತನಿಖೆ ತುರ್ತಾಗಿ ನಡೆಯಬೇಕಿದೆ.


ಹೀಗಿದ್ದೂ ಸದ್ಯದಲ್ಲಿ ನಡೆಯಲಿರುವ ಚುನಾವಣೆಗೆ ಸ್ಪರ್ಧಿಸಿ ಗೆಲ್ಲಲು ಹಲವರು ಹಪಹಪಿಸುತ್ತಿರುವುದಕ್ಕೆ ಕಾರಣವೂ ಇದೆ. ಕಳೆದ ಅನೇಕ ವರ್ಷಗಳಲ್ಲಿ ಸಂಸ್ಥೆಯ 'ಸ್ಥಾನಮಾನಗಳ' ರುಚಿ ಕಂಡಿರುವ ಕೆಲ ನಾಲಾಯಕ್‌ಗಳಿಗೆ ಮಾಡಲು ಬೇರೆ ಯಾವುದೇ ಉದ್ಯೋಗವಿಲ್ಲ. ಹೇಗಾದರೂ ಮಾಡಿ ಕೌನ್ಸಿಲ್ ಸದಸ್ಯತ್ವ ಗಿಟ್ಟಿಸಿದ್ರೂ ಸಾಕು. ಲಕ್ಷಾಂತರ ರೂಪಾಯಿ ಲಾಭದ ಹೊಳೆ ತಾನಾಗಿಯೇ ಹರಿದುಬರುತ್ತದೆ. ಅಧ್ಯಕ್ಷನಾದವನ ಯಾವುದೇ ನಡಾವಳಿ ಪ್ರಶ್ನಿಸದೇ ಎದುರು ನಿಂತು ಹಲ್ಲುಗಿಂಜಿದರೋ, ವಿವಿಧ ಉಪಸಮಿತಿಗಳ ಅಧ್ಯಕ್ಷಗಿರಿ, ಕಾಲೇಜುಗಳ ಉಸ್ತುವಾರಿಕೆ, ಪರ್ಚೇಸ್, ಕಾಂಟ್ರ್ಯಾಕ್ಟು, ಸೀಟು, ಕೋಟಾ, ಕಮಿಷನ್ನು ಇತ್ಯಾದಿ ಇತ್ಯಾದಿ ಮತ್ತಿನ್ನೇನು ಬೇಕು?

ಈಗ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿರುವವರ ಪೈಕಿ ಹಾಲಿ ಅಧ್ಯಕ್ಷ ಬಸವರಾಜ ಭೀಮಳ್ಳಿ, ಮಹಾನ್ ಶೂನ್ಯ ಸಾಧಕ. ತಾನೂ ತಿಂದು, ಜೊತೆಗಿರುವವರಿಗೂ ತಿನ್ನಿಸಿ, ಮತದಾರರನ್ನು ಗೆದ್ದುಕೊಂಡೋ, ಕದ್ದುಕೊಂಡೋ ಮುಗುಮ್ಮಾಗಿದ್ದುಬಿಡುವ ಸಮರ್ಥ. ಈಗಾಗಲೇ ಏನೇನೋ ಹಿಕ್ಮತ್‌ಗಳನ್ನು ಬಳಸಿ ಇರುವ ಸಾವಿರದೊಳಗಿನ ಮತಗಳಲ್ಲಿ ಐನೂರರಷ್ಟನ್ನು ಗಟ್ಟಿ ಮಾಡಿಕೊಂಡಿರುವ ಈತನೇ ಮತ್ತೊಮ್ಮೆ ಅಧ್ಯಕ್ಷನಾದರೆ ಅಚ್ಚರಿಯಿಲ್ಲ. ಇನ್ನೊಬ್ಬ ಸ್ಪರ್ಧಿ ಬಿ.ಜಿ. ಪಾಟೀಲ್ ಹೈಕದ ಪ್ರಸಿದ್ಧ ಉದ್ಯಮಿ ಶ್ರೀ ಗಳಂಗಪ್ಪನವರ ಮಗ. ಮೇಲಾಗಿ ಸ್ವತಃ ತಾನೂ ಒಬ್ಬ ಮೇಧಾವಿ ಉದ್ಯಮಿ ಎಂಬುದನ್ನು ಸಾಬೀತು ಮಾಡಿರುವ ಪ್ರಾಮಾಣಿಕ, ಶುದ್ಧಹಸ್ತದ ವ್ಯಕ್ತಿ. ಇಂತೋರ ಕೈಗೆ ಸಂಸ್ಥೆ ಸಿಕ್ಕರೆ ಅದರ ಒಂದು ಪೈಸೆಯನ್ನೂ ಹೊಡೆಯಲಾರ ಎಂಬುದು ಸಂಸ್ಥೆಯ ಅನೇಕ ಹಿತೈಷಿಗಳ ಭಾವನೆಯಾದರೂ ಈ ಮೆಚ್ಚುಗೆಯನ್ನೇ ಮತಗಾಳಿ ಮಾರ್ಪಡಿಸುವ ಶಕ್ತಿ, ಸಮಯ ಎರಡೂ ಇವರಿಗಿದೆಯೇ ಎಂಬುದು ಪ್ರಶ್ನೆ. ಇನ್ನೊಬ್ಬ ಸ್ಪರ್ಧಿ ಶಶೀಲ್ ನಮೋಶಿ, ಪ್ರಸಿದ್ಧ ಕಮ್ಯುನಿಸ್ಟ್ ನಾಯಕ ಗಂಗಾಧರ ನಮೋಶಿಯವರ ಮಗ. ಸಂಸ್ಥೆಯಲ್ಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಇವರು ಭೀಮಳ್ಳಿಗೆ ನೇರವಾಗಿ ಟಕ್ಕರ್ ಕೊಡುವ ಛಾತಿಯುಳ್ಳವ. ಇಂತಾ ಡೈನಾಮಿಕ್ ಮ್ಯಾನ್ ಸಂಸ್ಥೆಯ ಅಧ್ಯಕ್ಷಸ್ಥಾನ ಅಲಂಕರಿಸಬೇಕೆಂದು ಹಲವರ ಅಪೇಕ್ಷೆ ಕೂಡಾ. ಮತ್ತೊಬ್ಬ ಅಭ್ಯರ್ಥಿ ಶಿವಾನಂದ ಮಾನ್‌ಕರ್ ಖ್ಯಾತ ವ್ಯಾಪಾರಿಯಷ್ಟೇ ಅಲ್ಲದೆ ಸಾಂಸ್ಕೃತಿಕ ಲೋಕದಲ್ಲಿಯೂ ಸಾಧನೆಗೈದಿರುವವ. ಅನೇಕ ಸಲ ಹಾಲಿ ಅಧ್ಯಕ್ಷ ಭೀಮಳ್ಳಿಗೇ ಸವಾಲು ಹಾಕಿ, ಸಂಸ್ಥೆಯ ಆದಾಯ, ಆಯವ್ಯಯಗಳ ಕುರಿತು ಕೌನ್ಸಿಲ್‌ನಲ್ಲಿ ಬೇಡಿಕೆ ಮಂಡಿಸಿ ಅವಾಕ್ಕಾಗಿಸಿರುವ ಆಸಾಮಿ ಈತ. ಆದರೆ ನಖ-ಶಿಖಾಂತವಾಗಿ ಭ್ರಷ್ಟಗೊಂಡಿರುವ HKE ಸಂಸ್ಥೆಯಲ್ಲಿ ಪ್ರಾಮಾಣಿಕತೆಯೆಂಬುದೇ ಯೂಸ್‌ಲೆಸ್ "ಚೀಜ್" ಆಗಿರುವಾಗ ಮಾನ್‌ಕರ್‌ನಂತಹ ಶುದ್ಧಾತ್ಮರು ಅಧ್ಯಕ್ಷ ಸ್ಥಾನಕ್ಕೆ ಏರಬಲ್ಲರೇ?

ದುರ್ಗತಿಗೆ ತಲುಪಿರುವ HKE ಸಂಸ್ಥೆಯಲ್ಲಿ ಬಸವರಾಜ ಭೀಮಳ್ಳಿಗೆ ಸಾಥ್ ನೀಡಿರುವ ಕೌನ್ಸಿಲ್ ಸದಸ್ಯರಲ್ಲಿ ಕೆಲವರನ್ನು ಕಂಡರೇ ಸಜ್ಜನರು ವಾಂತಿ ಮಾಡಿಕೊಳ್ಳತೊಡಗಿದ್ದಾರೆ. ಅದರಲ್ಲಿ ಪ್ರಮುಖವಾಗಿ ಪುಣ್ಯಾತ್ಮ ಮಹದೇವಪ್ಪ ರಾಂಪುರೆಯವರ ಪುತ್ರ ಪಾಪಾತ್ಮ ಶರದ್ ರಾಂಪುರೆ, ಆರ್.ಎಸ್. ಹೊಸಗೌಡ ಎಂಬ ಬೆರಕಿ ಮಹಾನುಭಾವ, ಗೂಳಿ ಬುದ್ಧಿಯ ಶಿವರಣಪ್ಪ ಮಂಠಾಳೆ, ಹಲ್ಕಟ್‌ಗಿರಿಯ ಸುಭಾಷ್ ಬಿಜಾಪುರೆ, ಜಿ.ಡಿ. ಬಣಕರ್ ಎಂಬ ಭಸ್ಮದಾರಿ' ಗೆದ್ದಲು ಹುಳ, ಇವರೆಲ್ಲಾ ಮತ್ತೊಂದು ಅವಧಿಗೆ ಆಡಳಿತ ವಹಿಸಿಕೊಂಡರೋ, ಅಲ್ಲಿಗೆ HKE ಸಂಸ್ಥೆಯ ಕತೆ ಮುಗಿಯಿತೆಂದೇ ಅರ್ಥ. ಅದರ ಶವಯಾತ್ರೆಯೊಂದೇ ಬಾಕಿ. ಹಾಗೆ ಮಾಡುವುದರಲ್ಲಿ ಯಾವ ಸಂಶಯವೂ ಬೇಡ. ಈ ಲಫಂಗರ ಬದಲಿಗೆ ಡಾ. ಅಪ್ಪಾ ಸಾಹೇಬ ದೇಶಮುಖ್‌ನಂತಹ ಸಜ್ಜನ, ಸುರೇಶ್ ನಂದ್ಯಾಳ ಹಾಗೂ ಎನ್.ಡಿ. ಪಾಟೀಲ್‌ರಂಥ ಹೋರಾಟಗಾರರು, ಡಾ. ಬಿಲಗುಂದಿಯಂತಹ ಧೈರ್ಯವಂತ, ಕೇಶಪ್ಪ ಬಿರಾದಾರ್‌ನಂತಹ ಪ್ರಾಮಾಣಿಕ ರಾಜಕಾರಣಿ, ಆರ್.ಸಿ. ಧೋತ್ರೆಯಂಥ ನೇರ ಮಾತಿನ ವ್ಯಕ್ತಿ, ಡಾ. ಕರಂಜೆಯಂತಹ ಸಾತ್ವಿಕ, ರಾಜಶೇಖರ ಕಣಕಿ ಹಾಗೂ ವಿಜಯ್ ಕುಮಾರ್ ದೇಶಮುಖರಂಥ ಸರಳ, ನೇರ ಸ್ವಭಾವದವರು. ಶಿವಶರಣಪ್ಪಸಿರಿಯಂಥ ಹಠವಾದಿ, ಸ್ವಾಭಿಮಾನಿಗಳು ಚುನಾಯಿತರಾದಲ್ಲಿ HKE ಸಂಸ್ಥೆ ಉಳಿಯುವುದರಲ್ಲಿ, ಬೆಳೆಯುವುದರಲ್ಲಿ ಸಂಶಯವಿಲ್ಲ. ■

ಶರದ್ ರಾಂಪುರೆಯ ಲಫಡಾಗಳು

ತಾನು HKE ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷನ ಮಗ ಎಂದು ಪುಂಗಿ ಬಿಟ್ಟುಕೊಂಡೇ ಮಾಡಬಾರದ ಲಫಡಾಗಳನ್ನು ಮಾಡುತ್ತಿರುವ ಶರದ್ ರಾಂಪುರ, ತನ್ನಪ್ಪ ಗಳಿಸಿದ ಗೌರವ ಮರ್ಯಾದೆಗಳೆಲ್ಲವನ್ನೂ ಬೀದಿಯಲ್ಲಿ ಹರಾಜು ಮಾಡಿದ್ದಾನೆ. ಪಿಡಿಎ ಇಂಜನಿಯರಿಂಗ್ ಕಾಲೇಜಿನ ಎಲ್ಲಾ ವ್ಯವಹಾರಗಳಲ್ಲೂ ಕೈಯಾಡಿಸುತ್ತಾ ಇವನ ಕೆಲ ಚಮಚಾಗಳಾದ ಉಪಾಸೆ, ವನವಾಸೆ ಬೂಸಿ-ಬಸ್ಯಾಗಳನ್ನು ಕಟ್ಟಿಕೊಂಡು ಇಡೀ ಕಾಲೇಜನ್ನು ಪಾತಾಳಕ್ಕಿಳಿಸಿದ್ದಾನೆ. ಪ್ಯೂನ್ ಹುದ್ದೆಗೂ ನಾಲಾಯಕ್ ಆಗಿರುವ ಉಪಾಸೆ ಎಂಬ ಕೊಳಕನನ್ನು ಫೋರ್‌ಮನ್ ಹುದ್ದೆಗೆ ನೇಮಕ ಮಾಡಿಸಿಕೊಂಡು ಕೇಂದ್ರ ಸರ್ಕಾರದ ಫಂಡನ್ನು ಮೇಯುತ್ತಿದ್ದಾನೆ. ಈ ಉಪಾಸೆಯ ಬಗ್ಗೆ ಕಾಲೇಜಿನಲ್ಲಿ ಒಂದೂ ದಾಖಲೆ ಇಲ್ಲ ಎಂದರೆ ನೀವು ನಂಬಲೇಬೇಕು. ಇವನ ಮುಖ್ಯ ಕೆಲಸ ಕುಡಿಯುವುದು ಶರದ್ ತೋರಿಸಿದವರಿಗೆ ಆವಾಜ್ ಹಾಕುವುದು. ಕೆಲ ದಿನಗಳ ಹಿಂದೆ ಪಿಡಿಎ ಕಾಲೇಜಿನ ಪ್ರಿನ್ಸಿಪಾಲ್‌ರೇ 45 ದಿನ ರಜೆ ಹಾಕಿ ಓಡಿಹೋಗುವಂತೆ ಮಾಡಿದ್ದ. ಈ ಘಟಿಂಗನ ಮೇಲೆ ಕ್ರಮಕೈಗೊಳ್ಳಲು ಮುಂದಾದ ಅಧ್ಯಕ್ಷರಿಗೆ ತನ್ನ ಬಾಸ್ ಶರದ್ ರಾಂಪುರೆಯಿಂದ ಧಮ್ಕಿ! ಇಂಜನಿಯರಿಂಗ್ ಕಾಲೇಜಿನ ಸುಮಾರು 32 ಅಪರಾತಪರಾಗಳಲ್ಲಿ ಈ ಶರದ್‌ನ ಕೈಯಿದೆಯಂತೆ. ತನಿಖೆ ನಡೆಸಿದಲ್ಲಿ ಇನ್ನಷ್ಟು ಲಫಡಾಗಳು ಹೊರಬೀಳುವುದರಲ್ಲಿ ಸಂಶಯವಿಲ್ಲ!



ವರುಣ್ ಗಾಂಧಿ ಎಂಬ ವಿಷಜಂತು!

ಈತನಿಗ 'ವಿಷಜಂತು' ಎನ್ನದೆ ಬೇರೆ ವಿಧಿಯಿಲ್ಲ. "ಎಲ್ಲಾ ಹಿಂದೂಗಳು ಒಂದೆಡೆ ನಿಂತು ಉಳಿದವರನ್ನು ಪಾಕಿಸ್ತಾನಕ್ಕೆ ಕಳುಹಿಸಿ... ಇದು ಕಮಲದ ಹಸ್ತ ಚುನಾವಣೆಗಳ ಬಳಿಕ ಅವರ ಕೊರಳುಗಳನ್ನು ಕತ್ತರಿಸುತ್ತದೆ... ಹಿಂದೂಗಳ ವಿರುದ್ಧ ಯಾರಾದರೂ ಕೈ ಎತ್ತಿದರೆ ಕತ್ತರಿಸಿ ಹಾಕುತ್ತೇನೆಂದು ಭಗವದ್ಗೀತೆಯ ಮೇಲೆ ಆಣೆ ಮಾಡಿ ಹೇಳುತ್ತೇನೆ..." ಚುನಾವಣಾ ಭಾಷಣದಲ್ಲಿ ಮುಸ್ಲಿಮರ ವಿರುದ್ಧ ಹೀಗೆ ಕೊನೆ ಮೊದಲುಗಳಿಲ್ಲದಂತೆ ನಂಜು ಕಾರಿದ ತಿಕ್ಕಲನನ್ನು 'ವಿಷಜಂತು' ಎನ್ನದೇ ಬೇರೆ ದಾರಿಯಿದೆಯೆ?

ಈತ ವರುಣ್ ಗಾಂಧಿ. ಇಂದಿರಾ ಗಾಂಧಿಯ ಮೊಮ್ಮಗ. ಸಂಜಯ್ ಗಾಂಧಿ ಮತ್ತು ಮೇನಕಾ ಗಾಂಧಿಯ ಏಕೈಕ ಪುತ್ರರತ್ನ. ವಯಸ್ಸಿನ್ನೂ ಇಪ್ಪತ್ತೊಂಭತ್ತು ವರ್ಷ ದಾಟಿಲ್ಲ. ಆಗಲೇ ಉತ್ತರ ಪ್ರದೇಶದ ಫಿಲಿಬಿಟ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ.




ಮೊನ್ನೆ ಮಾರ್ಚ್ 16ರಂದು ತನ್ನ ಲೋಕಸಭಾ ಕ್ಷೇತ್ರವಾದ ಫಿಲಿಬಿಟ್‌ನಲ್ಲಿ ಈತ ಮಾಡಿದ ಈ ಪ್ರಚೋದನಾಕಾರಿ ಭಾಷಣವನ್ನು ದೇಶದಾದ್ಯಂತ ಎಲ್ಲಾ ಮಾಧ್ಯಮಗಳು ಬಿತ್ತರಿಸಿದವು. ಚುನಾವಣಾ ಆಯೋಗ ಆತನ ಮೇಲೆ ಭಾರತೀಯ ದಂಡ ಸಂಹಿತೆ 153 ಎ ಸೆಕ್ಷನ್ ಹಾಗೂ ಜನತಾ ಪ್ರಾತಿನಿಧ್ಯ ಕಾಯ್ದೆಯ 125ನೇ ಸೆಕ್ಷನ್ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಜಡಿದು ಅವನನ್ನು ಬಂಧಿಸಲು ಪೊಲೀಸ್ ತಂಡವನ್ನು ಕಳಿಸುತ್ತಿದ್ದಂತೆಯೇ "ನಾನು ಹಾಗೆ ಮಾತನಾಡಿಯೇ ಇಲ್ಲ. ಬೇಕೆಂತಲೇ ಮಾಧ್ಯಮಗಳು ಅದನ್ನು ತಿರುಚಿ ಬರೆದಿವೆ" ಎಂದು ಯೂ ಟರ್ನ್ ತೆಗೆದುಕೊಂಡ.

ವಾಸ್ತವದಲ್ಲಿ ಯಾವಾಗ ರಾಹುಲ್ ಗಾಂಧಿಯನ್ನು ಕಾಂಗ್ರೆಸ್ ಯುವ ನೇತಾರ ಎಂದು ಬಿಂಬಿಸಲಾರಂಭಿಸುತ್ತಿದ್ದಂತೆಯೇ ಬಿಜೆಪಿ ವರುಣ್ ಗಾಂಧಿಯನ್ನು ರಾಹುಲ್‌ಗೆ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿತು. ಅಂದರೆ, ಇಂದಿರಾ ಗಾಂಧಿ ಕುಟುಂಬದ ಕುಡಿಯಾದ ರಾಹುಲ್‌ಗೆ ಅದೇ ಕುಟುಂಬದ ಇನ್ನೊಂದು ಕುಡಿ ವರುಣ್‌ನನ್ನು ಮುಖಾಮುಖಿಯಾಗಿಸುವ ತಂತ್ರ! ಬಿಜೆಪಿಯ, ಸಂಘಪರಿವಾರದ ಹಿಂದೂತ್ವ ಎಂಬ ನಂಜು ಸಿದ್ಧಾಂತವನ್ನು ಮೈಯೊಳಗೆ ಇಳಿಸಿಕೊಂಡ ವರುಣ್ ಕಂಡ ಕಂಡಲ್ಲಿ ಮುಸ್ಲಿಮರ ವಿರುದ್ಧ ವಿಷಕಾರುತ್ತಾ ಬಹುಬೇಗನೇ ಬಿಜೆಪಿಯಲ್ಲಿ ಉತ್ತಮ ಸ್ಥಾನಕ್ಕೇರಿದ. ಎಷ್ಟರಮಟ್ಟಿಗೆ ಎಂದರೆ ಕಳೆದ ಲೋಕಸಭಾ ಚುನಾವಣೆಯಲ್ಲಿಯೇ ಅವನಿಗೆ ಬಿಜೆಪಿ ಟಿಕೆಟ್ ಕೊಡಲು ಸಿದ್ಧವಿತ್ತು. ಆದರೆ, ಆತನಿಗಿನ್ನೂ 25 ವರ್ಷ ತುಂಬಿರದ ಕಾರಣ ಸಂವಿಧಾನದ ಪ್ರಕಾರ ಅದು ಸಾಧ್ಯವಾಗಲಿಲ್ಲ. ಹಾಗಾಗಿ, ಈ ಬಾರಿ ಉತ್ತರ ಪ್ರದೇಶದ ಫಿಲಿಬಿಟ್ ಸ್ಥಾನಕ್ಕೆ ಟಿಕೆಟ್ ಕೊಟ್ಟಿತು. ಇದೇ ಕ್ಷೇತ್ರದಿಂದ ಆರು ಬಾರಿ ಲೋಕಸಭೆಗೆ ಆಯ್ಕೆಯಾಗಿರುವ ಆತನ ತಾಯಿ ಮೇನಕಾ ಗಾಂಧಿ ಮಗನಿಗಾಗಿ ಕ್ಷೇತ್ರವನ್ನು ತ್ಯಾಗ ಮಾಡಿದಳು.

ವರುಣ್ ಗಾಂಧಿಯ ಫಿಲ್ಟರ್ ಇಲ್ಲದ ನಾಲಿಗೆಯಿಂದಾಗಿ ಈಗ ಆತನೇ ಬಿಜೆಪಿಗೆ ತಿರುಗುಬಾಣವಾಗಿದೆ. ಅತ್ತ ಚುನಾವಣಾ ಆಯೋಗ ಕೇಸು ಜಡಿದು ಜೈಲಿಗಟ್ಟಲು ತಯಾರಿ ನಡೆಸಿದ್ದರೆ ಇತ್ತ ಬಿಜೆಪಿಯೊಳಗೇ ಅರುಣ್ ಜೇಟ್ಲಿ ಅವನ ವಿರುದ್ಧ ಮತ್ತು ಅವನಿಗೆ ಮಣೆ ಹಾಕುತ್ತಿರುವ ಪಕ್ಷದ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ವಿರುದ್ಧ ಬಂಡೆದ್ದಿದ್ದಾರೆ.

ಬಿಜೆಪಿಯೊಳಗೇ ತಲೆದೋರಿರುವ ಬಂಡಾಯ, ಒಳಜಗಳ, ಕಿತ್ತಾಟಗಳಿಂದ ಪಕ್ಷ ಸೊರಗಿಹೋಗಿ ಅಡ್ವಾಣಿಯ ಪ್ರಧಾನಿ ಪಟ್ಟದ ಕನಸು ಭಗ್ನವಾಗಿ ತಲೆ ಮೇಲೆ ಕೈ ಹೊತ್ತು ಕುಳಿತುಕೊಂಡಿದ್ದಾರೆ.



ಟಾಟಾನ ಗೂಂಡಾಗಿರಿ!

ಪಶ್ಚಿಮ ಬಂಗಾಳದ ಸಿಂಗೂರು ರೈತರು ಒದ್ದೋಡಿಸಿದ ಮೇಲಾದರೂ ಟಾಟಾಗೆ ಬುದ್ಧಿ ಬರಬೇಕಿತ್ತು; ಜನರು ವಿರೋಧಿಸುವ ಯೋಜನೆಗಳನ್ನು ಜಾರಿಗೊಳಿಸುವುದಕ್ಕೆ ಪಟ್ಟು ಹಿಡಿಯದೇ ಅಳಿದುಳಿದ ಒಂದಿಷ್ಟು ಮಾನ ಮರ್ಯಾದೆಯನ್ನಾದರೂ ಉಳಿಸಿಕೊಳ್ಳಬೇಕಿತ್ತು. ಆದರೆ, ಲಾಭದ ದುರಾಸೆಗಾಗಿ ಏನನ್ನಾದರೂ ಮಾಡಲು ಸಿದ್ಧವಿರುವ ದಪ್ಪ ಚರ್ಮದ ಟಾಟಾನಿಗೆ ಸಿಂಗೂರಿನಂತೆಯೇ ರೈತರು ಒದ್ದು ಓಡಿಸುವ ತನಕ ಜನಪ್ರತಿರೋಧದ ಅರಿವಾಗುವುದಿಲ್ಲ ಎಂಬುದನ್ನು ಆತ ಮತ್ತೊಮ್ಮೆ ತೋರಿಸಿ ಕೊಳ್ಳುತ್ತಿದ್ದಾನೆ. ಆದ್ದರಿಂದಲೇ ಸಾಮಾನ್ಯ ಜನರ, ಪರಿಸರ ಪ್ರೇಮಿಗಳ, ಸಂಘಸಂಸ್ಥೆಗಳ, ರಾಜಕಾರಣಿಗಳ, ಅಷ್ಟೇ ಏಕೆ ತನ್ನದೇ ಕಂಪೆನಿಯ ಶೇ.98ರಷ್ಟು ಗ್ರಾಹಕರ ತೀವ್ರ ಪ್ರತಿರೋಧದ ನಡುವೆಯೂ ಒರಿಸ್ಸಾದ ಕಡಲತಡಿಯ ಧಮ್ರ ಎಂಬಲ್ಲಿ ಒಂದು ಬೃಹತ್ ಬಂದರನ್ನು ನಿರ್ಮಿಸಲು ಹೊರಟಿದ್ದಾನೆ. ಈ ಬಂದರು ಅಸ್ತಿತ್ವಕ್ಕೆ ಬಂದರೆ ತಾನು ಉತ್ಪಾದಿಸಿದ ಕಬ್ಬಿಣದ ಅದಿರನ್ನು ವಿದೇಶಗಳಿಗೆ ಸಾಗಿಸಲು ಅನುಕೂಲವಾಗುತ್ತದೆ; ಇದರಿಂದ ಕೋಟ್ಯಂತರ ರೂಪಾಯಿ ಲಾಭ ಬರುತ್ತದೆ. ಟಾಟಾ ಮತ್ತಷ್ಟು ಶ್ರೀಮಂತನಾಗುತ್ತಾನೆ.

ಆದರೆ, ದೇಶದ ಗತಿ? ಪರಿಸರ, ಪ್ರಾಣಿಸಂಕುಲಗಳ ಗತಿ?

ಅದನ್ನು ಕಟ್ಟಿಕೊಂಡು ಟಾಟಾನಿಗೇನಾಗಬೇಕಿದೆ? ಟಾಟಾ ಬಂದರು ನಿರ್ಮಿಸಲು ಹೊರಟಿರುವ ಜಾಗದ ಪಕ್ಕದಲ್ಲಿಯೇ ಗಹಿರ್ಮಾತ ಕಡಲ ಪ್ರಾಣಿ ಧಾಮವಿದೆ. ಇದು ವಿಶ್ವದಲ್ಲಿಯೇ ಎರಡನೇ ಅತಿದೊಡ್ಡ ಕಡಲಾಮೆಯ ಸಂತಾನೋತ್ಪತ್ತಿಯ ಜಾಗ. ಜೊತೆಗೆ, ಇದೇ ಪ್ರದೇಶದಲ್ಲಿ ಬಿತರ್ಕಾನಿಕ ರಾಷ್ಟ್ರೀಯ ಉದ್ಯಾನವಿದೆ. ಇದು ಭಾರತದ ಎರಡನೇ ಅತಿದೊಡ್ಡ ಮ್ಯಾಂಗ್ರೋವ್ ಮರಗಳ ಅರಣ್ಯವಾಗಿದ್ದು ಇದು ಉಪ್ಪುನೀರು ಮೊಸಳೆಗಳ ವಾಸಸ್ಥಾನವಾಗಿದೆ. ಇಂತಹ ಸೂಕ್ಷ್ಮ ಪ್ರದೇಶವೊಂದರಲ್ಲಿ ಟಾಟಾನಂತಹ ಬಂಡವಾಳಿಗನ ಬಂದರು ಅಸ್ತಿತ್ವಕ್ಕೆ ಬಂದರೆ ಇಲ್ಲಿನ ಜೈವಿಕ ವೈವಿಧ್ಯತೆಯು ಸಂಪೂರ್ಣವಾಗಿ ನಾಶವಾಗುತ್ತದೆ ಎಂದು ನೂರಾರು ಪರಿಸರವಾದಿಗಳು, ಕಡಲಾಮೆ ತಜ್ಞರು, ವನ್ಯಜೀವಿ ಪ್ರೇಮಿಗಳು ಆತಂಕಗೊಂಡಿದ್ದಾರೆ. ಈ ಕಾರಣಕ್ಕಾಗಿ ಅವರೆಲ್ಲರೂ ಟಾಟಾ ತನ್ನ ಬಂದರು ಯೋಜನೆಯನ್ನು ಪ್ರಕಟಿಸಿದಂದಿನಿಂದ ಅದಕ್ಕೆ ವಿರೋಧ ವ್ಯಕ್ತಪಡಿಸುತ್ತಲೇ ಇದ್ದಾರೆ. ಅವರಲ್ಲಿ ಗ್ರೀನ್‌ಪೀಸ್ ಎಂಬ ಪರಿಸರ ಸಂಘಟನೆಯೂ ಒಂದು.



ಆದರೆ ಅಂತಹ ನ್ಯಾಯಸಮ್ಮತ ಪ್ರತಿಭಟನೆಗೆ ಈ ದೇಶದಲ್ಲಿ ಯಾವ ಬೆಲೆ ಸಿಗುತ್ತದೆ ಹೇಳಿ? ಶಾಂತಿಯುತ ಪ್ರತಿಭಟನೆಗಳಾದವು, ಮೆರವಣಿಗೆಗಳಾದವು, ಪ್ರದರ್ಶನಗಳಾದವು - ಇದ್ಯಾವುದಕ್ಕೂ ಟಾಟಾ ಆಗಲೀ ಅಥವ ಆತನಿಗೆ ಬೆಂಬಲಕ್ಕೆ ನಿಂತಿರುವ ಒರಿಸ್ಸಾ ಮತ್ತು ಕೇಂದ್ರ ಸರ್ಕಾರಗಳಾಗಲೀ ಕ್ಯಾರೆ ಎನ್ನಲಿಲ್ಲ. ನಂತರ ಈ ವಿಚಾರವಾಗಿ ಜನಾಭಿಪ್ರಾಯ ಸಂಗ್ರಹಿಸುವುದಕ್ಕಾಗಿ ಗ್ರೀನ್‌ಪೀಸ್ ಸಂಘಟನೆಯು ಒಂದು ಆನ್‌ಲೈನ್ ಅಭಿಯಾನವನ್ನು ಆರಂಭಿಸಿತು. ಅದರಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಅಮೋಘವಾಗಿ ಸ್ಪಂದಿಸಿ ಟಾಟಾ ತನ್ನ ಉದ್ದೇಶಿತ ಬಂದರು ಯೋಜನೆಯ ಸ್ಥಳವನ್ನು ಬದಲಾಯಿಸಬೇಕೆಂದು ಒತ್ತಾಯಿಸಿದ್ದಾರೆ. ಆಗಲೂ ಟಾಟಾ ಆಗಲಿ ಸರ್ಕಾರವಾಗಲಿ ಇಂತಹ ರಾಷ್ಟ್ರೀಯ ಹಿತಾಸಕ್ತಿಯ ಸೂಕ್ಷ್ಮ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ.

ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಟಾಟಾ ಕಂಪೆನಿಯ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯಿತು. ಆದರೆ ಪ್ರತಿಭಟನಾಕಾರರು ಸಭೆಗೆ ಬಂದು ಪ್ರತಿಭಟಿಸಬಹುದೆಂಬ ಭಯ ಟಾಟಾಗೆ ಇದ್ದೇ ಇತ್ತು. ಆದ್ದರಿಂದಲೇ ಆತ ಕೋರ್ಟಿನ ಮೊರೆ ಹೊಕ್ಕು ರಕ್ಷಣೆ ಪಡೆದಿದ್ದ. ನಿರೀಕ್ಷೆಯಂತೆ ನ್ಯಾಯಾಲಯವು ಗ್ರೀನ್‌ಪೀಸ್‌ನ ಪ್ರತಿಭಟನೆಗೆ ಅವಕಾಶ ಕೊಡಲಿಲ್ಲ. ಆದರೆ ಹೇಗಾದರೂ ಮಾಡಿ ತಮ್ಮ ಧ್ಯೇಯದಲ್ಲಿ ಯಶಸ್ಸು ಕಾಣಲೇಬೇಕೆಂದು ಹಠತೊಟ್ಟಿದ್ದ ಕಾರ್ಯಕರ್ತರು ಬೇರೊಂದು ಉಪಾಯ ಮಾಡಿದರು. ನೂರಾರು ಜನ ಕಾರ್ಯಕರ್ತರು ಟಾಟಾ ಕಂಪನಿಯ ನೂರು, ಐನೂರು, ಸಾವಿರ, ಎರಡು ಸಾವಿರ ರೂಪಾಯಿಗಳ ಷೇರುಗಳನ್ನು ಕೊಂಡುಕೊಂಡು ಅಧಿಕೃತವಾಗಿ ಕಂಪನಿಯ ಹೂಡಿಕೆದಾರರಾದರು. ಅಂದರೆ, ಟಾಟಾ ಕಂಪನಿಯ ವಾರ್ಷಿಕ ಸಭೆಯಲ್ಲಿ ಭಾಗವಹಿಸುವುದಕ್ಕೆ ಅವರಿಗೆ ಎಲ್ಲಾ ಕಾನೂನುಬದ್ಧ ಹಕ್ಕು ಸಿಕ್ಕಂತಾಯಿತು. ವಾರ್ಷಿಕ ಸಭೆ ನಡೆಯಬೇಕಾದ ಟಾಟಾ ಕಂಪೆನಿಯ ಕೇಂದ್ರ ಕಚೇರಿ ಬಾಂಬೆಯಲ್ಲಿರುವ 'ಬಾಂಬೆ ಹೌಸ್'ಗೆ ನೂರಾರು ಸಂಖ್ಯೆಯಲ್ಲಿ ಷೇರುದಾರರ ವೇಷದಲ್ಲಿ ಬಂದ ಕಾರ್ಯಕರ್ತರು ಸಭೆ ಪ್ರಾರಂಭವಾಗುತ್ತಿದ್ದಂತೆ ಒರಿಸ್ಸಾ ಧಮ್ರ ಬಂದರು ಪ್ರಾಜೆಕ್ಟಿಗೆ ವಿರೋಧ ವ್ಯಕ್ತಪಡಿಸಿ ಗದ್ದಲವೆಬ್ಬಿಸಿಬಿಟ್ಟರು. ಸಭೆಯಲ್ಲಿ ಖುದ್ದು ಹಾಜರಿದ್ದ ರತನ್ ಟಾಟಾನಿಗೆ ಇದು ತುಸು ಹಿಂಸಾತ್ಮಕ ಪ್ರತಿಭಟನೆ ಎನ್ನಿಸಿತಾದರೂ ಅವರನ್ನು ಹೊರಹಾಕುವ ಅಥವ ಅವರಿಗೆ ಮಾತನಾಡುವ ಹಕ್ಕನ್ನು ನಿರಾಕರಿಸುವ ಧೈರ್ಯ ತೋರಲಿಲ್ಲ. ಏಕೆಂದರೆ, ಕಾನೂನಿನ ಪ್ರಕಾರ ಅವರೆಲ್ಲರೂ ಕಂಪನಿಯ ಅಧಿಕೃತ ಷೇರುದಾರರಾಗಿದ್ದರು!

ಈ ಪ್ರತಿಭಟನೆಯ ಪ್ರತಿಫಲವಾಗಿ ಟಾಟಾ ಕೊನೆಗೂ ಪರಿಸರ ಪ್ರೇಮಿ ಕಾರ್ಯಕರ್ತರೊಂದಿಗೆ ಮಾತುಕತೆ ನಡೆಸಲು ಒಪ್ಪಿದ. ಆದರೆ, ಅದರಿಂದೇನೂ ಪ್ರಯೋಜನವಾಗಲಿಲ್ಲ. ಟಾಟಾ ಉದ್ದೇಶಿತ ಯೋಜನೆಯಿಂದ ಹಿಂದ್ಸರಿಯದ ಕಾರಣ ಇದೇ ಫೆಬ್ರವರಿ 20, 2009ರಂದು ಮಾತುಕತೆಗಳು ಸಂಪೂರ್ಣವಾಗಿ ವಿಫಲವಾದವು. ಪರಿಸರ ಪ್ರೇಮಿಗಳಿಗೆ ಹೋರಾಟವನ್ನು ಮುಂದುವರೆಸುವುದು ಅನಿವಾರ್ಯವಾಯಿತು. ಈ ನಡುವೆ ಗ್ರೀನ್‌ಪೀಸ್ ಸಂಘಟನೆಯು ಫೆಬ್ರವರಿ 16 ರಿಂದ 24ರ ತನಕ 5000 ಟಾಟಾ ಗ್ರಾಹಕರನ್ನು ಸಂಪರ್ಕಿಸಿ ಅವರಿಗೆ ಈ ಯೋಜನೆಯಿಂದಾಗುವ ಅಪಾಯದ ಬಗ್ಗೆ ವಿವರಿಸಿದಾಗ ಅವರಲ್ಲಿ ಶೇ.98ರಷ್ಟು ಗ್ರಾಹಕರು ಅದನ್ನು ವಿರೋಧಿಸಿದರು. ನಂತರ ಯಾವುದೇ ಪಕ್ಷಭೇದವಿಲ್ಲದೇ ಸಂಸದರು, ರಾಜಕಾರಣಿಗಳು ಕೇಂದ್ರ ಪರಿಸರ ಇಲಾಖೆಗೆ ಪತ್ರ ಬರೆದು ಯೋಜನೆಯನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

ಈ ಎಲ್ಲಾ ಪ್ರತಿಭಟನೆಗಳ ಹಿಂದೆ ಗ್ರೀನ್‌ಪೀಸ್ ಎಂಬ ಸಂಸ್ಥೆಯ ಕೈವಾಡವಿದೆ ಎಂದುಕೊಂಡ ಟಾಟಾ ಅದನ್ನು ಮಟ್ಟ ಹಾಕಲು ತಯಾರಿ ನಡೆಸಿದ್ದಾನೆ. ಅದರ ಭಾಗವಾಗಿಯೇ ಮೊನ್ನೆ ಮಾರ್ಚ್ 5ರಂದು ತನ್ನ ಗೂಂಡಾ ಪಡೆಯನ್ನು ಕಳುಹಿಸಿ ಯೋಜನೆಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರನ್ನು ಬೆದರಿಸಿದ್ದಾನೆ. ಅದಕ್ಕೂ ಮೊದಲು ಗ್ರೀನ್‌ಪೀಸ್ ಸಂಸ್ಥೆಯ ಹಿತೈಷಿಗಳಿಗೆ, ಕಾರ್ಯಕರ್ತರಿಗೆ ಈ-ಮೇಲ್ ಕಳುಹಿಸಿ ಬೆದರಿಸಲು ಪ್ರಯತ್ನಿಸಿದ್ದ. ನಂತರ ಗ್ರೀನ್‌ಪೀಸ್ ಸಂಸ್ಥೆಗೆ ಫ್ಯಾಕ್ಸ್ ಸೇವೆ ಒದಗಿಸುತ್ತಿದ್ದ ಕಂಪನಿಗೂ ಬೆದರಿಕೆಯೊಡ್ಡಿ ಗ್ರೀನ್‌ಪೀಸ್‌ನೊಂದಿಗೆ ಯಾವುದೇ ರೀತಿಯ ಸಂಪರ್ಕ ಇಟ್ಟುಕೊಳ್ಳಬಾರದೆಂದು ಗದರಿಸಿದ್ದಾನೆ.

"ಮೊದಲು ಅವರು ನಿಮ್ಮನ್ನು ನಿರ್ಲಕ್ಷಿಸುತ್ತಾರೆ, ನಂತರ ನಿಮ್ಮ ಬಗ್ಗೆ ನಕ್ಕು ಗೇಲಿ ಮಾಡುತ್ತಾರೆ, ಆಮೇಲೆ ನಿಮ್ಮೊಂದಿಗೆ ಹೋರಾಡುತ್ತಾರೆ, ಕೊನೆಗೆ ನಿಮ್ಮ ವಿರುದ್ಧ ಗೆಲ್ಲುತ್ತಾರೆ" ಎಂದು ಗಾಂಧೀಜಿ ಒಮ್ಮೆ ಬಂಡವಾಳಶಾಹಿಗಳ ಬಗ್ಗೆ ಹೇಳಿದ್ದರು. ಟಾಟಾ ಈಗ ಅದೇ ತಂತ್ರವನ್ನು ಅನುಸರಿಸುತ್ತಿದ್ದಾನೆ. ಇದರರ್ಥವಿಷ್ಟೇ: ಎಲ್ಲಾ ತಂತ್ರಗಳೂ ವಿಫಲವಾದರೆ ಟಾಟಾ ಅಂತಿಮವಾಗಿ ಬಂದೂಕು, ಗುಂಡುಗಳಿಂದ ಶಸ್ತ್ರಸಜ್ಜಿತರಾದ ಪೊಲೀಸರನ್ನು ಹೋರಾಟಗಾರರ ಮೇಲೆ ಛೂ ಬಿಡುತ್ತಾನೆ; ಒರಿಸ್ಸಾದ ಧಮ್ರದಲ್ಲಿ ಪಶ್ಚಿಮ ಬಂಗಾಳದ ಸಿಂಗೂರು ಪುನರಾವರ್ತನೆಯಾಗುತ್ತದೆ. ■



ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ

ತೃತೀಯ ರಂಗದ ಗ|ರ್ಭ|ಪಾ|ತ!

ಕಾಂಗ್ರೆಸ್ ಮತ್ತು ಬಿಜೆಪಿಯೇತರ ತೃತಿಯ ರಂಗ ಮೂರನೇ ಬಾರಿಗೆ ಮತ್ತೆ ಜನ್ಮ ತಳೆದಿದೆ. ಮೊನ್ನೆ ಮಾರ್ಚ್ 12ರಂದು ತುಮಕೂರಿನ ಬಳಿಯ ದಾಬಸ್ ಪೇಟೆಯಲ್ಲಿ ನಡೆದ, ಲಕ್ಷಾಂತರ ಜನರು ಪಾಲ್ಗೊಂಡಿದ್ದ ಚಾರಿತ್ರಿಕ ಸಮಾವೇಶದಲ್ಲಿ ಅಸ್ತಿತ್ವಕ್ಕೆ ಬಂದ ಈ ರಂಗದಲ್ಲಿ ಸದ್ಯ ಸಿಪಿಐ, ಸಿಪಿಎಂ, ತೆಲುಗುದೇಶಂ, ಟಿಆರ್‌ಎಸ್, ಎಐಎಡಿಎಂಕೆ, ಜನತಾದಳ, ಬಿಎಸ್‌ಪಿ, ಫಾರ್ವರ್ಡ್ ಬ್ಲಾಕ್ ಮುಂತಾದ ಹತ್ತು ಪಕ್ಷಗಳು ಅಧಿಕೃತವಾಗಿ ಸೇರಿಕೊಂಡಿವೆ. ಬಿಜೆಪಿಯಿಂದ ದೂರವಾಗಿರುವ ಒರಿಸ್ಸಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಬಿಜು ಜನತಾದಳ ಕೂಡ ಭವಿಷ್ಯದಲ್ಲಿ ಸೇರ್ಪಡೆಗೊಳ್ಳುವ ನಿರೀಕ್ಷೆಯಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳ ಆಳ್ವಿಕೆಯಿಂದ ಬೇಸತ್ತು ಹೋಗಿರುವ ಜನರಿಗೆ ತೃತೀಯ ರಂಗದ ಸ್ಥಾಪನೆ ಒಂದಿಷ್ಟು ನೆಮ್ಮದಿ ತಂದಿದ್ದು ನಿಜ.


ಆದರೆ, ಈ ರಂಗ ಅರಳುವ ಮೊದಲೇ ಕಮರಿ ಹೋಗುವ ಲಕ್ಷಣಗಳು ಕಾಣುತ್ತಿವೆ. ಬಿಎಸ್‌ಪಿಯ ನಾಯಕಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿ ತನ್ನನ್ನು ತೃತೀಯ ರಂಗದ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಬೇಕೆಂದು ಪಟ್ಟು ಹಿಡಿಯುವ ಮೂಲಕ ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಯುವ ಧೋರಣೆ ತಾಳಿದ್ದೇ ಇದಕ್ಕೆ ಪ್ರಧಾನ ಕಾರಣ.

ಕಳೆದ ಚುನಾವಣೆಯಲ್ಲಿ ಒಟ್ಟು 57 ಸೀಟುಗಳನ್ನು ಗೆಲ್ಲುವ ಮೂಲಕ ಕೇಂದ್ರದಲ್ಲಿ ಯುಪಿಎ ಸರ್ಕಾರ ರಚನೆಗೆ ಕಾರಣೀಭೂತವಾಗಿದ್ದ ಎಡ ಪಕ್ಷಗಳೇ ಇಂದು ತೃತೀಯ ರಂಗದ ಮೂಲಾಧಾರವಾಗಿವೆ. ಎಡಪಕ್ಷಗಳ ಬೇಸ್‌ಗಳೆಂದೇ ಪರಿಗಣಿತವಾಗಿರುವ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಕಳೆದ ಐದು ವರ್ಷಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಕೇರಳದಲ್ಲಿ ಸಿಪಿಎಂ ಜನರಲ್ ಸೆಕ್ರೆಟರಿ ಪಿಣರಾಯಿ ವಿಜಯನ್ ಮತ್ತು ಮುಖ್ಯಮಂತ್ರಿ ಅಚ್ಯುತಾನಂದನ್ ನಡುವಿನ ಜಗಳ ತಾರಕಕ್ಕೇರಿರುವುದರಿಂದ ಪಕ್ಷದಲ್ಲಿ ಮೊದಲಿದ್ದ ಒಗ್ಗಟ್ಟು ಈಗಿಲ್ಲ.

ಇನ್ನು ಪಶ್ಚಿಮ ಬಂಗಾಳದ ಸಿಂಗೂರಿನಲ್ಲಿ ಟಾಟಾನಿಗೆ ಮಣೆ ಹಾಕಲು ಹೋಗಿ ಅಮಾಯಕ ರೈತರ ಮೇಲೆ ಹೇಳತೀರದ ದೌರ್ಜನ್ಯ ನಡೆಸಿದ ಆಡಳಿತಾರೂಢ ಸಿಪಿಎಂ ಪಕ್ಷವನ್ನು ಅಲ್ಲಿನ ಜನ ಕ್ಷಮಿಸಲಾರರು. ಸಿಂಗೂರು ಹೋರಾಟವನ್ನೇ ಬಂಡವಾಳ ಮಾಡಿಕೊಂಡು ಪ್ರವರ್ಧಮಾನಕ್ಕೆ ಬಂದಿರುವ ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ ಈ ಬಾರಿ ಒಂದಿಷ್ಟು ಸ್ಥಾನಗಳನ್ನು ಕಿತ್ತುಕೊಳ್ಳುವುದು ಖಚಿತ.

ತೃತೀಯ ರಂಗದ ಉದ್ಘಾಟನಾ ಸಮಾರಂಭದಲ್ಲಿ ಚಂದ್ರಬಾಬು ನಾಯ್ಡು, ಪ್ರಕಾಶ್ ಕಾರಟ್, ದೇವೇಗೌಡ ಮುಂತಾದ ನಾಯಕರು ನಾವೇ ಅಧಿಕಾರಕ್ಕೆ ಬರೋದು ಎಂದು ಭರ್ಜರಿಯಾಗಿ ಭಾಷಣ ಮಾಡಿದ್ದಾರಾದರೂ ಅದು ಆಗುವ ಮಾತಲ್ಲ. ಚುನಾವಣಾ ನಂತರದಲ್ಲಿ ಕೇಂದ್ರದಲ್ಲಿ ಸರ್ಕಾರ ಸ್ಥಾಪಿಸುವುದಕ್ಕೆ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎಗಳ ನಡುವೆಯೇ ಪೈಪೋಟಿ ಉಂಟಾಗುವುದು ಗ್ಯಾರಂಟಿ. ಆಗ ಮತ್ತೆ ತೃತೀಯ ರಂಗ ಒಡೆದು ಛಿದ್ರವಾಗಿ ಅದರಲ್ಲಿನ ಬಿಡಿಬಿಡಿ ಪಕ್ಷಗಳು ತಾವು ಚುನಾವಣೆಯಲ್ಲಿ ಗಳಿಸಿದ ಸೀಟುಗಳ ಸಂಖ್ಯೆಗನುಗುಣವಾಗಿ ಯುಪಿಎ ಮತ್ತು ಎನ್‌ಡಿಎಗಳೊಂದಿಗೆ ಬಾರ್ಗೇನ್ ಮಾಡಲು ಪ್ರಾರಂಭಿಸುತ್ತವೆಯಷ್ಟೆ.

ವಾಸ್ತವದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳ ಆಡಳಿತದಿಂದ ಬೇಸತ್ತಿರುವ ಜನತೆಗೆ ಆ ಎರಡೂ ಪಕ್ಷಗಳನ್ನು ಹೊರತುಪಡಿಸಿದ ತೃತೀಯ ರಂಗದ ಅವಶ್ಯಕತೆಯೇನೋ ಇದೆ. ಆದರೆ, ಹುಟ್ಟುವ ಮೊದಲೇ ಅದರ ಗರ್ಭಪಾತವಾಗುತ್ತಿರುವುದು ಮಾತ್ರ ದುರಂತ! ■





ಬಣಜಿಗರಿಗೆ ಟಿಕೆಟ್ ಪಂಚಮಸಾಲಿಗಳಿಗೆ ಬಕೆಟ್

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗಾಯತರು, ಅದರಲ್ಲೂ ವಿಶೇಷವಾಗಿ ಗಾಯತರಲ್ಲೇ ಬಹುಸಂಖ್ಯಾತರಾಗಿರುವ ಚಮಸಾಲಿಗಳು ಸಾಲುಸಾಲಾಗಿ ಬಿಜೆಪಿಗೆ ಓಟು ಕಿದ್ದರಿಂದಲೇ ಇಂದು ಬಿಜೆಪಿ ಅಧಿಕಾರಕ್ಕೇರಿದೆ. ದರೆ, ತಮ್ಮ ಗೆಲುವಿಗೆ ಕಾರಣರಾದ ಚಮಸಾಲಿಗಳನ್ನು ವ್ಯವಸ್ಥಿತವಾಗಿ ಳಿಯುವ, ಲಿಂಗಾಯತರಲ್ಲೇ ಖ್ಯಾತ್ಮಕವಾಗಿ ಕಡಿಮೆಯಿರುವ ಣಜಿಗರಿಗೆ ಮಣೆ ಹಾಕುವ ಹ್ಮಣಶಾಹಿ ಶೋಷಣೆ ಮಾತ್ರ ಬ್ಯಾಹತವಾಗಿ ಮುಂದುವರೆದೇ ದೆ. ಅದು ಈ ಬಾರಿ ೀಕಸಭಾ ಚುನಾವಣೆಗಾಗಿ ಟ್ ನೀಡುವಲ್ಲಿಯೂ ಷ್ಟವಾಗಿ ವ್ಯಕ್ತವಾಗಿದೆ.

ಇದು ಬಿಜೆಪಿ ವರಸೆ....

ಬಿಜೆಪಿಯಲ್ಲಿನ ಬಣಜಿಗ ರಾಜಕಾರಣವನ್ನು ದಾಹರಣೆಗಳ ಸಮೇತವಾಗಿ ವಿಶ್ಲೇಷಿಸಿದರೆ ಈ ಶ ಮತ್ತಷ್ಟು ಸ್ಪಷ್ಟವಾಗುತ್ತದೆ. ಕರ್ನಾಟಕದ ಟ್ಟು ಜನಸಂಖ್ಯೆಯ ಶೆ. 21ರಷ್ಟಿರುವ ಗಾಯತ ಸಮುದಾಯದಲ್ಲಿ ಒಟ್ಟು 36ರಷ್ಟು


ಮಂಜುನಾಥ್


ಬೊಮ್ಮಾಯಿ

ಪಂಗಡಗಳಿವೆ. ಉತ್ತರ ಕರ್ನಾಟಕದಲ್ಲಿ ನಿಮಗೆ ಸ್ಕೈದು ಪಂಗಡಗಳು ಮಾತ್ರವೆ ಸಿಗುತ್ತವೆ. ಪುಗಳಲ್ಲಿ 75 ಲಕ್ಷದಷ್ಟಿರುವ ಪಂಚಮಸಾಲಿಗಳೇ ಖ್ಯಾತ್ಮಕವಾಗಿ ಪ್ರಬಲರು. ಸುಮಾರು 50 ದಷ್ಟಿರುವ ಸಾದರು ಎರಡನೇ ಸ್ಥಾನದಲ್ಲಿದ್ದರೆ ಮಾರು 35 ಲಕ್ಷದಷ್ಟಿರುವ ಗಾಣಿಗರು ರನೇ ಸ್ಥಾನದಲ್ಲಿದ್ದಾರೆ. ಆದರೂ ೀ ಲಿಂಗಾಯತ ಸಮುದಾಯವನ್ನು ರಲ 17 ಲಕ್ಷದಷ್ಟಿರುವ ಬಣಜಿಗರೇ ಟ್ಟರು) ನಿಯಂತ್ರಿಸುತ್ತಿರುವುದು ರ್ಯಾಸ.

ಕರ್ನಾಟಕದಲ್ಲಿ ಪಂಚಮಸಾಲಿ ಮುದಾಯ ಇಷ್ಟೊಂದು ದೊಡ್ಡ ಮಾಣದಲ್ಲಿದ್ದೂ, ಈ ಸಮುದಾಯದ ಜನ ಎಮ್ಮೆಲ್ಲೆಗಳು ಪಿಯಲ್ಲಿದ್ದರೂ ಬಿಜೆಪಿ ಈ ೀಕಸಭಾ ಚುನಾವಣೆಯಲ್ಲಿ ಒಬ್ಬನಿಗೂ ಟ್ ಕೊಟ್ಟಿರಲಿಲ್ಲ. ಪಂಚಮಸಾಲಿ ಮ ಜಯಬಸವ ಮೃತ್ಯುಂಜಯ ಸ್ವಾಮಿಗಳು ತ್ತು ಇನ್ನಿತರ ಮುಖಂಡರು ಬಹಿರಂಗವಾಗಿ ದಾಯವೆದ್ದ ಮೇಲೆ ಕೊಪ್ಪಳದ ಟಿಕೆಟ್ ಅನ್ನು ಚಮಸಾಲಿ ಸಮುದಾಯದ ರಾಮೇಗೌಡರಿಗೆ ವ[illegible] ನೀಡಿ ೀ ಸಮುದಾಯದ [illegible]ಗಿಗೆ ತುಪ್ಪ ರಿದ್ದಾರೆ. ಅದೇ ಸಮಯದಲ್ಲಿ ಳಿಣಿಕೆಯಷ್ಟಿರುವ ಬಣಜಿಗರಿಗೆ ಏಳು ೀಕಸಭಾ ಟಿಕೆಟ್‌ಗಳನ್ನು ಕೊಟ್ಟಿದ್ದಾರೆ.

ಬಿಜೆಪಿ ವಿಧಾನಸಭೆ ಟಿಕೆಟ್ ಚುವಲ್ಲಿಯೂ ಮೊದಲು ಜಿಗರನ್ನೇ ಹುಡುಕಿ ಕಣಕ್ಕಿಳಿಸಿತ್ತು, ರ ಕಣಕ್ಕಿಳಿದ ಅಭ್ಯರ್ಥಿ[illegible]ನ್ನು ಜಿಗ ಅಭ್ಯರ್ಥಿ ಎಂ[illegible]ೀಳದೇ ಗಾಯತ ಅಭ್ಯರ್ಥಿ ಎಂದು ಬಿಂಬಿಸಿ ೀ ಪಂಚಮಸಾಲಿಗಳಿಂದ ಓಟು ಯಿತು. ಎಲ್ಲೆಲ್ಲಿ ಪಂಚಮಸಾಲಿಗಳು ಲರಾಗಿದ್ದಾರೋ ಅಲ್ಲೆಲ್ಲಾ ಪಂಚಮಸಾಲಿಗಳನ್ನೇ ಳಿಸಿದರೂ ಅವರು ಗೆದ್ದ ಮೇಲೆ ಅವರಿಗೆ ತ್ರಿ ಪದವಿ ಕೊಡದೆ ಮತ್ತೆ ಅಲ್ಲೂ ಜಿಗರನ್ನು ಮಂತ್ರಿ ಮಾಡಿತು.

ಉದಾಹರಣೆಗಾಗಿ ಹೇಳುವುದಾದರೆ ಪ್ರಸ್ತುತವಾಗಿ ಬಿಜೆಪಿಯಲ್ಲಿ 14 ಜನ ಪಂಚಮಸಾಲಿ ಎಮ್ಮೆಲ್ಲೆಗಳಿದ್ದರೂ ಮಂತ್ರಿ ಪದವಿ ಸಿಕ್ಕಿರುವುದು ಬಸವರಾಜ ಬೊಮ್ಮಾಯಿಗೆ ಮಾತ್ರ.

ಲಿಂಗಾಯತರಲ್ಲಿ ಬಹುಸಂಖ್ಯಾತ ಪಂಚಮಸಾಲಿಗಳ ಮೇಲೆ ಅಲ್ಪಸಂಖ್ಯಾತ ಬಣಜಿಗರು ನಡೆಸುತ್ತಿರುವ ಈ ದೌರ್ಜನ್ಯ ನಿನ್ನೆ ಮೊನ್ನೆ ಪ್ರಾರಂಭವಾಗಿದ್ದೇನಲ್ಲ. ಚಾರಿತ್ರಿಕವಾಗಿ ನೋಡಿದರೆ ವ್ಯಾಪಾರಿಗಳಾಗಿರುವ ಬಣಜಿಗ ಶೆಟ್ಟರು ಬಹುಸಂಖ್ಯಾತರಾಗಿರುವ ಪಂಚಮಸಾಲಿಗಳ, ಸಾದರ, ಗಾಣಿಗರ ಮೌಢ್ಯವನ್ನು ವ್ಯವಸ್ಥಿತವಾಗಿ ಬಳಸಿಕೊಂಡು ಅವರನ್ನು ತುಳಿಯುತ್ತಾ ಬಂದಿದ್ದಾರೆ. 'ಹಿಂದೂಗಳೆಲ್ಲಾ ಒಂದು' ಎನ್ನುತ್ತಲೇ ಇಡೀ ಸಮಾಜದಲ್ಲಿ ಶೂದ್ರ, ದಲಿತ ಸಮುದಾಯಗಳನ್ನು ಬ್ರಾಹ್ಮಣಶಾಹಿಗಳು ಆಳುತ್ತಿರುವಂತೆಯೇ 'ಲಿಂಗಾಯತರೆಲ್ಲಾ ಒಂದು' ಎನ್ನುತ್ತಲೇ ಇಡೀ ಲಿಂಗಾಯತರನ್ನು


ನೀರಾನಿ


ಬಸನಗೌಡ ಪಾಟೀಲ್

ಬೆರಳೆಣಿಕೆಯಷ್ಟಿರುವ ಬಣಜಿಗ ಶೆಟ್ಟರು ಆಳುತ್ತಿದ್ದಾರೆ. ಇಲ್ಲಿಯ ತನಕ ಕರ್ನಾಟಕದ ಮುಖ್ಯಮಂತ್ರಿಯಾದವರ ಪಟ್ಟಿಯನ್ನು ತೆರೆದು ನೋಡಿದರೂ ಬಣಜಿಗ ಶೆಟ್ಟರ ಪ್ರಾಬಲ್ಯ ಅರ್ಥವಾಗುತ್ತದೆ.




ಇದನ್ನೆಲ್ಲಾ ಅಭ್ಯಸಿಸಿದ ನಂತರ ಬಿಜೆಪಿಯು ಮೊದಲು ಬಣಜಿಗ ಸಮುದಾಯವನ್ನು ಗೆದ್ದುಕೊಂಡರೆ ಇಡೀ ಲಿಂಗಾಯತ ಸಮುದಾಯವು ತನ್ನ ತೆಕ್ಕೆಗೆ ಬರುತ್ತದೆಂದು ಅಂದಾಜಿಸಿ ಕಾರ್ಯೋನ್ಮುಖವಾಯಿತು. ಈ ತಂತ್ರಕ್ಕೆ ಮೊದಲು ಮಣೆ ಹಾಕಿದವನು ಜಗದೀಶ್ ಶೆಟ್ಟರ್ ಎಂಬ ಬಣಜಿಗ ಲಿಂಗವಂತ. 2004ರಿಂದಾಚೆಗೆ ಬಿಜೆಪಿಯಲ್ಲಿ ಧ್ರುವೀಕರಣ ಪ್ರಾರಂಭವಾಯಿತು. ಬಾದಾಮಿಯ ಬಣಜಿಗ ಎಂ.ಕೆ ಪಟ್ಟಣಶೆಟ್ಟಿಯೊಂದಿಗೆ ಗಾಣಿಗ ಗದ್ದಿನಗೌಡ ಪ್ರವೇಶ ಮಾಡಿದ್ದೇ ತಡ, ಉತ್ತರ ಕರ್ನಾಟಕದ ಲಿಂಗಾಯತರು ಬಿಜೆಪಿಯತ್ತ ವಾಲತೊಡಗಿದರು. ಬಣಜಿಗ ಸಮುದಾಯದ ಮೇಲೆ ಬಿಜೆಪಿಗೆ ಕಂಟ್ರೋಲ್ ಸಿಕ್ಕಿದ್ದು ಇಡೀ ಲಿಂಗಾಯತ ಸಮುದಾಯದ ಮೇಲೆ ಕಂಟ್ರೋಲ್ ಸಿಕ್ಕಂತಾಗಿತ್ತು. ಅದನ್ನು ವ್ಯವಸ್ಥಿತವಾಗಿ ಉಳಿಸಿ, ಬೆಳೆಸಿಕೊಂಡು ಹೋಗುವುದಕ್ಕಾಗಿ ಬಣಜಿಗರಿಗೇ ಪ್ರಾಶಸ್ತ್ಯ ನೀಡುತ್ತಾ ಬರಲಾಯಿತು. ಇಲ್ಲಿಯತನಕ ಬಿಜೆಪಿಯ ಲಿಂಗಾಯತ ಕೋಟಾದಡಿಯಲ್ಲಿ ಅತೀ ಹೆಚ್ಚು ಟಿಕೆಟ್ ಪಡೆದವರು ಬಣಜಿಗರೆ. ಇದರ ಹಿಂದೆ ಜಗದೀಶ್ ಶೆಟ್ಟರ್‌ನ ಕೃಪೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚಾಗಿ ಬಿಜೆಪಿಯ ಬ್ರಾಹ್ಮಣ್ಯದ ತಂತ್ರವಿದೆ.


ಕಾಶಪ್ಪನವರ್

ಹೀಗೆ ಬಣಜಿಗರು ಶತಶತಮಾನಗಳಿಂದಲೂ ಪಂಚಮಸಾಲಿಗಳ ಮೇಲೆ ಆಧಿಪತ್ಯ ಸಾಧಿಸುವುದಕ್ಕೆ, ಪಂಚಮಸಾಲಿಗಳ ಮೌಢ್ಯ ಒಂದು ಕಾರಣವಾದರೆ ಆ ಸಮುದಾಯದಲ್ಲಿ ಜಾಗೃತಿ ಮೂಡಿಸಬಲ್ಲ ನಾಯಕತ್ವ ಇಲ್ಲದಿರುವುದು ಇನ್ನೊಂದು ಕಾರಣ. ಈ ಕೊರತೆಯೇ ವಾಸ್ತವದಲ್ಲಿ ಅವರನ್ನು ಅನ್ಯಾಯದ ವಿರುದ್ಧ ಮೌನಿಗಳನ್ನಾಗಿ ಮಾಡಿದೆ. ಬಹಳ ದಿನಗಳ ನಂತರ ಶಿವಶಂಕ್ರಪ್ಪ ಕಾಶಪ್ಪನವರ್ ಎಂಬ ದಿಟ್ಟ ಹುಂಬ ನಾಯಕನಾಗಿ ಅವತರಿಸಿದ ನಂತರವೇ ಪಂಚಮಸಾಲಿಗಳಿಗೆ ರಾಜಕೀಯವಾಗಿ ಒಂದಿಷ್ಟು ಚಾಲನೆ ಸಿಕ್ಕಿದ್ದು. ಕಾಶಪ್ಪನವರ್ ಪಂಚಮಸಾಲಿಗಳಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಪಂಚಮಸಾಲಿಗಳ ರಾಜ್ಯ ಸಂಘಟನೆಯನ್ನು ಕಟ್ಟಿ ಹೋರಾಡಿದ್ದರು. ಈಗ ಅವರೂ ಮರಣ ಹೊಂದಿದ್ದಾರೆ.

ಈ ಹಿಂದೆ ಭೀಮಣ್ಣ ಖಂಡ್ರೆ, ವಿಜಯ್ ಸಂಕೇಶ್ವರ್, ಜಗದೀಶ್ ಶೆಟ್ಟರ್‌ರಂಥ ಬಣಜಿಗರೆಲ್ಲಾ ಸೇರಿಕೊಂಡು ಎಲ್ಲಾ ಲಿಂಗಾಯತ ಒಳಪಂಗಡಗಳನ್ನೂ ಸೇರಿಸಿ ರಾಜ್ಯ ಮಟ್ಟದಲ್ಲಿ ಒಂದು ಐಕ್ಯ ಲಿಂಗಾಯತ ಸಂಘಟನೆಯನ್ನು ಕಟ್ಟಿ ಅದಕ್ಕೆ ಅಧ್ಯಕ್ಷರಿಂದ ಹಿಡಿದು ಜಿಲ್ಲಾ ಮಟ್ಟದ ನಾಯಕತ್ವದ ತನಕ ಎಲ್ಲಾ ಕಡೆಯೂ ಬಣಜಿಗ ಲಿಂಗಾಯತರನ್ನು ತುಂಬುವ ಪಿತೂರಿ ನಡೆಸಿದ್ದರು. ಆ ಸಮಯದಲ್ಲಿ ಇದೇ ಕಾಶಪ್ಪನವರ್ ತಾನೇ ಪಂಚಮಸಾಲಿಗಳ ಅಧ್ಯಕ್ಷನೆಂದು ಘೋಷಿಸಿಕೊಂಡು "ಕಿತ್ತೂರು ಚೆನ್ನಮ್ಮಳ ಸಂಸ್ಥಾನವನ್ನು ಹಾಳುಗೆಡವಿದ ಮಲ್ಲಪ್ಪ ಶೆಟ್ಟಿ ಕುಲದಿಂದ (ಬಣಜಿಗ) ದೂರ ಉಳಿಯಿರಿ, ಅವರೊಂದಿಗೆ ನೆಂಟಸ್ತಿಕೆ ಬೆಳಸಬೇಡಿ" ಎಂದು ಹೇಳುತ್ತಾ ರಾಜ್ಯಾದ್ಯಂತ ಪಂಚಮಸಾಲಿಗಳನ್ನು ಸಂಘಟಿಸಲು ಓಡಾಡಿದರು. ಪ್ರತೀ ಊರಿನಲ್ಲಿ ರಾಣಿ ಚೆನ್ನಮ್ಮಳ ಮಹಿಳಾ ಬ್ಯಾಂಕ್ ಸ್ಥಾಪಿಸುವ ಕೆಲಸಕ್ಕೂ ಕೈ ಹಾಕಿದರು. ಹೀಗೆ ಪಂಚಮಸಾಲಿಗಳನ್ನು ಸಂಘಟಿಸುತ್ತಲೇ ಕಾಶಪ್ಪನವರ್ ಮರಣ ಹೊಂದಿದರು.

ತದನಂತರದಲ್ಲಿ ಬಂದ ಜಮಖಂಡಿಯ ಸಿದ್ದು ಸವದಿ, ಬೆಳಗಿಯ ಮುರಗೇಶ್ ನಿರಾಣಿ, ಬಿಜಾಪುರದ ಬಸವನಗೌಡ ಪಾಟೀಲ್ ಯತ್ನಾಳ್ ಮುಂತಾದ ಪಂಚಮಸಾಲಿಗರು ಕಾಶಪ್ಪನವರ ಕೆಲಸವನ್ನು ಮುಂದುವರೆಸದೇ ಬಿಜೆಪಿಯ ಕಮಲದ ಕೆಳಗೆ ಕೆಸರು ಮೆತ್ತಿಕೊಂಡು ಕುಳಿತುಬಿಟ್ಟರು. ಇವರ ನಿರ್ಲಕ್ಷ್ಯತನದ ಪರಿಣಾಮವಾಗಿ ಬಿಜೆಪಿಯಲ್ಲಿ ಬಣಜಿಗರ ಪ್ರಾಬಲ್ಯ ಹೆಚ್ಚಾಯಿತು. ಬಾದಾಮಿಯ ಪಟ್ಟಣಶೆಟ್ಟಿ, ಬಿಜಾಪುರದ ಅಪ್ಪು ಪಟ್ಟಣಶೆಟ್ಟಿ, ಸಿಂಧಗಿಯ ಅಶೋಕ ಶಾಬಾದಿ, ರಾಯದುರ್ಗದ ಮಹಾದೇವ ಯಾದವಾಡ, ಬೈಲಹೊಂಗಲದ ಮೆಟಗುಡ್ಡ, ಕಿತ್ತೂರಿನ ಸುರೇಶ್ ಮಾರಿಹಾಳ, ಹಾನಗಲ್‌ನ ಸಿ.ಎಂ. ಉದಾಸಿ, ಸಿಗ್ಗಾಂವ್‌ನ ರಾಜಶೇಖರ್ ಸಿಂಧೂರ, ಬಾಲ್ಕಿಯ ಪ್ರಕಾಶ್ ಖಂಡ್ರೆ, ಹುಬ್ಬಳ್ಳಿಯ ಜಗದೀಶ್ ಶೆಟ್ಟರ್, ಅರೆಭಾವಿಯ ವಿ.ಎಸ್. ಕೌಜಲಗಿ, ಬೆಳಗಾಂವ್‌ನ ಸುರೇಶ್ ಅಂಗಡಿ – ಹೀಗೆ ಬಣಜಿಗ ಸಮುದಾಯದಿಂದ



ಶೆಟ್ಟರ್


ಅಪ್ಪಸಾಹೇಬ್

ಶಾಸಕರಾದವರ, ಮಂತ್ರಿಯಾದವರ, ಸಂಸದರಾದವರ ಪಟ್ಟಿ ಬೆಳೆಯುತ್ತಲೇ ಹೋಯಿತು.

ಪಂಚಮಸಾಲಿಗಳೂ ಕೂಡ ಎಲ್ಲಿಯತನಕ ಬಣಜಿಗರ ಈ ದೌರ್ಜನ್ಯ ಅವಮಾನ, ಅನ್ಯಾಯವನ್ನು ಸಹಿಸಿಕೊಂಡಿರುತ್ತಾರೆ? ಈಗ ಅವರಲ್ಲಿಯೂ ಒಂದಿಷ್ಟು ಜಾಗೃತಿ ಮೂಡಿದೆ. ಹಣ ಕೊಡೋದಕ್ಕೆ ಪಂಚಮಸಾಲಿಗಳು ಬೇಕು. ಪಲ್ಲಕ್ಕಿ ಹೊರೋದಕ್ಕೆ ಪಂಚಮಸಾಲಿಗಳು ಬೇಕು. ಚಾಕರಿ ಮಾಡುವುದಕ್ಕೆ ಪಂಚಮಸಾಲಿಗಳು ಬೇಕು. ಓಟು ಹಾಕುವುದಕ್ಕೆ ಪಂಚಮಸಾಲಿಗಳು ಬೇಕು. ಆದರೆ ಅಧಿಕಾರಕ್ಕೆ ಮಾತ್ರ ಪಂಚಮಸಾಲಿಗಳು ಬೇಡ ಎಂದರೆ ಹೇಗೆ ಎಂಬ ಪ್ರಶ್ನೆ ಅವರನ್ನೂ ಈಗ ಕಾಡುತ್ತಿದೆ. ತಾವು ಬಿಜೆಪಿಯಲ್ಲಿ ಮುಂದುವರೆದರೆ ಬಣಜಿಗರು ನಿರಂತರವಾಗಿ ಅನ್ಯಾಯ ಮಾಡುತ್ತಲೇ ಇರುತ್ತಾರೆ, ತಮ್ಮ ರಾಜಕೀಯ ಭವಿಷ್ಯ ಕತ್ತಲಾಗುತ್ತದೆ ಎಂದರಿತು ಪಂಚಮಸಾಲಿ ನಾಯಕರು ಸಾಮೂಹಿಕವಾಗಿ ಜೆಡಿಎಸ್, ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ. ಈಗಾಗಲೇ ಮಂಜುನಾಥ್ ಕುನ್ನೂರ ಬಿಜೆಪಿ ತೊರೆದು ಕಾಂಗ್ರೆಸ್ ಪಾಳೆಯ ಸೇರಿ


ಪ್ರಕಾಶ್ ಖಾಂಡ್ರ


ಅಂಗಡಿ

ಅವರಿಗೆಲ್ಲಾ ದಾರಿ ತೋರಿಸಿಯಾಗಿದೆ. ಬಸನಗೌಡ ಪಾಟೀಲ್ ಯತ್ನಾಳ್ ಜೆಡಿಎಸ್ ಕದ ತಟ್ಟುತ್ತಿದ್ದಾರೆ. ಉಳಿದವರು ಅವರ ದಾರಿಯಲ್ಲಿ ಹೋಗಲು ಕಾಯುತ್ತಿದ್ದಾರೆ. ಈಗ ಬಿಜೆಪಿಯೆಂದರೆ ಲಿಂಗಾಯತರ ಪಕ್ಷ ಎಂದು ಬಿಂಬಿತವಾಗಿದೆ. ಮುಂದಿನ ದಿನಗಳಲ್ಲಿ ಬಿಜೆಪಿಯೆಂದರೆ ಬಣಜಿಗ ಶೆಟ್ಟರ ಪಕ್ಷ ಎಂದಾಗುವುದರಲ್ಲಿ ಅನುಮಾನವಿಲ್ಲ. ಹಾಗೇನಾದರೂ ಆದರೆ, ರಾಜ್ಯದಲ್ಲಿ ಮುಂದೆಂದೂ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ.

● ಕುಮಾರ್ ಬುರಡಿಕಟ್ಟಿ



ಈ ಹೊತ್ತು ಬಿಜೆಪಿ ಅಧಿಕಾರಕ್ಕೆ ಬಂದಿದೆಯೆಂದರೆ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾರೆಂದರೆ ಅದಕ್ಕೆ ಒಟ್ಟಾರೆ ಲಿಂಗಾಯತರ, ಅದರಲ್ಲೂ ವಿಶೇಷವಾಗಿ ಲಿಂಗಾಯತರಲ್ಲೇ ಅತ್ಯಂತ ದೊಡ್ಡ ಉಪಪಂಗಡವಾದ ಪಂಚಮಸಾಲಿಗಳ ಪಾತ್ರ ಬಹುದೊಡ್ಡದು. ಆದರೆ ಅಧಿಕಾರಕ್ಕೇರಿದೊಡನೆ ಪಂಚಮಸಾಲಿ ಸಮುದಾಯಕ್ಕೆ ಯಡ್ಡಿ ಗುದ್ದುತ್ತಿರುವುದನ್ನು ನೋಡಿದರೆ ಎಂಥವನಿಗೂ ಅನ್ಯಾಯದ ಅರಿವಾಗದಿರದು. ಪಂಚಮಸಾಲಿ ಸಮುದಾಯಕ್ಕೆ ಬಿಜೆಪಿ ಮಾಡುತ್ತಿರುವ ಅನ್ಯಾಯ, ಅವಮಾನ ಇಂದಲ್ಲ ನಾಳೆ ನಿಲ್ಲುತ್ತದೆಯೆಂದು ಆ ಸಮುದಾಯದ ನಾಯಕರು ಇಷ್ಟು ದಿನ ಕಾಯ್ದರು. ಈಗ ಲೋಕಸಭಾ ಚುನಾವಣೆಗಾಗಿ ಟಿಕೆಟ್ ಹಂಚುವಲ್ಲಿಯೂ ಆ ಅನ್ಯಾಯವನ್ನು ಮುಂದುವರೆಸಿದ್ದರಿಂದ ಆ ಸಮುದಾಯದ ನಾಯಕರೆಲ್ಲರೂ ಬಿಜೆಪಿ ತೊರೆದು ಕಾಂಗ್ರೆಸ್ಸಿಗೋ, ಜೆಡಿಎಸ್‌ಗೋ ಸಾಮೂಹಿಕವಾಗಿ ಗುಳೇ ಹೊರಡಲು ಸಿದ್ಧರಾಗುತ್ತಿದ್ದಾರೆ. ಕೂಡಲಸಂಗಮದಲ್ಲಿರುವ ಪಂಚಮಸಾಲಿ ಮಠದ ಜಯಬಸವ ಮೃತ್ಯುಂಜಯ ಸ್ವಾಮಿಗಳು ಅವರೆಲ್ಲರ ಬೆನ್ನಿಗೆ ನಿಂತಿದ್ದಾರೆ. ಇದು ಏರಿದ ಏಣಿಯನ್ನು ಒದೆಯುವ ಜಾಯಮಾನದ ಬಿಜೆಪಿಯ ಅವಸಾನದ ಆರಂಭವಷ್ಟೆ.

ಧರ್ಮರಕ್ಷಣೆಗಾಗಿ ಚಾಪ್ಲಿನ್ ಪ್ರತಿಮೆಗೆ ನಿರ್ಬಂಧ

"ನಗಬೇಡಿ, ಹುಷಾರ್!"

ಇದೇ ಮಾರ್ಚ್ 13, ಶುಕ್ರವಾರ, ಒತ್ತಿನೆಣೆಯಲ್ಲಿ 'ಹೌಸ್‌ಫುಲ್' ಚಲನಚಿತ್ರಕ್ಕಾಗಿ ಚಾಪ್ಲಿನ್ ಪ್ರತಿಮೆ ಸ್ಥಾಪಿಸುವುದಕ್ಕಾಗಿ '8x8' ಆಳ ಮತ್ತು ಅಗಲದ ಪಾಯವನ್ನು ಕೆಲಸಗಾರರು ತೋಡುತ್ತಿದ್ದಾಗ, ಅಲ್ಲಿಗೆ ಸುರೇಶ ಬಗ್ವಾಡಿ ಎಂಬ ಸ್ಥಳೀಯ ತರುಣರೊಬ್ಬರ ನೇತೃತ್ವದಲ್ಲಿ ಸುಮಾರು 15 ಜನರ ಗುಂಪೊಂದು ಆಗಮಿಸಿ, ಪಾಯದ ಕಾಮಗಾರಿಯನ್ನು ನಿಲ್ಲಿಸುವಂತೆ ಒತ್ತಾಯಿಸಿತು. ಗುಂಪಿನ ನಾಯಕ ಸುರೇಶ ಬಗ್ವಾಡಿ ಮತ್ತು ಇತರರ ಪ್ರಕಾರ "ಚಾರ್ಲಿ ಚಾಪ್ಲಿನ್ ಕ್ರೈಸ್ತ ಮತ್ತು ವಿದೇಶಿ."

ಹೇಮಂತ ಹೆಗ್ಡೆ ಕರ್ನಾಟಕದ ಯುವ ಚಲನಚಿತ್ರ ನಿರ್ದೇಶಕರಲ್ಲಿ ಒಬ್ಬರು. ಇವರು ಈಗಾಗಲೇ 4 ಹಿಂದಿ ಚಿತ್ರಗಳ ನಿರ್ದೇಶನದಲ್ಲಿ ಪಾಲುಗೊಂಡಿದ್ದು ಖ್ಯಾತ ನಿರ್ಮಾಪಕ, ನಿರ್ದೇಶಕ ಸುಭಾಷ್ ಘೈ ಕೈಕೆಳಗೆ ಕೂಡ ಕೆಲಸ ಮಾಡಿದ ಅನುಭವ ಉಳ್ಳವರು. ಹಿರಿಯ ಪತ್ರಕರ್ತ ದಿವಸ್ಪತಿ ಹೆಗ್ಡೆಯವರ ಮಗ ಹೇಮಂತ ಹೆಗ್ಡೆ ಸದ್ಯಕ್ಕೆ ಕನ್ನಡದಲ್ಲಿ "ಹೌಸ್‌ಫುಲ್" ಎಂಬ ಚಿತ್ರವನ್ನು ನಿರ್ದೇಶಿಸುತ್ತಿದ್ದು, ಚಿತ್ರೀಕರಣದ ಮುಕ್ಕಾಲು ಭಾಗ ಈಗಾಗಲೇ ಮುಗಿದಿದೆ. 'ಹೌಸ್‌ಫುಲ್' ಒಂದು ಹಾಸ್ಯ ಪ್ರಧಾನ ಚಿತ್ರವಾಗಿದ್ದು, ಅದರಲ್ಲಿ ಲೋಕಖ್ಯಾತನಟ ಚಾರ್ಲಿ ಚಾಪ್ಲಿನ್‌ನ ಭಾರೀ ಪ್ರತಿಮೆಯ ಸುತ್ತ ನಡೆಯುವ ಡ್ಯಾನ್ಸ್ ದೃಶ್ಯವೊಂದನ್ನು ಅಳವಡಿಸಿಕೊಳ್ಳಲು ನಿರ್ದೇಶಕರು ನಿರ್ಧರಿಸಿದ್ದರು. ಉಡುಪಿ ಜಿಲ್ಲೆಯ ಉತ್ತರ ತುದಿಯಲ್ಲಿರುವ ಬೈಂದೂರು ಸಮೀಪದ ಒತ್ತಿನೆಣೆ ಎಂಬಲ್ಲಿನ ಕಡಲತೀರದಲ್ಲಿ ಈ ದೃಶ್ಯವನ್ನು ಚಿತ್ರೀಕರಿಸಲು ಚಿತ್ರತಂಡ ಸಿದ್ಧತೆ ನಡೆಸಿತ್ತು. ದೃಶ್ಯಕ್ಕಾಗಿ, ನಿರ್ದೇಶಕರು, ಚಾರ್ಲಿ ಚಾಪ್ಲಿನ್‌ನ 67 ಅಡಿ ಎತ್ತರದ ಕಲ್ಲು, ಲೋಹ, ಕಾಂಕ್ರೀಟ್ ಮತ್ತು ಫೈಬರ್ ಗ್ಲಾಸ್‌ನ ಮಿಶ್ರ ಮಾಧ್ಯಮದ ಒಂದು ಶಾಶ್ವತ ಪ್ರತಿಮೆಯನ್ನು ಅಂದಾಜು 35 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿದ್ದರು. ಈ ಪ್ರತಿಮೆಯನ್ನು ಪ್ರಾಯೋಜಿಸಲು ರಾಜೇಶ್ ಎಕ್ಸ್‌ಪೋರ್ಟ್ಸ್ ಎಂಬ ಸಂಸ್ಥೆ ಮುಂದೆ ಬಂದಿತ್ತು. ಪ್ರತಿಮೆಯ ನಿರ್ಮಾಣಕ್ಕಾಗಿ ಚಿತ್ರ ನಿರ್ದೇಶಕರು ಮೈಸೂರಿನ ಖ್ಯಾತ ಕಲಾಶಿಕ್ಷಣ ಸಂಸ್ಥೆ 'ಕಾವಾ' (ಚಾಮರಾಜೇಂದ್ರ ಕಲಾಶಾಲೆ) ಪದವೀಧರ ಚೇತನ ಮುಂಡಾಡಿಯವರನ್ನು ನೇಮಿಸಿಕೊಂಡಿದ್ದರು. ಚೇತನ್ ಅವರಿಗೆ ಪ್ರತಿಮೆಯ ಕಾಮಗಾರಿಯಲ್ಲಿ ಸಹಕರಿಸಲು 'ಕಾವಾ'ದ 25 ವಿದ್ಯಾರ್ಥಿಗಳು ಇನ್ನೇನು ಒತ್ತಿನೆಣೆಗೆ ಬರುವವರಿದ್ದರು. ಈ ಪ್ರತಿಮೆಯ ನಿರ್ಮಾಣ ಮತ್ತು ಒತ್ತಿನೆಣೆಯ ಕಡಲತೀರದ ಚಿತ್ರೀಕರಣಕ್ಕಾಗಿ ನಿರ್ದೇಶಕರು ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಮತ್ತು ಜಿಲ್ಲಾಡಳಿತಗಳ ಪರವಾನಗಿ ಪಡೆದುಕೊಂಡಿದ್ದರು. ಅವರು ಹೇಳುವ ಪ್ರಕಾರ ಈ ಪ್ರತಿಮೆಯ ಸಲುವಾಗಿ ಈಗಾಗಲೇ 65,000 ರೂಪಾಯಿಗಳಷ್ಟು ವೆಚ್ಚವಾಗಿದೆ. ಆದರೆ ಇದೀಗ, ಒತ್ತಿನೆಣೆಯಲ್ಲಿ ತಮ್ಮ ಚಿತ್ರೀಕರಣದ ಯೋಜನೆಯನ್ನೇ ರದ್ದುಪಡಿಸಬೇಕಾದ ಸನ್ನಿವೇಶವೊಂದು ನಿರ್ದೇಶಕರಿಗೆ ಎದುರಾಗಿದೆ.




ಇದೇ ಮಾರ್ಚ್ 13, ಶುಕ್ರವಾರ, ಒತ್ತಿನೆಣೆಯಲ್ಲಿ ಚಾಪ್ಲಿನ್ ಪ್ರತಿಮೆ ಸ್ಥಾಪಿಸುವುದಕ್ಕಾಗಿ '8x8' ಆಳ ಮತ್ತು ಅಗಲದ ಪಾಯವನ್ನು ಕೆಲಸಗಾರರು ತೋಡುತ್ತಿದ್ದಾಗ, ಅಲ್ಲಿಗೆ ಸುರೇಶ ಬಗ್ವಾಡಿ ಎಂಬ ಸ್ಥಳೀಯ ತರುಣರೊಬ್ಬರ ನೇತೃತ್ವದಲ್ಲಿ ಸುಮಾರು 15 ಜನರ ಗುಂಪೊಂದು ಆಗಮಿಸಿ, ಪಾಯದ ಕಾಮಗಾರಿಯನ್ನು ನಿಲ್ಲಿಸುವಂತೆ ಒತ್ತಾಯಿಸಿತು. ಗುಂಪಿನ ನಾಯಕ ಸುರೇಶ ಬಗ್ವಾಡಿ ಮತ್ತು ಇತರರ ಪ್ರಕಾರ "ಚಾರ್ಲಿ ಚಾಪ್ಲಿನ್ ಕ್ರೈಸ್ತ ಮತ್ತು ವಿದೇಶಿ. ಈ ಪ್ರತಿಮೆ ನಿಲ್ಲಿಸಲು ಪಾಯ ತೋಡಿದ ಸ್ಥಳದ ಸಮೀಪದಲ್ಲೇ ಸೋಮೇಶ್ವರ ದೇವಾಲಯವಿದ್ದು ಅಲ್ಲಿಗೆ ಬರುವ ಭಕ್ತಾದಿಗಳು ಚಾಪ್ಲಿನ್‌ನ ಮುಖ ನೋಡಿಯೇ ದೇವಾಲಯಕ್ಕೆ ಪ್ರವೇಶಿಸಬೇಕಾಗುತ್ತದೆ. ಕ್ರಮೇಣ ಅದು ಒಂದು ಪಿಕ್‌ನಿಕ್ ಸ್ಥಳವಾಗಿ ದೇವಾಲಯದ ಪಾವಿತ್ರ್ಯತೆಗೆ ಭಂಗ ಬರುತ್ತದೆ. ಚಾಪ್ಲಿನ್‌ನ ಮೂರ್ತಿಗೆ ಕ್ಯಾಂಡಲ್ ಹಚ್ಚುವುದು ಮೊದಲಾದ ಅನಗತ್ಯ ಸಮಸ್ಯೆಗಳು ತಲೆದೋರುತ್ತವೆ." ನಿರ್ದೇಶಕ ಹೇಮಂತ ಹೆಗ್ಡೆ ಅದೇ ದಿನ ಸಂಜೆ ಉಡುಪಿಯಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸುತ್ತ "ಆ ಗುಂಪಿನವರು ಯಾವ ಸಂಘಟನೆಗೆ ಸೇರಿದವರು ಎಂದು ತನಗೆ ಗೊತ್ತಿಲ್ಲ. ಸುರೇಶ್ ಬಗ್ವಾಡಿ ಒಬ್ಬರನ್ನು ಬಿಟ್ಟು ಬೇರೆ ಯಾರ ಹೆಸರು ಕೂಡ ಗೊತ್ತಿಲ್ಲ" ಎಂದರು. ಆದರೆ ಸ್ಥಳೀಯ ಪತ್ರಿಕೆಯೊಂದರ ಪ್ರಕಾರ ಅವರೆಲ್ಲ ಹಿಂದೂ ಜಾಗರಣ ವೇದಿಕೆಯವರು. ಆ ಗುಂಪಿನಲ್ಲಿದ್ದವರು ಬಲಾತ್ಕಾರವಾಗಿ, ಪ್ರತಿಮೆಯ ಪಾಯದ ಗುಂಡಿಯನ್ನು ಮುಚ್ಚಿಸಿದ್ದೇ ಅಲ್ಲದೆ ಒತ್ತಿನೆಣೆಯಲ್ಲೇ ಆಗಲಿ, ಜಿಲ್ಲೆಯಲ್ಲಿ ಬೇರೆ ಎಲ್ಲಿಯೇ ಆಗಲಿ, ತಾವು ಚಾಪ್ಲಿನ್ ಪ್ರತಿಮೆ ನಿರ್ಮಾಣ ಆಗಲು ಬಿಡುವುದಿಲ್ಲ ಎಂದು ಸಹ ಘೋಷಿಸಿದರು. ನಿರ್ದೇಶಕರು ಈ ಗುಂಪಿನ ನಾಯಕ ಸುರೇಶ ಬಗ್ವಾಡಿಗೆ, ಪ್ರತಿಮೆ ನಿರ್ಮಾಣಕ್ಕೆ ಸರ್ಕಾರ ನೀಡಿದ ಪರವಾನಗಿ ಪತ್ರಗಳನ್ನು ತೋರಿಸಿದಾಗ, ಬಗ್ವಾಡಿ "ಅದಕ್ಕೆಲ್ಲ ನಾವು ಕೇರ್ ಮಾಡುವುದಿಲ್ಲ. ನೀವು ಬೇಕಾದರೆ ನನ್ನ ಮೇಲೆ ಕೇಸ್ ಹಾಕಿ. ಈಗಲೇ ನನ್ನ ಮೇಲೆ 10 ಕೇಸಿದೆ. ನಿಮ್ಮದು 11ನೆಯದ್ದಾಗುತ್ತದೆ; ನೋಡಿ ಬೇಕಾದರೆ" ಎಂದು ತನ್ನ ಡೈರಿಯಲ್ಲಿ ನಮೂದಿಸಲಾದ ಕೇಸು ನಂಬರುಗಳನ್ನು ತೋರಿಸಿದರು. "ನಾವು ಎಷ್ಟು ಮಾತ್ರಕ್ಕೂ ಚಾಪ್ಲಿನ್ ಪ್ರತಿಮೆ ನಿಲ್ಲಿಸಲು ಬಿಡುವುದಿಲ್ಲ; ನೀವು ವಿವೇಕಾನಂದ ಅಥವಾ ನೇತಾಜಿ ಸುಭಾಷ್ ಚಂದ್ರ ಬೋಸರ ಪ್ರತಿಮೆ ಸ್ಥಾಪಿಸಿ, ನಾವು ಸಹಕಾರ ಕೊಡುತ್ತೇವೆ" ಎಂಬ 'ಶರತ್ತು ಬದ್ಧ' ಭರವಸೆಯನ್ನು ಸುರೇಶ್ ಬಗ್ವಾಡಿ ಕೊಟ್ಟಾಗ ನಿರ್ದೇಶಕರು, "ತಮ್ಮ ಚಿತ್ರಕತೆಗೆ ವಿವೇಕಾನಂದ, ನೇತಾಜಿ ಸುಭಾಷ್ ಚಂದ್ರ ಬೋಸ್ ಸರಿ ಹೊಂದುವುದಿಲ್ಲ, ಅದಕ್ಕೆ ಚಾರ್ಲಿ ಚಾಪ್ಲಿನ್ ಪ್ರತಿಮೆಯೇ ಬೇಕು. ಚಿತ್ರೀಕರಣಕ್ಕೆ ಸುಮಾರು 3 ಲಕ್ಷ ರೂಪಾಯಿ ವೆಚ್ಚದ ತಾತ್ಕಾಲಿಕ ಪ್ರತಿಮೆಯೇ ಸಾಕಾಗುತ್ತದೆ" ಎಂದರು. ಬಗ್ವಾಡಿ ಮತ್ತು ತಂಡದವರು ಈ ರಾಜಿ ಸೂತ್ರವನ್ನೂ ಒಪ್ಪಲಿಲ್ಲ. ಈ ತಂಡ ಒಂದು ಅಕ್ರಮಕೂಟ ಹಾಗೂ ಅದರ ವರ್ತನೆ ನಿಸ್ಸಂದೇಹವಾಗಿ ಕ್ರಿಮಿನಲ್. ಆದರೆ ನಿರ್ದೇಶಕರು ಅವರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಗೋಜಿಗೆ ಹೋಗಿಲ್ಲ.

"ದೂರು ಕೊಟ್ಟರೆ, ನಾನು ನನ್ನ ಬೇರೆ ಎಲ್ಲಾ ಕೆಲಸ ಬಿಟ್ಟು ಮೇಲಿಂದ ಮೇಲೆ ಪೊಲೀಸ್ ಠಾಣೆಗೆ ಎಡತಾಕುತ್ತಿರಬೇಕಾಗುತ್ತದೆ" ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಹಾಗಾಗಿ 'ಹೌಸ್‌ಫುಲ್' ನಿರ್ದೇಶಕರು ಒತ್ತಿನೆಣೆಯಲ್ಲಿ ತಮ್ಮ ಚಿತ್ರೀಕರಣದ ಶೆಡ್ಯೂಲನ್ನು ರದ್ದುಪಡಿಸಿದ್ದಾರೆ. ಯುವ ಕಲಾವಿದ ಚೇತನ್ ಮುಂಡಾಡಿಯವರ ಮೊದಲ ಪ್ರಾಜೆಕ್ಟೇ ಅವರ ಕೈತಪ್ಪಿಹೋಗಿದೆ.

ಈ ಪ್ರಕರಣದ ಬಗ್ಗೆ ನೀಡಲಾದ ತಮ್ಮ ಹೇಳಿಕೆಯಲ್ಲಿ ಉಡುಪಿಯ ವಿಹಿಂಪ ಮತ್ತು ಭಜರಂಗದಳಗಳು "ನಿರ್ದೇಶಕರು ಚಾರ್ಲಿ ಚಾಪ್ಲಿನ್ ಬದಲು ತೆನಾಲಿ ರಾಮಕೃಷ್ಣರ ಪ್ರತಿಮೆ ನಿರ್ಮಿಸಲಿ" ಎಂಬ ಸಲಹೆಯನ್ನು ನೀಡಿವೆ! ಈ ಸಂಘಟನೆಗಳ ಪ್ರಕಾರ ಚಾಪ್ಲಿನ್ ಪ್ರತಿಮೆ ನಿರ್ಮಾಣದ ಹಿಂದೆ ಷಡ್ಯಂತ್ರವಿದೆ (ಮತಾಂತರದ್ದಿರಬಹುದೆ?). ಚಾರ್ಲಿ ಚಾಪ್ಲಿನ್ (1889-1977) ಈಗ ಇದ್ದಿದ್ದರೆ ತನ್ನ ಪ್ರತಿಮೆ ನಿರ್ಮಾಣಕ್ಕೆ ಮೊದಲೇ ಆ ಕುರಿತು ವ್ಯಕ್ತವಾದ ಈ ಪ್ರತಿರೋಧವನ್ನು ಕಂಡು ವಿಷಾದದಲ್ಲಿ ನಗುತ್ತಿದ್ದ. ಚಾಪ್ಲಿನ್‌ಗೆ ಹಾಸ್ಯವೇ ನವರಸಗಳನ್ನೂ ಅಭಿವ್ಯಕ್ತಿಸುವ ಮಾಧ್ಯಮವಾಗಿತ್ತು. 'ದಿ ಗ್ರೇಟ್ ಡಿಕ್ಟೇಟರ್' ಒಂದನ್ನು ಹೊರತುಪಡಿಸಿ ಅವನ ಇತರ ಎಲ್ಲ ಮುಖ್ಯ ಚಿತ್ರಗಳೂ ಮೂಕಚಿತ್ರಗಳಾಗಿದ್ದರೂ, ಅವು ಈಗಲೂ ಮೊದಲಿನಷ್ಟೇ ಜನಪ್ರಿಯವಾಗಿವೆ. ಸಿಟಿ ಲೈಟ್ಸ್, ಮಾಡರ್ನ್ ಟೈಮ್ಸ್, ದಿ ಕಿಡ್, ದಿ ಗೋಲ್ಡ್‌ರಶ್ ಮುಂತಾದ ಅವನ ಶ್ರೇಷ್ಠ ಚಿತ್ರಗಳಲ್ಲಿ ಚಾಪ್ಲಿನ್ ನಿರುದ್ಯೋಗದ ಬವಣೆ, ಬಡವರ ಹಸಿವು, ಶ್ರೀಮಂತರ ದುರಾಶೆ, ಅಧಿಕಾರಶಾಹಿಯ ದರ್ಪ, ಬಂಡವಾಳಶಾಹಿಯ ಕ್ರೌರ್ಯ ಮತ್ತು ಆಧುನಿಕ ಔದ್ಯಮಿಕ ಸಂಸ್ಕೃತಿಯ ಯಾಂತ್ರಿಕತೆಗಳನ್ನು ಹಾಸ್ಯದಲ್ಲಿ ಒಮ್ಮೊಮ್ಮೆ ವಿಕಟ ವ್ಯಂಗ್ಯದಲ್ಲಿ ಚಿತ್ರಿಸಿದ. ಅಧಿಕಾರ, ಶ್ರೀಮಂತಿಕೆ ಮತ್ತು ತೋಳ್ಬಲಗಳ ಚಿತ್ರಣ ಅವನ ಚಿತ್ರಗಳಲ್ಲಿ ಎಷ್ಟು ಕ್ರೂರವಾಗಿದೆಯೋ ಅಷ್ಟೇ ಹಾಸ್ಯಾಸ್ಪದವಾಗಿಯೂ ಇದೆ.

ತನ್ನ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರದಲ್ಲಿ ಚಾಪ್ಲಿನ್ ಹಿಟ್ಲರನನ್ನೇ ಲೇವಡಿ ಮಾಡುತ್ತಾನೆ. (ಹಿಟ್ಲರನಿಗೆ ಹೋಲಿಸಿದರೆ ಚಿಲ್ಲರೆ ಮನುಷ್ಯನಾದ ನರೇಂದ್ರ ಮೋದಿಯನ್ನು ಹಾಸ್ಯಾಸ್ಪದ ವ್ಯಕ್ತಿಯ ಹಾಗೆ ಚಿತ್ರಿಸಲು ಎಂತಹ ಪ್ರತಿಭೆ ಬೇಕು, ಯೋಚಿಸಿ). ಆದರೆ ಫ್ಯಾಸಿಸಂ ಮತ್ತು ಎಲ್ಲ ಬಗೆಯ ಯಜಮಾನಿಕೆಗಳಿಗೂ ನಗುವಿನಷ್ಟು ಅಪಥ್ಯ ಇನ್ನೊಂದಿಲ್ಲ. ಜನರ ತಿರಸ್ಕಾರದ ನಗು ಸಿಂಹಾಸನಗಳನ್ನೇ ಅಲ್ಲಾಡಿಸುತ್ತದೆ. ಅಧಿಕಾರದ ಬಗ್ಗೆ ತಿರಸ್ಕಾರ, ಬಡವರ ಬಗ್ಗೆ ಅನುಕಂಪ ಮತ್ತು ಎಡಪಂಥೀಯ ಒಲವುಗಳಿಂದಾಗಿ ಚಾಪ್ಲಿನ್ ಅಮೆರಿಕದಲ್ಲಿ ಸರ್ಕಾರ ಮತ್ತು ಮಾಧ್ಯಮಗಳ ವಿರೋಧ ಕಟ್ಟಿಕೊಂಡಿದ್ದ. ಆತ ಕಮ್ಯುನಿಸ್ಟ್ ಪರ ಎಂದೇ ಸಂದೇಹಿಸಲಾಗಿತ್ತು. ದ್ವಿತೀಯ ಯುದ್ಧಾನಂತರ ಅಮೆರಿಕದಲ್ಲಿ ಕಮ್ಯೂನಿಸ್ಟ್ ಪರ ನಿಲುವುಳ್ಳವರು ಎಂದು ಭಾವಿಸಲಾದ ಬುದ್ಧಿಜೀವಿಗಳು, ಕಲಾವಿದರು ಮತ್ತು ಲೇಖಕರನ್ನು, ಅಮೆರಿಕದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ಸಮಿತಿಯೊಂದು ವಿಚಾರಣೆಗೆ ಒಳಪಡಿಸಿತು. ಮೆಕಾರ್ಥಿ ಎಂಬ ಸೆನೇಟರ್‌ನ ನಾಯಕತ್ವದ ಈ ಸಮಿತಿಯ ವಿಚಾರಣೆಗೆ ಹೆದರಿ



ಹೇಮಂತ್ ಹೆಗ್ಡೆಯ ಅಸಲೀ ಉದ್ದೇಶ?



ಚಾರ್ಲಿ ಚಾಪ್ಲಿನ್ ಪ್ರತಿಮೆ ಕುರಿತ ವಾದವಿವಾದದಿಂದಾಗಿ ಹೇಮಂತ್ ಹೆಗಡೆ ನಿರ್ದೇಶನದ 'ಹೌಸ್‌ಫುಲ್' ಚಿತ್ರ ಈಗ ಸಾಕಷ್ಟು ಪುಕ್ಕಟೆ ಪ್ರಚಾರ ಪಡೆದಿದೆ. ಆದರೆ ಅಸಲಿಗೆ ಈ ಹೇಮಂತ್ ಹೆಗಡೆ ಎಂತಹ ನಿರ್ದೇಶಕ, ಆತನ ಉದ್ದೇಶಗಳೇನು ಎಂಬುದರ ಬಗ್ಗೆ ಈಗ ಚರ್ಚೆಯಾಗುತ್ತಿಲ್ಲವಾದರೂ ಅದೂ ಮುಖ್ಯ ವಿಚಾರವಾಗಿದೆ.

ಹೇಳಿಕೇಳಿ, ಈ ಹೇಮಂತ್ ಅಂಥ ಹೇಳಿಕೊಳ್ಳುವಂತ ನಿರ್ದೇಶಕನೇನಲ್ಲ. ಈತ ಈ ಹಿಂದೆ ಕಿರುತೆರೆಗೆ ಒಂದಿಷ್ಟು ಧಾರಾವಾಹಿಗಳನ್ನು ನಿರ್ದೇಶಿಸಿ ಅವುಗಳಲ್ಲಿ ನಟಿಸಿದ್ದ ಕೂಡ. ಇನ್ನು ಸಿನಿಮಾ ವಿಚಾರಕ್ಕೆ ಬಂದರೆ ಹೇಮಂತ್ ಈವರೆಗೆ ನಿರ್ದೇಶಿಸಿರುವುದು 'ಊಲಾಲಾ' ಮತ್ತು 'ಧಡ್‌ಧಡ್' ಎಂಬೆರಡು ಅಸಡಾ ಬಸಡಾ ಚಿತ್ರಗಳನ್ನು ಮಾತ್ರ. ಈ ಎರಡೂ ಚಿತ್ರಗಳು ಎಷ್ಟು ಕಳಪೆಯಾಗಿದ್ದವು ಎಂದರೆ ಅವುಗಳು ಬಂದದ್ದು ಯಾವಾಗ, ಹೋದದ್ದು ಯಾವಾಗ ಎಂದು ಯಾರ ನೆನಪಿನಂಗಳದಲ್ಲೂ ಉಳಿದಿಲ್ಲ. ಇನ್ನು ತಾನು ಹಿಂದಿ ಚಿತ್ರ ಮಾಡ್ತೀನಿ ಅದೂ ಇದೂ ಎಂದು ಹೇಳಿಕೊಂಡು ತಿರುಗಾಡಿದ್ದ ಹೇಮಂತ್ ಕೆಲದಿನ ಸುಭಾಷ್ ಘಾಯ್‌ರೊಂದಿಗೆ ಇದ್ದುಬಂದದ್ದು ಬಿಟ್ಟರೆ ಮತ್ತೇನನ್ನೂ ಕಿಸಿದಿಲ್ಲ.

ಇಷ್ಟಕ್ಕೂ 35 ಲಕ್ಷ ರೂಪಾಯಿ ವೆಚ್ಚದಲ್ಲಿ ಕಲ್ಲು, ಸಿಮೆಂಟ್, ಫೈಬರ್ ಗ್ಲಾಸಿನಲ್ಲಿ ದುಬಾರಿ ಚಾರ್ಲಿ ಚಾಪ್ಲಿನ್ ಪ್ರತಿಮೆಯನ್ನು ಶಾಶ್ವತವಾಗಿ ಸ್ಥಾಪಿಸುವ ಉಸಾಬರಿ ಹೇಮಂತ್‌ಗೆ ಯಾಕೆ ಬೇಕಿತ್ತು? 'ಹೌಸ್‌ಫುಲ್' ಚಿತ್ರದುದ್ದಕ್ಕೂ ಬಾರದ ಆದರೆ ಕೇವಲ ಒಂದು ಹಾಡಿನಲ್ಲಿ ಮಾತ್ರ ಬರುವ ಈ ಪ್ರತಿಮೆಯನ್ನು ಎರಡೋ ಮೂರೋ ಲಕ್ಷ ರೂಪಾಯಿಗಳಲ್ಲಿ ನಿರ್ಮಿಸಿ ಚಿತ್ರೀಕರಣ ಮುಗಿದ ನಂತರ ಅದನ್ನು ತೆಗೆದುಹಾಕಬಹುದಿತ್ತಲ್ಲ? ಅದು ಬಿಟ್ಟು ತಾನು ಮಹಾನ್ ನಿರ್ದೇಶಕ ಎಂಬಂತೆ, ತಾನು ನಿರ್ದೇಶಿಸುತ್ತಿರುವುದು ಒಂದು ಅಪೂರ್ವ ಚಿತ್ರವೆಂಬಂತೆ ವರ್ತಿಸಲು ಹೇಮಂತ್ ಮುಂದಾಗಿದ್ದು ಯಾಕೆ?

ಇಷ್ಟಕ್ಕೂ ಸಾರ್ವಜನಿಕ ಸ್ಥಳದಲ್ಲಿ ಶಾಶ್ವತ ಪ್ರತಿಮೆಯನ್ನು ನಿರ್ಮಿಸಲು ಹೇಮಂತ್ ಹೆಗಡೆಗೆ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಯಾವ ಆಧಾರದ ಮೇಲೆ ಅನುಮತಿ ಕೊಟ್ಟಿತು? ನಾಳೆ ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಲ್‌ಮಾರ್ಕ್ಸ್ ಪ್ರತಿಮೆಯನ್ನು ಕಮ್ಯುನಿಸ್ಟರು, ಸಾವರ್ಕರ್ ಪ್ರತಿಮೆಯನ್ನು ಚೆಡ್ಡಿಗಳು, ಐಶ್ವರ್ಯ ರೈ ಮತ್ತು ಶಕೀಲಾರ ಬಣ್ಣಬಣ್ಣದ ಬೊಂಬೆಗಳನ್ನು ಅವರ ಅಭಿಮಾನಿಗಳು, ಮತ್ತ್ಯಾರೋ ಸಮಾಜಘಾತುಕರ ಹಿಂಬಾಲಕರು ಅವರ ಪ್ರತಿಮೆಗಳನ್ನು ಪರ್ಮನೆಂಟಾಗಿ ನಿರ್ಮಿಸಲು ಮುಂದಾದರೆ ಅವರೆಲ್ಲರಿಗೂ ಹೀಗೇ ಅನುಮತಿಗಳನ್ನು ನೀಡಲಾಗುತ್ತದೆಯೇ? ಎಲ್ಲಕ್ಕಿಂತ ಮುಖ್ಯವಾಗಿ 'ಹೌಸ್‌ಫುಲ್' ಚಿತ್ರ ನಿರ್ಮಾಣಕ್ಕೂ, ಮತ್ತು ಚಾರ್ಲಿಯ ಪ್ರತಿಮೆಯ

▶▶▶

...ರು ಆತ್ಮಹತ್ಯೆ ಮಾಡಿಕೊಂಡರು. ಆದರೆ ಚಾಪ್ಲಿನ್‌ನ ...ಯ ನಿಷ್ಠೆ 'ಶಂಕಿತ'ವಾಗಿದ್ದರೂ ಮೆಕಾರ್ಥಿ ಸಮಿತಿ ...ನ್ನು ವಿಚಾರಣೆಗೆ ಕರೆಸಲು ಹೆದರಿತು. ಚಾಪ್ಲಿನ್ ... ಎದುರು ಬಂದು ತಮ್ಮನ್ನೇ ನಗೆಪಾಟಲು ...ಬಹುದು ಎಂದು ಈ ಸಮಿತಿಯ ಸದಸ್ಯರು ...ದ್ದರು. ಅವರ ಹೆದರಿಕೆ ಸಕಾರಣವಾಗಿತ್ತು. ಈ ...ಣಾ ಸಮಿತಿ ತನ್ನನ್ನು ಕರೆಸಿಕೊಂಡಿದ್ದರೆ, ತಾನು ...ನೆ ಪ್ಯಾಂಟು, ಸಡಿಲ ಬೂಟ್ಸ್ ಮತ್ತು ಬಿಗಿಯಾದ ...ಬುಗಳ ತನ್ನ ಸುಪ್ರಸಿದ್ಧ ಅಡನಾಡಿ (tramp) ...ದ ದಿರಿಸಿನಲ್ಲೇ ಹೋಗುತ್ತಿದ್ದೆ ಎಂದು ಚಾಪ್ಲಿನ್ ...ತರ ಹೇಳಿದ. ಈ ಅಡನಾಡಿ ಇಡೀ ಲೋಕದ ...ಯಿಗಳೆಲ್ಲರ ಪ್ರಾಣಮಿತ್ರ; ಎಲ್ಲ ಭಾಷೆಗಳಲ್ಲೂ ... ಎಂಬ ಶಬ್ದಕ್ಕೆ ಅದೇ ಅರ್ಥ. ಭೇದ 'ಅಡನಾಡಿ'. ...ಮತ್ತು ಧರ್ಮದ ಭೇದವಿಲ್ಲದೆ ಇಡೀ ಲೋಕಕ್ಕೆ ... ಈ ಮಹಾನ್ ಕಲಾವಿದ



...ಕರ್ನಾಟಕದ ಕರಾವಳಿಯಲ್ಲಿ ...ಶಿ ಮತ್ತು 'ಅನ್ಯಮತೀಯ'! ...ಚಾಪ್ಲಿನ್ ಪ್ರತಿಮೆ ಸ್ಥಾಪಿಸಲು '...ಫುಲ್'ನ ನಿರ್ದೇಶಕರು ...ಕೊಂಡ 'ಲೊಕೇಷನ್' ನಿಜಕ್ಕೂ ... ಅದ್ಭುತ ರಮ್ಯ ತಾಣ. ಅಲ್ಲಿ ...ದ್ರ ತೀರದಲ್ಲಿಯೇ ಭಾರೀ ...ದ ಬಂಡೆಕಲ್ಲುಗಳಿಂದ ...ದ ಗುಡ್ಡವೊಂದಿದ್ದು, ಅದರ ...ಲ್ಲಿ ಲಿಂಗರೂಪಿ ಸೋಮೇಶ್ವರ ...ಲಯವಿದೆ. ಆ ಸ್ಥಳಕ್ಕೆ ...ಹದಲ್ಲೇ, ಉಪ್ಪುಂದ ಹೊಳೆ ...ಷ್ಟು ದೂರ ಸಮುದ್ರಕ್ಕೆ ...ಾಂತರವಾಗಿ ಹರಿದು ಅಲ್ಲಿ ...ದ್ರವನ್ನು ಕೂಡುತ್ತದೆ. ಈ ...ಮುದ್ರಗಳಿಗೆ ಹಿನ್ನೆಲೆಯಾಗಿ ...ಲ್ಲಾರು ಘಾಟಿಯ ಬೆಟ್ಟವಿದೆ. ...ಸ ಒಂದು ಸ್ಥಳದಲ್ಲಿ ಸೋಮೇಶ್ವರ ದೇವಾಲಯ ...ದ ಮಹಾನುಭಾವ ಅಸಾಧಾರಣವಾದ ಸೌಂದರ್ಯ ...ಉಳ್ಳ ಕವಿಹೃದಯದ ಭಕ್ತನಾಗಿದ್ದಿರಬೇಕು. ಆ ...ಲಯದಿಂದ ಇಳಿದು ಹೋಗುವ ಹಾದಿಯಲ್ಲಿ ...ಲ್ಲಿ ಚಾಪ್ಲಿನ್ ಪ್ರತಿಮೆ ಸ್ಥಾಪನೆಯಾಗಿದ್ದರೆ ಆ ಸ್ಥಳದ ...ರ್ಯವಾಗಲೀ, ಪಾವಿತ್ರ್ಯವಾಗಲೀ ಕಿಂಚಿತ್ತೂ ಮುಕ್ಕಾ...ಲ್ಲ. ಲಿಂಗರೂಪಿಯಾದ ಶಿವ ನಟರಾಜನೂ ...; ಬಹುರೂಪಿಯಾದ ಜಂಗಮನೂ ಹೌದು. ...ಡಿ ಚಾರ್ಲಿ ಈ ಬಹುರೂಪಿ ಜಂಗಮನನ್ನು ...ದರೂ ಕಾಣಿಸುವುದಿಲ್ಲವೆ?

...ದರೆ ಈಗ ಬೈಂದೂರು, ಉಡುಪಿ, ಮಂಗಳೂರು ಮುಂತಾದ 'ಸುಶಿಕ್ಷಿತ ನಾಗರಿಕ' ಊರುಗಳಲ್ಲಿ ಇಂತಹ ಪ್ರಶ್ನೆಗಳನ್ನು ರಸ್ತೆಬದಿಯ ಲೈಟುಕಂಬಗಳಿಗೆ ಕೇಳುವುದೇ ವಾಸಿ. ಇಲ್ಲಿನ ಜನರನ್ನು ನೀವು ಹೇಗೆ ಪ್ರಶ್ನಿಸಿದಿರೋ, ಹೆಚ್ಚಿನವರು ತಕ್ಷಣ ನಿಮಗೇ ಮರುಪ್ರಶ್ನೆ ಹಾಕುತ್ತಾರೆ, "ನೀವು ಯಾರಿಗೆ ಹುಟ್ಟಿದ್ದು?" ಇಲ್ಲಿ ಇನ್ನು ಕೆಲವು ಲೆಕ್ಕಾಚಾರದ ಜನಗಳಿದ್ದಾರೆ. "ಈ ಚಾಪ್ಲಿನ್ ಪ್ರತಿಮೆ ಇತ್ಯಾದಿ ರಗಳೆ ಎಲ್ಲಿ ಯಾಕೆ ಬೇಕು? ಅದಿಲ್ಲದೆಯೂ ನಾವು ಇಷ್ಟು ದಿನ ಬಾಳುವೆ ಮಾಡಲಿಲ್ಲವೋ?" ಹೀಗೆ ಇವರ ತರ್ಕ. ಗುಂಪಿನೊಡನೆ ಗೋವಿಂದ ಎನ್ನದ ಯಾರ ಬಗೆಗಾದರೂ ಇವರು ಹೀಗೆ ತಕರಾರು ಮಾಡುವವರೇ. ಉದಾಹರಣೆಗೆ, ಮೊನ್ನೆ ಮಂಗಳೂರಿನಲ್ಲಿ

'ದಿ ಹಿಂದೂ' ಪತ್ರಿಕೆಯ ವರದಿಗಾರ ಸಂವರ್ತ ಅವರಿಗೆ, "ನಮ್ಮ ವಿರುದ್ಧ ಬರೆದರೆ ಬೆನ್ನು ಮೂಳೆ ಮುರಿಯುತ್ತೇವೆ; ಬೇಗ ಇಲ್ಲಿಂದ ಜಾಗ ಖಾಲಿ ಮಾಡಿ" ಎಂದು ಭಜರಂಗಿಗಳು ಅಪ್ಪಣೆ ಕೊಡಿಸಿದರು.

ಮಂಗಳೂರಿನ ಅತ್ಯಂತ ಜನನಿಬಿಡ ಜಂಕ್ಷನ್ ಒಂದರಲ್ಲಿ, ಈ ದೇಶಪ್ರೇಮಿಗಳು ಒತ್ತಾಯದಲ್ಲಿ ವಾಹನಗಳನ್ನು ತಡೆದು ನಿಲ್ಲಿಸಿ, ಹಿಂದೂ ಸಮಾಜೋತ್ಸವದ ಧ್ವಜಗಳನ್ನು ಕಟ್ಟುತ್ತಿದ್ದಾಗ, ಈ ಸಂವರ್ತ ಏನು ಎತ್ತ ಎಂದು ವಿಚಾರಿಸ ಹೋಗಿದ್ದಾರೆ. ಅವರಿಗೆ ಯಾಕೆ ಇದೆಲ್ಲ ಬೇಕಿತ್ತು? ಮಂಗಳೂರಿನ ಇತರ ಹೆಚ್ಚಿನ ಪತ್ರಕರ್ತರ ಹಾಗೆ ರೋಟರಿ, ಲಯನ್ಸ್ ಕ್ಲಬ್ ಸಭೆಗಳ ಸ್ವಾಗತ ಭಾಷಣ, ಅಧ್ಯಕ್ಷ ಭಾಷಣ ಹಾಗೂ ವಂದನಾರ್ಪಣೆಗಳನ್ನು ವರದಿ ಮಾಡಿಕೊಂಡು, ಹಿಂದೆಬಂದರೆ ಒದೆಯದೆ, ಎದುರು ಬಂದರೆ ಹಾಯದೆ, ಹಾಕಿದ್ದನ್ನು ತಿಂದುಕೊಂಡು ಯಾಕೆ ಅವರು ಇರಬಾರದು? 'ಹೌಸ್‌ಫುಲ್' ಚಲನಚಿತ್ರ ನಿರ್ದೇಶಕರು ಒತ್ತಿನೆಣೆಯಲ್ಲಿ ಯಾಕೆ ಚಾಪ್ಲಿನ್ ಪ್ರತಿಮೆ ಸ್ಥಾಪಿಸಬೇಕು? ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆದರೆ ಪತ್ರಕರ್ತರಿಗೆ ಯಾಕೆ ಅದರ ಉಸಾಬರಿ? ಮುಸ್ಲಿಮ್ ಹುಡುಗರು ಹಿಂದೂ ಹುಡುಗಿಯರ ಜೊತೆಗೇ ಯಾಕೆ ಐಸ್‌ಕ್ರೀಮ್ ತಿನ್ನಬೇಕು? ಯಾಕೆ ಹೆಂಗಸರು ಪಬ್‌ಗಳಿಗೆ ಹೋಗಬೇಕು?

ಕರಾವಳಿಯ ಬುದ್ಧಿವಂತರು ಈಗ ಕೇಳುವ ಪ್ರಶ್ನೆಗಳು ಇವು. ನೀವು ಪತ್ರಕರ್ತರಾಗಿರದೆ ಇದ್ದರೆ ದೇವರಿಗೆ ಕೃತಜ್ಞರಾಗಿರಿ; ಮುಸ್ಲಿಮ್ ಅಥವಾ ಹೆಣ್ಣಾಗಿರದಿದ್ದರೆ ನೀವು ದೇವರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದು.


● ಜಿ. ರಾಜಶೇಖರ



...ಯೋಜಕತ್ವವನ್ನು ವಹಿಸುತ್ತಿರುವ ರಾಜೇಶ್ ...ಓರ್ಟ್‌ನವರಿಗೂ ಏನು ಸಂಬಂಧ?

...ರ್ಚಾಗಿರುವುದು ... 17 ಸಾವಿರ!

...ದೆಲ್ಲ ಬದಿಗಿರಲಿ, 67 ...ಎತ್ತರದ ಚಾಪ್ಲಿನ್ ...ಯನ್ನು ನಿರ್ಮಿಸಲು ...ಶಿಸಿರುವ ಜಾಗದಲ್ಲಿ ...ತೋಡಿರುವ ಹಳ್ಳ ...ತೆ ಅದರ ಕಲಾವಿ...ೇಶನ್ ಮುಂದಾದಿ ... ಓದಾಟದ ವೆಚ್ಚ ...ಸಣ್ಣ ಪುಟ್ಟ ಖರ್ಚುಗಳನ್ನೂ ಸೇರಿಸಿದರೆ ...ಗಿರುವುದು ಕೇವಲ 17 ಸಾವಿರ ಮಾತ್ರ. ... ನಿರ್ದೇಶಕ ಹೇಮಂತ್ ಹೆಗಡೆ 65 ಸಾವಿರ ...ಗಿದೆ ಎಂದು ಪತ್ರಿಕಾ ಹೇಳಿಕೆ ನೀಡಿ ಹಳ್ಳದ ... 67ಕ್ಕಿಂತ ಹೆಚ್ಚು ಅಡಿಯ ಕಥೆ ಬೆಳೆಸುತ್ತಿದ್ದಾರೆ.



ಹೇಮಂತ್‌ಗೆ ಮೊದಲಿನಿಂದಲೂ ಪ್ರಚಾರದ ಹುಚ್ಚು. ಈತ ಮಾಡಿದ್ದು ಎರಡೇ ಚಿತ್ರಗಳಾದರೂ ತಾನು ಹತ್ತಾರು ಚಿತ್ರಗಳನ್ನು ನಿರ್ದೇಶಿಸಿರುವವನಂತೆ ಆಡುತ್ತಾನೆ. ತನ್ನ ಸಿನಿಮಾದ ಆಹ್ವಾನ ಪತ್ರಿಕೆಯೊಂದಿಗೆ ಪಾಪ್‌ಕಾರ್ನ್ ನೀಡುವುದು, ಚಾಕೊಲೇಟ್ ಹಂಚುವುದು... ಹೀಗೆ ಕಳಪೆ ಮಟ್ಟದ ಗಿಮಿಕ್ಕುಗಳನ್ನು ಮಾಡುವ ಚಟವೂ ಈತನಿಗಿದೆ.

ಹೇಮಂತ್ ಹೆಗಡೆಯ ಚಿತ್ರ, ಬಿಡುಗಡೆಯಾಗಿ 'ಹೌಸ್‌ಫುಲ್' ಆಗಿ ಹಣ ಗಳಿಸುತ್ತೋ ಅಥವಾ 'ಡಬ್ಬಾ' ಎಂದು ಥಿಯೇಟರಿನಿಂದ ಹೊರಕ್ಕೆ ಎಬ್ಬಿಸಿಕೊಳ್ಳುತ್ತೋ ಗೊತ್ತಿಲ್ಲ, ಆದರೆ ಬಿಡುಗಡೆಗೂ ಮುನ್ನವೇ ಚಾಪ್ಲಿನ್ ಮತ್ತು ಸಂಘ ಪರಿವಾರದ ಪುಂಡರ ದಯೆಯಿಂದ ಈ ಚಿತ್ರಕ್ಕೆ ಸಾಕಷ್ಟು ಪುಕ್ಕಟೆ ಪ್ರಚಾರವಂತೂ ಈಗಾಗಲೇ ಸಿಕ್ಕಿದೆ.

● ಅರುಣ್

ನಿಮ್ಮ ಯಲಕ್ಷನ್ ಬಜೆಟ್ ನೂರು ಕೋಟಿಯಂತಲ್ಲಾ ಸಾರ್

ಚುನಾವಣೆ ಘೋಷಣೆಯಾದಂದಿನಿಂದ ಪೇಜಾವರ ಶ್ರೀ ಎಂಬ ಭಾರತದ ಸಮಸ್ಯೆ ಮರಿಹಾಕಿದ ಚೆಡ್ಡಿಸಂತೆ ಮಂಗಳೂರಲ್ಲಿ ಓಡಾಡುತ್ತ ಥೇಟ್ ಬಿಜೆಪಿ ಮತಬೂತಿನ ಏಜೆಂಟರಂತಾದಿದರಂತಲ್ಲಾ, ಶ್ರೀಗಳು ಆಗಾಗ್ಗೆ ಬುದ್ಧಿಜೀವಿಗಳಿಂದ ಟೀಕೆಗೊಳಗಾಗುತ್ತ ಉತ್ತರ ಕೊಡುತ್ತ ರೋಸಿಹೋಗಿರುವುದರಿಂದ, ಅದರಿಂದ ಮುಕ್ತಿ ಪಡೆಯಲು ಸೆಕ್ಯುಲರ್ ವಾದಿಗಳನ್ನ ದೇಶದಿಂದ ಹೊರದೂಡುವ ನಿರ್ಣಯವನ್ನು ಸೇರಿಸಿ, ಜೊತೆಗೆ ಮತಾಂತರಿಗಳು ಹಾಗು ಅನ್ಯಮತೀಯರನ್ನು ದೇಶದಿಂದ ತೊಲಗಿಸಿ, ತಾವು ಮಾತ್ರವೇ ದೇಶದಲ್ಲಿ ಉಳಿಯುವ ಘೋಷಣೆ ಮಾಡಿದರಂತಲ್ಲಾ, ಎಂಭತ್ತು ವರ್ಷದ ಈ ಅರಳುಮರುಳಿನ ಸ್ವಾಮಿಯ ಸಿಟ್ಟಿಗೆ ದನಿಗೂಡಿಸಿದ ಚೆಡ್ಡಿಗಳು, ತಾವುಗಳು ತಯಾರಿಸಿದ ನಿರ್ಣಯಗಳನ್ನು ಸೇರಿಸಿದವಂತಲ್ಲಾ, ಸದರಿ ನಿರ್ಣಯಗಳೆಂದರೆ ಹಿಂದೂಗಳು ಹಿಂದೂ ಅಭ್ಯರ್ಥಿಗಳಿಗೆ ಮಾತ್ರ ಓಟು ಮಾಡಬೇಕು, ಗೆದ್ದ ಹಿಂದೂ ಅಭ್ಯರ್ಥಿಗಳು 'ಸಮಸ್ತೆ ಸದಾ ವತ್ಸಲೇ' ಹಾಡುತ್ತ ದೆಹಲಿಗೆ ಹೋಗಿ ತ್ರಿವರ್ಣ ಧ್ವಜ ತೆಗೆದು ಕೇಸರಿ ಧ್ವಜ ಹಾರಿಸಬೇಕು, ಅಲ್ಲಿಂದ ನೇರಹೋಗಿ ರಾಮಮಂದಿರ ಕಟ್ಟಿ ಶ್ರೇಷ್ಠ ವಿಪ್ರಸಮೂಹವನ್ನು ಅರ್ಚಕರನ್ನಾಗಿ ನೇಮಿಸಬೇಕು, ರಾಮಮಂದಿರ ಕಟ್ಟಿ ಉಳಿದ ಇಟ್ಟಿಗೆ ಗಾರೆಯನ್ನು ಹೊತ್ತೊಯ್ದು ರಾಮಸೇತುವೆ ಕಟ್ಟಬೇಕು, ಈ ಕಾರ್ಯದಲ್ಲಿ ಚೆಡ್ಡಿಗಳೆಲ್ಲಾ ಥೇಟ್ ಕಪಿಸೈನ್ಯವಾಗಿ ಕೆಲಸ ಮಾಡಬೇಕು ಎಂದು ನಿರ್ಣಯ ಮಂಡಿಸುವಾಗಲೇ ಇಂತಹ ಕೆಲಸದಲ್ಲಿ ಆಂಜನೇಯನ ಪಾತ್ರ ವಹಿಸಲಿದ್ದ ಮುತಾಲಿಕ್ ಎಂಬ ಮಾನವ ದ್ವೇಷಿಯನ್ನು ಕೋರ್ಟು ಮಂಗಳೂರಿಗೆ ಕಾಲಿಡದಂತೆ ಆಜ್ಞೆ ಹೊರಡಿಸಿದೆಯಂತಲ್ಲಾ, ಥೂತ್ತೇರಿ!

******



ಇದ್ದಕ್ಕಿದ್ದಂತೆ ಶಿಕಾರಿಪುರದ ಕುರುಚಲು ಕಾಡಿನಿಂದ ಉದ್ಭವಿಸಿ ಬಂದ ಉದಯೋನ್ಮುಖ ಬಿಜೆಪಿ ಯುವ ನಾಯಕನಾದ ರಾಘವೇಂದ್ರನನ್ನು ಮಾತನಾಡಿಸಬೇಕೆನ್ನಿಸಿತಲ್ಲಾ, ಪುಡಿ ಪತ್ರಿಕೆಯಿಂದ ಹಿಡಿದು ಟಿವಿಗಳಲ್ಲೆಲ್ಲಾ ಮುಖ ತೋರುತ್ತಿರುವ ಈ ಚೆಡ್ಡಿ ಕಣ್ಮಣಿಯನ್ನು ಮಾತನಾಡಿಸಲೆಂದು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಕ್ಯಂಬಾಲೊ ಮಚ್ಚಾಲೊ ಯಂಗವ್ರುಲಾ ನಿನ್ ದವ್‌ಗಳು..."

"ಹಲೋ ಯಾರು?"

"ನಾನು ಪತ್ರಕರ್ತ ಸಾರ್, ಯಾಹೂ ಅಂತ."

"ಯಾವ ಪತ್ರಿಕೆ ಸಾರ್?"

"ಲಂಕೇಶ್."

"ಆಗ್ಲೆ ಯಾರೊ ಬಂದೋದರಲ್ಲ!"

"ಅವ್ರುದು ಲಂಕೇಶ್ ಪತ್ರಿಕೆ ಸಾರ್, ನಾವು ಬರೀ ಲಂಕೇಶ್."

"ಅಂಗಾದ್ರೆ ಬನ್ನಿ ಸಾರ್ ಮಾತಾಡಣ."

"ನಮಗೆ ಬರಕ್ಕೆ ಟೈಮಿಲ್ಲ, ಹಾಗೆ ಫೋನಲ್ಲೇ ಮಾತಾಡಣ ಸಾರ್, ಬಿಡುವಾಗಿದ್ದೀರಾ?"

"ಏನೇಳಿ ಸಾರ್?"

"ಆ ಶಿವಮೊಗ್ಗದಲ್ಲಿ ಬಂಗಾರಪ್ಪನ್ನ ಸೋಲುಸ್ತಿನಿ ಅಂತ ಹಟ ಮಾಡಿದ್ದ ಆಯನೂರ್ ಮಂಜುನಾಥ್, ಬದುಕಿರೋವರಿಗೂ ತಾನೇ ಬಿಜೆಪಿ ಕ್ಯಾಂಡಿಡೇಟ್ ಆಯ್ತಿನಿ ಅಂತಿದ್ದ ಭಾನುಪ್ರಕಾಶ್ ಅನ್ನೊ ಹಿರಿಯೋರಿದ್ರೂ ನೀವು ಟಿಕೆಟ್ ಪಡೆದದ್ದು ಹೇಗೆ?"

"ಅದೂ ಒಂದು ಸಂಘಟನೆ ವಿಷಯಕ್ಕೆ ಬಂದಾಗ, ಪಾರ್ಟಿಲಿರೊ ನಮ್ಮ ಜನಗಳೇನಿದಾರೆ, ಅವರ ಒಂದು ಒತ್ತಾಯಕ್ಕೆ ಮಣಿದಾಗ ಒಂದು ಸಂಘಟನೆ ಅಭಿಪ್ರಾಯ ಮುಖ್ಯ ಆಗಿ ನನಗೆ ಈ ಒಂದು ಅವಕಾಶ ಸಿಕ್ಕಿದೆ."

"ಸಂಘಟನೆ ನಿಮ್ಮನ್ನ ಆಯ್ಕೆ ಮಾಡದಕ್ಕೆ ನಿಮಗಿದ್ದ ಹಿನ್ನಲೆ ಏನು?"

"ನಾನು ಇಲ್ಲೆ ಶಿವಮೊಗ್ಗದಲ್ಲೇ ಓದಿ ಮೇಲೆ ಬಂದೋನು. ವಿದ್ಯಾರ್ಥಿಯಾಗಿದ್ದಾಗ ಫ್ರೆಂಡ್ಸ್ ಜೊತೆ ಟೂರ್ ಹೋಗಿದ್ದೆ ಕೊಡಚಾದ್ರಿ, ಆಗುಂಬೆ...."

"ಅವೆಲ್ಲಾ ಟೂರು ಸಾರ್. ಚಳವಳಿ ಸಾಧನೆ ಹೇಳಿ."

"ಚಳವಳಿನೂ ಮಾಡಿದ್ದಿನಿ ಸಾರ್. ಡಿ.ವಿ.ಎಸ್. ಕಾಲೇಜಲ್ಲಿ ಓದುವಾಗ ಕಾಲೇಜಿಂದ ಗೋಪಿ ಸರ್ಕಲ್‌ವರೆಗೂ ಸ್ಟ್ರೈಕ್ ಮಾಡಿದ್ದಿನಿ. ಪ್ರತಿಭಟನೆ ಮಾಡಿದ್ದಿನಿ. ಚಳವಳಿ ಮಾಡಿದ್ದಿನಿ. ಸತ್ಯಾಗ್ರಹ ಮಾಡಿದ್ದಿನಿ. ನಮ್ಮ ಸಂಘಟನೆ ಮೊದಲಿಂದ್ಲೂ ಚಳವಳಿಯಿಂದ್ಲೆ ಮುಂದೆ ಬಂದಿರೊ ಅಂತದ್ದು."

"ಯಾವ ಸಂಘಟನೆ?"

"ಸಂಘ ಪರಿವಾರನೆ ಇರಬವ್ದು, ಎಬಿವಿಪಿ, ಆರೆಸೆಸ್ ಇವೆಲ್ಲಾ ಚಳವಳಿಯಿಂದಲೇ ಬಂದಿವೆ."


"ನೀವು ದಿಢೀರ್ ಕ್ಯಾಂಡೇಟ್ ಆದ್ರೂ ಅಥವಾ ಮೊದಲಿಂದ ಈ ತಯಾರಿ ನಡೆಸಿದ್ರೂ?"

"ನನಿಗೆ ರಾಜಕೀಯ ಆಕಾಂಕ್ಷೆಯಿತ್ತು, ಆದ್ರೆ ಎಂ.ಪಿ. ಕ್ಯಾಂಡೇಟ್ ಆದದ್ದು ದಿಢೀರಂತ."

"ಹಾಗಿದ್ರೆ ನಿಮಗೆ ಜಿಲ್ಲೆ, ತಾಲೂಕಿನ ಪರಿಚಯ ಇಲ್ಲವಲ್ಲ ಸಾರ್, ಹ್ಯಾಗ್ ಮಾಡ್ತಿರಿ?"

"ನಮ್ಮ ಸಂಘಟನೆ ಅದನ್ನೆಲ್ಲಾ ನೋಡಿಕೊಳುತ್ತೆ ಸಾರ್. ಪ್ರತಿ ಬೂತಿಗೂ ಸಂಘಟನೆ ಇದೆ."

"ಈ ಬೂತಿನ ಸಂಘಟನೆಗೆ ಬಟವಾಡೆಯಿರುತ್ತಂತೆ. ತಾವಾಗಲೇ ಬೂತಿನ ಬಟವಾಡೆ ನಡೆಸಿದ್ದೀರಂತೆ, ನಿಜವೆ?"



"ಅದೆಲ್ಲಾ ಕಾಮನ್ ಅಲವಾ ಸಾರ್, ಮಾಡ್ಬೆ ಬೇಕು."

"ನಿಮ್ಮ ಜಿಲ್ಲೆಯ ಕಾಂಗ್ರೆಸ್ ಪುಡಿ ಲೀಡರ್‌ಗಳನ್ನೆಲ್ಲಾ ಕೊಳ್ಳತಾಯಿದ್ದೀರಂತೆ, ನಿಜವೆ?"

"ಕೊಳ್ಳಕ್ಯಾಗುತ್ತ ಸಾರ್? ಅವರೆ ಬರ್ತಾಯಿದಾರೆ."

"ನಿಮ್ಮ ಗೆಲುವಿಗಾಗಿ ಇಟ್ಟಿರೊ ಬಜೆಟ್ ಹೇಳ್ತೀರಾ?"

"ಅದನ್ನ ನಾವಿನ್ನ ಲೆಕ್ಕ ಹಾಕಿಲ್ಲ ಸಾರ್. ಚುನಾವಣೆ ನೀತಿಸಂಹಿತೆಯಿರೋದ್ರಿಂದ ಹೇಳಕ್ಕಾಗಲ್ಲ."

"ನೀವು ಇಡೀ ಶಿಕಾರಿಪುರನೇ ಖರೀದಿ ಮಾಡಿರೊ ಅಂದಾಜನ್ನೇ ಶಿವಮೊಗ್ಗ ಜಿಲ್ಲೆಯ ಎಲ್ಲ ತಾಲೂಕಿಗೂ ಅನ್ವಯಿಸಿ ಲೆಕ್ಕ ಹಾಕಿ ನೋಡಿದ್ರೆ ನಿಮ್ಮ ಚುನಾವಣೆ ಖರ್ಚು ಸುಮಾರು ನೂರು ಕೋಟಿ ಆಗುತ್ತಲ್ಲ ಸಾರ್?"

"ಅಷ್ಟಾಗಲ್ಲ ಸಾರ್."

"ಹೋಗ್ಲಿ, ಗೆದ್ದ ಮೇಲೆ ಏನು ಮಾಡಬೇಕು ಅಂತ ಇದ್ದೀರೀ?"

"ತುಂಬಾ ಕೆಲಸ ಇದೆ ಸಾರ್. ಜೋಗ್‌ಫಾಲ್ಸ್‌ಲ್ಲಿ ಸರಿಯಾಗಿ ನೀರು ಬೀಳ್ತಯಿಲ್ಲ, ಬೇಸಿಗೇಲೂ ನೀರು ಬೀಳಂಗೆ ಏನಾರ ಮಾಡಬೇಕು. ಆಗುಂಬೇಲಿ ಸನ್‌ಸೆಟ್ ನೋಡಕ್ಕೆ ಸರಿಯಾದ ಅವಕಾಶ ಇಲ್ಲ, ಅದನ್ನ ಮಾಡಬೇಕು. ಇಲ್ಲಿ ಸಣ್ಣಪುಟ್ಟ ರೈಸ್‌ಮಿಲ್‌ಗಳಿವೆ. ಅವುನ್ನೆಲ್ಲಾ ತಗದು ದೊಡ್ಡ ರೈಸ್ ಮಿಲ್ಹಾಕಬೇಕು. ಶಿಕಾರಿಪುರದಲ್ಲಿ ತುಂಬ ಧೂಳಿದೆ, ಅದನ್ನ ಇಲ್ಲಂಗೆ ಮಾಡಬೇಕು. ಶಿವಮೊಗ್ಗ ಜಿಲ್ಲೆನ ಮಾದರಿ ಜಿಲ್ಲೆ ಮಾಡಬೇಕು. ನಮ್ಮ ಪೂಜ್ಯ ತಂದೆಯವರು ಆಗ್ಲೆ ಮಾಡ್ತಾಯಿದಾರೆ. ನಾನೂ ಅವರ ಜತೆ ಕೈ ಜೋಡಿಸಬೇಕು?"

"ನೀವು ನಿಲ್ಲದು ನಿಮ್ಮ ತಂದೆಗೆ ಇಷ್ಟ ಇರಲಿಲ್ಲವಂತೆ?"

"ಹೌದು ಸಾರ್, ಇಷ್ಟ ಇರಲಿಲ್ಲ."

"ಮತ್ತೆ ಅಂತವರು ನಿಮ್ಮ ಜೊತೆ ಯಂಗೆ ಕೈ ಜೋಡಿಸ್ತಾರೆ?"

"ಈ ಶ್ರೀ ರಾಘವೇಂದ್ರ ಅವರಿಗೆ ಸಂಘಟನೆ ವತಿಯಿಂದ ಟಿಕೆಟ್ ಕೊಟ್ಟಾಗಿದೆ. ಈಗ ನಮ್ಮ ಪೂಜ್ಯ ತಂದೆಯವರು ಕೈಜೋಡಿಸಲೇ ಬೇಕಲ್ಲವ?"

"ಒಬ್ಬ ಮುಖ್ಯಮಂತ್ರಿ ಜಿಲ್ಲೆಗೆ ಆತನ ಮಾತಿಗೆ ವಿರೋಧವಾಗಿ ಯಾರಿಗೂ ಟಿಕೆಟ್ ಕೊಡಲ್ಲ ಅಲ್ಲವೆ?"

"ನನಗೆ ಕೊಟ್ಟಿದ್ದಾರಲ್ಲ ಸಾರ್?"

"ಎಡೂರಪ್ಪ ಮುಖ್ಯಮಂತ್ರಿಯಾಗಿ ಬಿಜೆಪಿ ಚುನಾವಣೆ ನಿರ್ವಹಣೆಗೆ ಅಧ್ಯಾಗೆಲೊ ಮತ್ತು [illegible] ಕೊಟ್ಟಾಗ ಆ ಕಡೆಯಿಂದ ಎಡಗೈಲಿ ರಾಘವೇಂದ್ರನ ಟಿಕೆಟ್ ಕೂಡ ತಂದುಬಿಟ್ಟು ಬಂದವ್ರುರೆ, ಗೊತ್ತಾ?"

"ಅದೇನೊ ಗೊತ್ತಿಲ್ಲ ಸಾರ್. ಅವತ್ತು ರಾತ್ರಿ ನಮ್ಮ ತಂದೆ ಬಂದು ನೀನೆ ಕ್ಯಾಂಡೇಟ್ ಅಂದ್ರು ಸಾರ್."

"ಥೂತ್ತೇರಿ!!!"




ಹಾವೇರಿಗೆ ಬೆಂಕಿಯಿಟ್ಟ ಉದಾಸಿ ಪಟಾಲಂ!



● ವಿನಯ್ ಹುರುಳಿಕುಪ್ಪಿ

ಗೊಬ್ಬರ ಕೇಳಿದ ರೈತನ ಎದೆಗೆ ಗುಂಡಿಟ್ಟು ಕೊಂದಿದ್ದಾಯಿತು. ಇದ್ದ ಏಕೈಕ ಶುಗರ್ ಫ್ಯಾಕ್ಟರಿಯನ್ನೂ ತುಕ್ಕು ಹಿಡಿಸಿದ್ದಾಯಿತು. ಈಗ ಹಾವೇರಿಗೆ ತಗುಲಿರುವ ಸಿ.ಎಂ.ಉದಾಸಿ ಎಂಬ ಮಹಾಮಾರಿಯ ಅಟ್ಟಹಾಸ ಹಾವೇರಿಯ ಅಲ್ಪಸಂಖ್ಯಾತರ ಮೇಲೆ ಬಿದ್ದಿದೆ. ದುರಂತವೆಂದರೆ ಉದಾಸಿಯ ಪಟಾಲಂ ಪಡೆಗೆ ದಲಿತರೇ ಗುರಾಣಿಯಾಗಿರುವುದು. ಇಲ್ಲಿಯತನಕ ಅಣ್ಣತಮ್ಮಂದಿರಂತಿದ್ದ ದಲಿತರು ಮತ್ತು ಅಲ್ಪಸಂಖ್ಯಾತರು ಪರಸ್ಪರ ಹೊಡೆದಾಟಕ್ಕಿಳಿದು ಕೋಮುವಾದಿ ರಾಜಕಾರಣಕ್ಕೆ ಬಲಿಪಶುಗಳಾಗುವ ಸಂದಿಗ್ಧತೆಯಲ್ಲಿ ಸಿಲುಕಿದ್ದಾರೆ.



ಇವತ್ತು ಹಾವೇರಿಯಲ್ಲಿ ದಲಿತ ಮತ್ತು ಅಲ್ಪಸಂಖ್ಯಾತರ ನಡುವೆ ಕಚ್ಚಾಟ ಶುರುಗೊಂಡಿರುವುದಕ್ಕೆ ನಾಲ್ಕಾರು ಸಂಘ ಪರಿವಾರದ ಕ್ರಿಮಿಗಳೇ ಸಾರಥ್ಯ ವಹಿಸಿಕೊಂಡಿದ್ದಾರೆ. ಬಿಜೆಪಿ ನಗರಸಭೆ ಸದಸ್ಯ ಗಿರೀಶ್ ತುಪ್ಪದ ಇಡೀ ಗಲಭೆಯ ಹಿನ್ನೆಲೆಯಾಗಿ ನಿಂತಿದ್ದರೆ, ಆರೆಸ್ಸೆಸ್ಸಿನ ಕಮಂಗಿಗಳಾದ ಗಿರೀಶ್ ಗುಮಕಾರ್, ಎಸ್.ಆರ್ ಹೆಗಡೆ, ಶಿವಬಸವನಹಳ್ಳಿಗಳೆಲ್ಲಾ ದಲಿತರ ಕೈಗೆ ಕೇಸರಿ ಧ್ವಜ ಬರುವಂತೆ ಮಾಡಿಬಿಟ್ಟಿದ್ದಾರೆ. ಇವೆಲ್ಲದಕ್ಕೂ ನಗರ ಠಾಣೆಯ ಸಿಪಿಐ ಮೃಗಸಂತತಿಯ ಮುರುಗೇಂದ್ರಯ್ಯ ಸೆಕ್ಯೂರಿಟಿ ಕೊಟ್ಟಿದ್ದಾನೆ. ಒಂದು ಸಣ್ಣ ನೀರಿನ ಬೇಡಿಕೆಯನ್ನು ಈ ಎಲ್ಲ ಕೋಮು ಕ್ರಿಮಿಗಳು ಸೇರಿಕೊಂಡು ಗಲಭೆಗೆ ತಿರುಗಿಸಿರುವುದು ನೋಡಿದರೆ ಇದರ ಹಿಂದೆ ಉದಾಸಿ ನೇತೃತ್ವದ ಪಟಾಲಂ ಪಡೆಯ ನೆರಳು ನಿಚ್ಚಳವಾಗಿದೆ.

ಹಾವೇರಿ ಜನ ಜಿಲ್ಲೆಯಾದ್ಯಂತ ಬಿಜೆಪಿ ಭಂಡರನ್ನು ಗೆಲ್ಲಿಸಿದ್ದಾಗಲೇ ಹಾವೇರಿಗೆ ಕೇಡಾಗುವುದು ಖಚಿತವೆಂದು 'ಲಂಕೇಶ್' ಈ ಹಿಂದೆಯೇ ಹೇಳಿತ್ತು. ಗೊಬ್ಬರ ಕೇಳಿದ ರೈತನಿಗೆ ಗುಂಡಿಡುವುದರೊಂದಿಗೆ ಅದು ಪ್ರಾರಂಭವಾಗಿಯೇ ಹೋಯಿತು. ನಂತರದಲ್ಲಿ ಸಂಗೂರ ಸಕ್ಕರೆ ಕಾರ್ಖಾನೆಯನ್ನು ಆಪೋಶನ ಪಡೆಯುವ ತಯಾರಿಯಲ್ಲಿ ಇಬ್ಬರು ಕಾರ್ಮಿಕರನ್ನು ಬಲಿ ತೆಗೆದುಕೊಳ್ಳಲಾಯಿತು. ಇದಿಷ್ಟಕ್ಕೇ ಸುಮ್ಮನಾಗದ ಉದಾಸಿ, ಶಿವರಾಜ ಸಜ್ಜನರ, ನೆಹರು ಓಲೇಕಾರಗಳೆಂಬ ಶಾಸಕ ಹೆಸರಿನ ಶೋಷಕರು ಇದೀಗ ಪಾರ್ಲಿಮೆಂಟ್ ಎಲೆಕ್ಷನ್ ಗೆಲ್ಲಲು ಕೋಮು ಜ್ವಾಲೆ ಎಬ್ಬಿಸಿದ್ದಾರೆ.


ಹೋಳಿ ಹಬ್ಬ ಮತ್ತು ಈದ್ ಮಿಲಾದ್ ಹಬ್ಬಗಳೆಂದರೆ ಹಾವೇರಿಯ ದಲಿತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಬೇರೆಬೇರೆಯೇನಲ್ಲ. ಈದ್ ಮಿಲಾದ್ ಹಬ್ಬದಂದು ಮುಸ್ಲಿಮರ ಮನೆಯಲ್ಲಿ ಸಿಹಿಯುಂಡು ಎರಡು ಮೂರು ದಿನ ಮುಂಚೆಗಿರುವ ಹೋಳಿ ಹಬ್ಬದಲ್ಲಿ ಮುಸ್ಲಿಮರೂ ಪಾಲ್ಗೊಂಡು ಸೌಹಾರ್ದದಿಂದ ಎರಡೂ ಹಬ್ಬಗಳನ್ನು ಆಚರಿಸುವ ಪರಂಪರೆ ಇಷ್ಟು ದಿನ ಹಾವೇರಿಯಲ್ಲಿತ್ತು. ಈಗ ನೋಡಿದರೆ ಅವೇ ಎರಡು ಹಬ್ಬಗಳು ಇಲ್ಲಿನ ದಲಿತರ-ಅಲ್ಪಸಂಖ್ಯಾತರ ಮಧ್ಯೆ ಕಂದಕಗಳನ್ನು ಸೃಷ್ಟಿಸುವಂತೆ ಮಾಡಲಾಗಿದೆ. ಆ ಕಂದಕಕ್ಕೆ ನಿದ್ದೆಬಿಟ್ಟು ಗಿರೀಶ್ ತುಪ್ಪದ, ಗಿರೀಶ್ ಗುಮಕಾರ, ಎಸ್.ಆರ್. ಹೆಗಡೆ, ಶಿವಬಸವನಹಳ್ಳಿಗಳು ಕೆಂಡದ ಮಳೆ ಸುರಿಸಿದ್ದಾರೆ.

ಎರಡು ವಾರಗಳ ಹಿಂದೆ ಮುಸ್ಲಿಮರೇ ಬಹುಸಂಖ್ಯಾತರಿರುವ ಹುಮನಾಬಾದ್ ಓಣಿ ಜನರು ನೀರಿಗಾಗಿ ಪ್ರತಿಭಟಿಸಿದ್ದರು. ಆ ಓಣಿಗೆ ಗಿರೀಶ್ ತುಪ್ಪದ ಬಿಜೆಪಿ ಪಕ್ಷದಿಂದ ಗೆದ್ದು ಮುನ್ಸಿಪಾಲಿಟಿ ಮೆಂಬರ್ ಆಗಿದ್ದಾನೆ. ಚುನಾವಣೆಗೆ ನಿಂತಾಗ ಗಿರೀಶ್ ತುಪ್ಪದ ಬಿಜೆಪಿ ಐಡಿಯಾಲಜಿ ಹೇಳದೆ "ಅದು ಮಾಡಿಸ್ತೀನಿ, ಇದು ಮಾಡಿಸ್ತೀನಿ ಯಕ್ಕಾ.. ಯವ್ವಾ.." ಎಂದು ಹೇಳಿ ಮುಸ್ಲಿಮರ ಓಟುಗಳಿಂದ ಗೆದ್ದು ಬಂದಿದ್ದ. ಹಿಂದಿನ ಕಾಂಗ್ರೆಸ್ ನಾಯಕರ ತಿಕ್ಕಾಟಕ್ಕೆ ಬೇಸತ್ತು ಅಲ್ಪಸಂಖ್ಯಾತರು ಗಿರೀಶ್ ತುಪ್ಪದನನ್ನು ಮನೆ ಮಗನೆಂದು ಆಲಂಗಿಸಿಕೊಂಡು ಗೆಲ್ಲಿಸಿದ್ದರು. ಆದರೆ ಗೆದ್ದ ತಕ್ಷಣ ಆತ ಮಟನ್ ಮಾರ್ಕೆಟ್ ವಿಷಯದಲ್ಲಿ ಸಾರ್ವಜನಿಕ ನಳಗಳ ವಿಷಯಗಳಲ್ಲಿ ಮುಸ್ಲಿಮರಿಗೆ ವಿರುದ್ಧವಾಗಿ ನಿಂತುಕೊಂಡು ಪಕ್ಕಾ ಚೆಡ್ಡಿ ಅಜೆಂಡಾಗಳನ್ನು ಪಾಲಿಸಲು ಶುರುಮಾಡಿದ.

ಈ ಮಧ್ಯೆ ಹುಮನಾಬಾದ್ ಓಣಿಯ ಜನ ನೀರಿಗಾಗಿ ಬೀದಿಗಿಳಿದಾಗ ಗಿರೀಶ್ ತುಪ್ಪದ ಅಪ್ಪಟ ನರೇಂದ್ರ ಮೋದಿಯ ಶೈಲಿಯಲ್ಲಿ "ಸಾಬರು ಬಜೆಪಿಗೆ ಓಟ್ ಹಾಕಿಲ್ಲ, ನೀವ್ ಯಾರಿಗೆ ಓಟ್ ಹಾಕೀರಿ ಅವರ ಹತ್ತಿರ ಹೋಗಿ ನೀರು ಕೇಳ್ರಿ" ಎಂದು ಬೊಗಳಿಬಿಟ್ಟ. ಅದನ್ನು ಕೇಳಿ ಕೆಂಡಾಮಂಡಲವಾದ ಜನ ಗಿರೀಶ್ ತುಪ್ಪದನನ್ನು ಎಳೆದಾಡುತ್ತಿದ್ದಾಗ ಸ್ವತಃ ಮುನ್ಸಿಪಾಲಿಟಿ ಅಧ್ಯಕ್ಷೆ ಮಂಜುಳಾ ಕರಬಸಮ್ಮನವರ್ ಆತನನ್ನು ಬಿಡಿಸಿ ನೀರು ಬಿಡುವ ಆಶ್ವಾಸನೆ ನೀಡಿ ಜನರನ್ನು ಸಮಾಧಾನ ಮಾಡಿ ಕಳುಹಿಸಿದ್ದರು. ಅಲ್ಲಿಗಾಗಲೇ ಗಿರೀಶ್ ತುಪ್ಪದ ಎದೆಯಲ್ಲಿ ದ್ವೇಷದ ಕೆನ್ನಾಲಿಗೆ ಹೊತ್ತಿ ಉರಿಯಲು ಪ್ರಾರಂಭಿಸಿತ್ತು. ತಕ್ಷಣಕ್ಕೆ ಆತನಿಗೆ ಅಸ್ತ್ರವಾಗಿ ಕಾಣಿಸಿದ್ದು ಈದ್ ಮಿಲಾದ್ ಮತ್ತು ಹೋಳಿ ಹಬ್ಬಗಳು!

ಅವತ್ತು ಈದ್ ಮಿಲಾದ್ ಕಾರಣಕ್ಕೆ ವಾಡಿಕೆಯಂತೆ ಅಲ್ಪಸಂಖ್ಯಾತರು ಹಸಿರು ಧ್ವಜ ಹಿಡಿದು ಊರು ತುಂಬಾ ಮೆರವಣಿಗೆ ಹೊರಟಿದ್ದರು. ಮೆರವಣಿಗೆ ಅಂಬೇಡ್ಕರ್ ಸರ್ಕಲ್ ಸುತ್ತು ಹೋಗುವ ಸಂದರ್ಭದಲ್ಲಿ ಆರೆಸ್ಸೆಸ್ಸಿನ ಗಿರೀಶ್ ಗುಮಕಾರ್ ಕೆಲವು ಬುದ್ಧಿಗೇಡಿ ದಲಿತ ಯುವಕರನ್ನು ಗುಡ್ಡೆಹಾಕಿಕೊಂಡು ದಲಿತ ಯುವಕರಿಂದ ಹಲಗೆ ಬಾರಿಸುತ್ತಿದ್ದ. ಆಗ ಅಲ್ಪಸಂಖ್ಯಾತರು ಸಂಬಾಳಿಸಿಕೊಂಡು ಅಲ್ಲಿಂದ ಕಾಲ್ಕಿತ್ತರು. ಆಗಲೂ ಸಮಾಧಾನಗೊಳ್ಳದ ಗಿರೀಶ್ ಗುಮಕಾರ್ ಮೊದಲೇ ಗಲಾಟೆಗೆ ಸ್ಕೆಚ್ ಹಾಕಿ ದಲಿತ ಯುವಕರನ್ನು ಕರೆದುಕೊಂಡು ಅಂಬೇಡ್ಕರ್ ಸಭಾಭವನ ಹೊಕ್ಕು ಮೀಟಿಂಗ್ ಮಾಡಿದ್ದಾನೆ. ಅಲ್ಲಿ "ನಾವೆಲ್ಲ ಹಿಂದೂಗಳು, ಮುಸ್ಲಿಮರು ಪಾಕಿಸ್ತಾನದವರು" ಎಂದು ತನ್ನ ಮುಸ್ಲಿಮ್ ದ್ವೇಷದ ವಿಷವನ್ನು ಕಕ್ಕುತ್ತ ಅವರನ್ನು ಬ್ರೇನ್‌ವಾಶ್ ಮಾಡಿದ್ದಾನೆ. ಅಷ್ಟೊತ್ತಿಗೆ ಮತಿಗೆಟ್ಟಿದ್ದ ದಲಿತ ಯುವಕರು ಭಗವಾಧ್ವಜ ಹಿಡಿದುಕೊಂಡು ತಮಟೆ ಭಾರಿಸಲು ಶುರುವಿಟ್ಟಿದ್ದರು. ಸಾಲದ್ದಕ್ಕೆ ಹಿಂದೂತ್ವದ ನಂಜನ್ನು ಉಸಿರಿರುವತನಕ ವಿರೋಧಿಸುತ್ತಲೇ ಬಂದಿದ್ದ ಅಂಬೇಡ್ಕರ್ ಮೂರ್ತಿಗೂ ಕೇಸರಿ ಧ್ವಜ 'ಶೃಂಗಾರ' ಮಾಡಿದರು.

ದಲಿತ ಯುವಕರು ಗುಂಪುಗುಂಪಾಗಿ ಅವತ್ತು ಬೆಳಗ್ಗೆಯಿಂದ ಮಧ್ಯರಾತ್ರಿಯ ತನಕ ಅಲ್ಪಸಂಖ್ಯಾತರ ಮನೆಗಳ ಮುಂದೆ ಕೂತು ಹಲಗೆ ಬಾರಿಸಲು ಶುರುವಿಟ್ಟರು. ಬೆಳಗ್ಗೆ ಎದ್ದು ಹಲಗೆ ಬಾರಿಸಿದ್ದನ್ನು ಕೆಲ ಅಲ್ಪಸಂಖ್ಯಾತ ಯುವಕರು ಪ್ರಶ್ನಿಸಿದ್ದೇ ತಡ ಬಡಿದಾಟ ಆರಂಭಗೊಂಡು ಮಸೀದಿಗೆ ಕಲ್ಲುಗಳ ಸುರಿಮಳೆಯಾಯಿತು. ಇದಕ್ಕೆ ಪ್ರತಿಯಾಗಿ ಅಂಬೇಡ್ಕರ್ ಭವನಕ್ಕೆ ಕಲ್ಲುಗಳು ಬಿದ್ದವು. ಅಷ್ಟಕ್ಕೆ ಅಂಬೇಡ್ಕರ್ ಪುತ್ಥಳಿಗೇ ಅವಮಾನವಾಯಿತೆಂದು ಎಸ್.ಆರ್. ಹೆಗಡೆ, ಗಿರೀಶ್ ತುಪ್ಪದ, ಗಿರೀಶ್ ಗುಮಕಾರ್, ಶಿವಬಸವನಹಳ್ಳಿಗಳು ಸೇರಿಕೊಂಡು ದಲಿತ ಯುವಕರ ತಲೆ ತಿಕ್ಕಿಬಿಟ್ಟರು. ಇವರ ಚೆಲ್ಲಾಟಕ್ಕೆ ತಕ್ಕಂತೆ ಸಿಪಿಐ ಮುರುಗೇಂದ್ರಯ್ಯ ಟೊಂಕಕಟ್ಟಿ ನಿಂತು ಅಲ್ಪಸಂಖ್ಯಾತ ಯುವಕರ ಮೇಲೆ ಅಟ್ರಾಸಿಟಿ ಕೇಸ್ ಫೈಲು ಮಾಡಿಬಿಟ್ಟ. ಇನ್ನೇನು ಹಾವೇರಿ ಕೈಮೀರಿ ಹೋಗುತ್ತಿದೆ ಎನ್ನುವ ಭಯಕ್ಕೆ ಬಿದ್ದು ಡಿ.ಸಿ. ಪಿ.ಎಸ್.ವಸ್ತ್ರದ ಮಧ್ಯಪ್ರವೇಶಿಸಿ ನಗರಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಿದರು.







ಇದಕ್ಕಾಗಿಯೇ ಕಾಯುತ್ತಿದ್ದ ಉದಾಸಿ, ನೆಹರೂ ಓಲೇಕಾರ, ಶಿವರಾಜ ಸಜ್ಜನರುಗಳೆಲ್ಲ ತಮ್ಮ ಚೇಲಾ ಮೇಲಾಗಿ ಸಂಘಿ ಎಸ್.ಆರ್. ಹೆಗಡೆ, ಗಿರೀಶ್ ಗುಮಕಾರ ಮೂಲಕ ದಲಿತ ಯುವಕರಿಗೆ ಐದೂವರೆ ಸಾವಿರ ಮೀಟರ್ ಕೇಸರಿ ಬಟ್ಟೆ ಹಂಚಿಸಿದರು. ನೋಡುನೋಡುತ್ತಲೇ ಹಾವೇರಿ ತುಂಬಾ ಕೇಸರಿ ಧ್ವಜಗಳ ಮೆರವಣಿಗೆ ಉದ್ಘಾಟನೆಯಾಯಿತು. ಅಲ್ಲಿಗೆ ಗಿರೀಶ್ ತುಪ್ಪದ ನೀರಿಗಾಗಿ ಹೋಗಿದ್ದ ಮಾನವನ್ನು ಕೇಸರಿ ಬಣ್ಣದಲ್ಲಿ ತೀರಿಸಿಕೊಂಡ. ಒಳಗಿಂದೊಳಗೇ ಉದಾಸಿಯ ಕುಲಪುತ್ರ ಶಿವಕುಮಾರ ಉದಾಸಿ ಪಾರ್ಲಿಮೆಂಟ್ ಚುನಾವಣೆಯನ್ನು ಗೆದ್ದ ಖುಷಿಯಲ್ಲಿ ತೇಲಾಡುತ್ತಿದ್ದಾನೆ. ಕಳ್ಳ ಕಾಂಗ್ರೆಸಿಗರು ಕನಿಷ್ಠ ತಮ್ಮನ್ನು ನಂಬಿದ್ದ ಅಲ್ಪಸಂಖ್ಯಾತರ ರಕ್ಷಣೆಗೂ ಬಾರದೆ, ಇತ್ತ ತಮ್ಮದೇ ಓಟ್‌ಬ್ಯಾಂಕ್ ಆಗಿದ್ದ ದಲಿತರು ಅಲ್ಪಸಂಖ್ಯಾತರ ವಿರುದ್ಧ ತಿರುಗಿಬಿದ್ದಿದ್ದನ್ನು ಕಂಡೂಕಾಣದೆ ತೆಪ್ಪಗಿದ್ದುಬಿಟ್ಟಿದ್ದಾರೆ. ಅಲ್ಲಿಗೆ ಅಲ್ಪಸಂಖ್ಯಾತರ ಬದುಕು ಗೋಳಿನ ಕಡಲಲ್ಲಿ ತೇಲುತ್ತಿರುವುದು ಹಾವೇರಿಯ ದುರಂತವೆನ್ನದೆ ಬೇರೆ ದಾರಿಯಿಲ್ಲ.

ಹಾವೇರಿ ಗಲಾಟೆಯನ್ನು ಇಡಿಯಾಗಿ ಅವಲೋಕಿಸಿದರೆ ಗಲಾಟೆಯ ಸೂತ್ರಧಾರಿ ಉದಾಸಿ ಎಂಬುದು ಸ್ಪಷ್ಟವಾಗುತ್ತದೆ. ಅದರೊಂದಿಗೆ ಇಲ್ಲಿ ನೆಹರೂ ಒಲೇಕಾರ, ಎಸ್.ಆರ್.ಹೆಗಡೆ, ಗಿರೀಶ್ ತುಪ್ಪದ, ಗಿರೀಶ್ ಗುಮಕಾರ್‌ಗಳು ಉದಾಸಿಯ ಅಸ್ತ್ರಗಳಾಗಿ ಬಳಕೆಯಾಗಿದ್ದು ಕೂಡ ನಿಚ್ಚಳವಾಗುತ್ತದೆ. ಈ ಘಟನೆಯಿಂದ ತಕ್ಷಣಕ್ಕೆ ಇಡೀ ಊರು ಹಿಂದೂ-ಮುಸ್ಲಿಂ ಎಂದು ಗೆರೆ ಜಗ್ಗಿಕೊಂಡಂತಾಗಿದೆ. ಎಂದಿಗೂ ಹಿಂದೂಗಳಲ್ಲದ ದಲಿತರು ಸಂಘಪರಿವಾರದ ಮೋಹ ಪಾಶಕ್ಕೆ ಜಾರಿದ್ದು ನೋಡಿದರೆ ಹಾವೇರಿಯಲ್ಲಿ ಇನ್ನುಮುಂದೆ ದಲಿತರು-ಅಲ್ಪಸಂಖ್ಯಾತರು ಮಾನಸಿಕವಾಗಿ ದೂರವಾದಂತಹ ಲಕ್ಷಣಗಳು ಕಾಣಿಸುತ್ತಿವೆ.

ಮೊನ್ನೆಮೊನ್ನೆಯ ತನಕ ಅಣ್ಣ-ತಮ್ಮರಂತೆ ಸೌಹಾರ್ದದಿಂದ ಬದುಕಿದ್ದ ದಲಿತ-ಮುಸ್ಲಿಮರನ್ನು, ಅವರ ಕೂಡಿ ಬದುಕುವ ಪರಂಪರೆಯನ್ನು ಒಂದೇ ದಿನದಲ್ಲಿ ಧ್ವಂಸ ಮಾಡಿ ಸೌಹಾರ್ದದ ಜಾಗದಲ್ಲಿ ದ್ವೇಷ ಅಸೂಯೆಗಳನ್ನು ಬಿತ್ತಿದ ಅಷ್ಟೂ ಅಪಕೀರ್ತಿ ನಿಜಕ್ಕೂ ಉದಾಸಿ ಅಂಡ್ ಪಟಾಲಂಗೇ ಸೇರಬೇಕು. ■

ಸವಣೂರಿಗೆ ಬೆಂಕಿ ಇಟ್ಟ ಜೋಷಿ!



ಹಾವೇರಿಯಲ್ಲಿ ಉದಾಸಿ ಪಟಾಲಂ ಪಡೆ ಶಿವಕುಮಾರ ಉದಾಸಿಯ ಪಾರ್ಲಿಮೆಂಟ್ ರಾಜಕಾರಣಕ್ಕಾಗಿ ಬೆಂಕಿ ಹಚ್ಚಿ ಮೈಕಾಯಿಸಿಕೊಂಡಂತೆ, ಧಾರವಾಡ ಪಾರ್ಲಿಮೆಂಟ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಹ್ಲಾದ್ ಜೋಷಿ ಎಂಬ ಕೇಸರಿ ದೆವ್ವದ ಹಿಂಬಾಲಕರು ಸವಣೂರಿಗೆ ಬೆಂಕಿ ಇಟ್ಟಿದ್ದಾರೆ. ಡಿಲಿಮಿಟೇಷನ್ ಕಾರಣಕ್ಕೆ ಸವಣೂರು ಧಾರವಾಡ ಲೋಕಸಭಾ ಕ್ಷೇತ್ರಕ್ಕೆ ಸೇರ್ಪಡೆಯಾಗಿದೆ. ಇಲ್ಲಿ ಬಹುಸಂಖ್ಯಾತರಾಗಿ ಮುಸ್ಲಿಮರಿರುವುದರಿಂದ ಜೋಷಿಗೆ ಇಲ್ಲಿಂದ ನೂರು ಓಟು ಬೀಳುವುದು ದುಸ್ತರವಾಗಿತ್ತು, ಅದಕ್ಕಾಗಿ ಜೋಷಿ ಇಲ್ಲೊಂದು ಅರ್ಜೆಂಟಾಗಿ ಬೆಂಕಿ ಹಚ್ಚಬೇಕಾಗಿತ್ತು. ಆ ಮೂಲಕ ಹಿಂದೂ-ಮುಸ್ಲಿಂ ಪಾಲಿಟಿಕ್ಸ್‌ಗೆ ಜೀವ ನೀಡಬೇಕಾಗಿತ್ತು.


ಹಾವೇರಿಯಲ್ಲಿ ಚೆಡ್ಡಿಗಳಿಗೆ ಈದ್‌ಮಿಲಾದ್ ಮತ್ತು ಹೋಳಿ ಹಬ್ಬಗಳು ಗುರಾಣಿಯಾಗಿದ್ದರೆ ಸವಣೂರಿನ ಪಾಲಿಗೆ 'ಅಸಾರ ದರ್ಗಾ' ಉರುಸು ಅಸ್ತ್ರವಾಯಿತು. ಅಸಾರ ದರ್ಗಾ ಉರುಸಿನ ಸಂದರ್ಭದಲ್ಲಿ ರಾತ್ರಿ ಕೆಲ ಕಿರಿಕ್ ಆಸಾಮಿಗಳು ದರ್ಗಾದ ರಸ್ತೆಯಲ್ಲಿ ಹಲಗೆ ಬಾರಿಸುತ್ತಾ ನಿಂತುಕೊಂಡಿದ್ದರು. ಅದನ್ನು ನಿಲ್ಲಿಸುವಂತೆ ಅಲ್ಪಸಂಖ್ಯಾತರು ಸಾಕಷ್ಟು ಬಾರಿ ವಿನಂತಿಸಿಕೊಂಡಿದ್ದರು. ಆದರೆ ಮಾಜಿ ಭಜರಂಗಿ, ಹಾಲಿ ಬಿಜೆಪಿಯ ಮಂಜುನಾಥ್ ಮುದಗಲ್ ಇಷಾರೆ ಮೇರೆಗೆ ನಡೆಯುತ್ತಿದ್ದ ತಮಟೆ ಬಾರಿಸುವಿಕೆ ನಿಲ್ಲಲಿಲ್ಲ. ತಕ್ಷಣಕ್ಕೆ ಸ್ಥಳಕ್ಕೆ ಧಾವಿಸಿದ ಡಿವೈಎಸ್ಪಿ ಎಸ್.ಎಸ್.ಖೋತ ಹಲಗೆ ಭಾರಿಸುತ್ತಿದ್ದ ಯುವಕರಿಗೆ ಬುದ್ಧಿ ಹೇಳಿದರೂ ಹಿಂದೆ ಸರಿಯದಿದ್ದ ಕಾರಣಕ್ಕೆ ಅವರ ಮೇಲೆ ಲಾಠಿ ಚಾರ್ಜ್ ಮಾಡಿಬಿಟ್ಟರು. ಅಷ್ಟಕ್ಕೆ ಸಮಸ್ಯೆ ಬಗೆಹರಿಯಿತು ಎಂದು ಎಲ್ಲರೂ ನಿಟ್ಟುಸಿರು ಬಿಡುತ್ತಿದ್ದಂತೆ ಬಿಜೆಪಿಯ ಮಂಜುನಾಥ ಮುದಗಲ್ ಡಿವೈಎಸ್ಪಿ ಎಸ್.ಎಸ್. ಖೋತರಿಗೆ ಲಾಠಿ ಚಾರ್ಜ್ ಮಾಡಿದ್ದನ್ನು ಪ್ರಶ್ನಿಸಿದ್ದಾನೆ. ಆವಾಗಲೂ ಎಸ್.ಎಸ್. ಖೋತ ತಲೆಕೆಡಿಸಿಕೊಳ್ಳದಿದ್ದಾಗ ಅವರ ಮೇಲೆ ಹೆಂಡ ಕುಡಿದಿದ್ದರ ಆರೋಪ ಹೊರಿಸಿ, ಅವರ ರಕ್ತ ತಪಾಸಣೆಗೆ ನಿಂತಿದೆ ಜೋಷಿ ಪಟಾಲಂ ಪಡೆ! ಆಗಲೂ ಬಗ್ಗದ ಖೋತ ಬಹಿರಂಗವಾಗಿ ತಮ್ಮ ರಕ್ತ ತಪಾಸಣೆಗೆ ಮುಂದಾಗಿದ್ದಾರೆ.

ಅಷ್ಟಾದ ಮೇಲೆ ಅಸಾರ ದರ್ಗಾದ ಉರುಸಿನಲ್ಲಿ ಹುಡುಗಿಯರನ್ನು ಕಾಡಿಸುತ್ತಾ ನಿಂತಿದ್ದ ಅಲ್ಪಸಂಖ್ಯಾತ ಸಮುದಾಯದ ಹುಡುಗರನ್ನು ಎಸ್.ಎಸ್. ಖೋಡ ಜಬರಿಸಿದ್ದಾರೆ. ಕೀಟಲೆ ಮಿತಿಮೀರಿದಾಗ ಒಂದಿಬ್ಬರಿಗೆ ಹೊಡೆತ ಕೂಡ ಕೊಟ್ಟಿದ್ದಾರೆ. ಅಷ್ಟಕ್ಕೇ ಬುದ್ಧಿಗೇಡಿ ಯುವಕರು ಪೊಲೀಸ್ ಜೀಪಿಗೆ ಕಲ್ಲು ಒಗೆದಿದ್ದಾರೆ. ಇದಕ್ಕಾಗಿ ಪೊಲೀಸರು 12 ಮಂದಿಯ ಮೇಲೆ ಕೇಸು ಜಡಿದು ಹಾಕಿದ್ದಾರೆ. ಆದಷೆ ಮರುದಿನ ಎಂಟ್ರಿಕೊಟ್ಟ ಚೆಡ್ಡಿ ಚತುರ ಸೋಮಣ್ಣ ಬೇವಿನಮರದ ಇಡೀ ಪ್ರಕರಣವನ್ನು ಹಳ್ಳ ಹಿಡಿಸಿ ದಾಂಧಲೆ ಶುರುವಿಟ್ಟ. ಇದರ ಹಿಂದೆ ಪ್ರಹ್ಲಾದ್ ಜೋಷಿಯ ಕೇಸರಿ ಐಡಿಯಾಲಜಿ ವರ್ಕ್ ಮಾಡಿದ್ದೆ ಎನ್ನುವುದಕ್ಕೆ ಸೋಮಣ್ಣ ಬೇವಿನಮರದನ ಎಂಟ್ರಿಯೇ ಕಾರಣವಾಗಿತ್ತು. ಹೀಗೆ ಅತ್ತ ಹಾವೇರಿಯಲ್ಲಿ ಶಿವಕುಮಾರ ಉದಾಸಿ ತನ್ನ ಗೆಲುವಿಗಾಗಿ ಏನೆಲ್ಲ ಮಾಡುತ್ತಿರುವಾಗಲೇ ತಾನೇನೂ ಕಮ್ಮಿಯಲ್ಲ ಎನ್ನುವಂತೆ ಜೋಷಿ ಸವಣೂರಿಗೆ ಬೆಂಕಿ ಇಡಿಸಿದ್ದಾನೆ. ಇದು ಸಾಮಾನ್ಯ ಜನರಿಗೆ ಅದ್ಯಾವಾಗ ಅರ್ಥವಾಗುತ್ತದೋ... ಆ ಅಸಾರ ದರ್ಗಾದ ಗೋರಿಯೇ ಹೇಳಬೇಕು.



ಪತ್ರಕರ್ತರು ದೇಶದ್ರೋಹಿಗಳಂತೆ!

ಹಾವೇರಿಯ ಶಾಸಕ ನೆಹರು ಓಲೇಕಾರ ನಿಮ್ಹಾನ್ಸ್‌ನ ಕಾಯಂ ಅತಿಥಿಯಾಗುವ ಕಾಲ ಒದಗಿಬಂದಿದೆ. ತಾನೊಬ್ಬ ದಲಿತ ಎನ್ನುವ ಪ್ರಾಥಮಿಕ ಪರಿಜ್ಞಾನ ಕೂಡ ಇವನಲ್ಲಿಲ್ಲ. ಬ್ಯಾಡಗಿ, ಆನೇಕಲ್‌ನಲ್ಲಿ ಶಿಕ್ಷಕ ವೃತ್ತಿ ಮಾಡಿಕೊಂಡು ನಾಲ್ಕಾರು ಜನರಿಗೆ ಅಕ್ಷರ ಜ್ಞಾನ ಹೇಳಿಕೊಡುತ್ತಿದ್ದ ಓಲೇಕಾರ ಯಾವಾಗ ಉದಾಸಿಯ ಚಪ್ಪಲಿ ಹಿಡಿದುಕೊಂಡು ನಿಂತನೋ ಆಗ ಅವನಲ್ಲೊಬ್ಬ ಚೆಡ್ಡಿಕೇಡಿ ಹುಟ್ಟಿಕೊಂಡ. ಮಾತೆತ್ತಿದರೆ ಸಂಘಪರಿವಾರದ ಮಡಿವಂತಿಕೆ ಪ್ರದರ್ಶಿಸುವ ಓಲೇಕಾರ ಹಾವೇರಿಯನ್ನು ಪುಟ್ಟಂಪೂರಾ ಸ್ಮಶಾನ ಮಾಡಿಬಿಟ್ಟಿದ್ದಾನೆ.



ರೈತರನ್ನು ಕೊಂದ ಗೋಲಿಬಾರ್ ಅನ್ನೂ ಸಮರ್ಥಿಸಿಕೊಂಡಿದ್ದ ಓಲೇಕಾರ ಮೊನ್ನೆಯ ಹಾವೇರಿ ಗಲಭೆಯ ಸಂದರ್ಭದಲ್ಲಿ ಜಿಲ್ಲಾಡಳಿತ ಹೇರಿದ್ದ ನಿಷೇಧಾಜ್ಞೆ ಮುರಿದು ತಮಟೆ ಬಾರಿಸಿಕೊಂಡು ಕೇಸರಿ ಧ್ವಜಗಳೊಂದಿಗೆ ಊರು ತುಂಬಾ ಮೆರವಣಿಗೆ ಮಾಡಿದ್ದ. ಇದನ್ನು ಪ್ರಶ್ನಿಸಿದ್ದ ಪತ್ರಕರ್ತರಿಗೆ ಓಲೇಕಾರ ಪತ್ರಕರ್ತರು ದೇಶದ್ರೋಹಿಗಳೆಂದು ಬುರುಡೆ ಬಿಟ್ಟಿದ್ದಾನೆ. ಹಾವೇರಿಯಲ್ಲಿನ ಪತ್ರಕರ್ತರಿಗೆ ಒಂದಷ್ಟು ಜನಪರ ಕಾಳಜಿ ಇರುವ ಕಾರಣಕ್ಕೆ ಇಡೀ ಹಾವೇರಿ ಗಲಭೆಯ ಸ್ಪಷ್ಟ ಚಿತ್ರಣ ಸಾಮಾನ್ಯ ಜನರಿಗೆ ಅರ್ಥವಾಗಿ ಬಿಜೆಪಿ ಬಣ್ಣ ಬಯಲಾಗಿತ್ತು.

ಇದನ್ನು ಸಹಿಸಿಕೊಳ್ಳದ ಓಲೇಕಾರ ತಾನು ನಿಷೇಧಾಜ್ಞೆ ಉಲ್ಲಂಘಿಸಿದ್ದನ್ನು ಬರೆದರೆ ಅದನ್ನು ದೇಶದ್ರೋಹಿತನಕ್ಕೆ ಹೋಲಿಸುತ್ತಿದ್ದಾನೆ. ನಿಜಕ್ಕೂ ಈ ದೇಶದಲ್ಲೇನಾದರೂ ಭಯೋತ್ಪಾದಕರು ಇದ್ದರೆ ಬಿಜೆಪಿಯಲ್ಲಿ ಮಾತ್ರ ಎಂದು ಸ್ವತಃ ಓಲೇಕಾರ ತನ್ನ ನಡೆನುಡಿಗಳಿಂದ ಹಾವೇರಿ ಜನರಿಗೆ ತೋರಿಸಿಕೊಡುತ್ತಿದ್ದಾನೆ. ಇಂಥವರಲ್ಲಿ ಹಾವೇರಿ ನೆಲದಲ್ಲಿ ಇವನಿಗಿಂತ ಮತ್ತೊಬ್ಬ ಭಯೋತ್ಪಾದಕ ಹುಟ್ಟಲು ಹೇಗೆ ಸಾಧ್ಯ?

ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಹುಮತ ಗಳಿಸಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಎಂಥ ದೇಶವನ್ನು ಸೃಷ್ಟಿಸುತ್ತಾರೆಂಬುದನ್ನು ಊಹಿಸುವುದು ಕಷ್ಟವಲ್ಲ. ಈಗಾಗಲೇ ಅವರು ಅಧಿಕಾರ ಹಿಡಿದ ರಾಜ್ಯಗಳನ್ನು ಒಮ್ಮೆ ನೋಡಿದರೆ ಸಾಕು ಅವರೆಂಥ ಆಡಳಿತ ಕೊಡಬಲ್ಲರು ಎಂಬುದನ್ನು ಕಲ್ಪಿಸಿಕೊಳ್ಳಬಹುದು. ಕರ್ನಾಟಕವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ಅಧಿಕಾರಕ್ಕೇರಿ ಇನ್ನೂ ಒಂದು ವರ್ಷವಾಗಿಲ್ಲ ಆಗಲೇ ಇಡೀ ರಾಜ್ಯದಾದ್ಯಂತ ಕೋಮು ದಳ್ಳುರಿಯನ್ನು ಹಚ್ಚಿ ಅದರಲ್ಲಿ ಚಳಿಕಾಯಿಸಿಕೊಳ್ಳುತ್ತಿದ್ದಾರೆ; ಪ್ರೀತಿ, ವಿಶ್ವಾಸಗಳಿಂದ ಸಹಬಾಳ್ವೆ ನಡೆಸುತ್ತಿದ್ದ ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ ಸಮುದಾಯಗಳ ನಡುವೆ ದ್ವೇಷದ ವಿಷಬೀಜ ಬಿತ್ತಿ ಪರಸ್ಪರ ಬಡಿದಾಡುಕೊಳ್ಳುವಂತೆ ಮಾಡಿ ಇಡೀ ನಾಡಿನ ನೆಮ್ಮದಿಯನ್ನೇ ಹಾಳು ಮಾಡಿದ್ದಾರೆ. ಇಡೀ ರಾಜ್ಯದಾದ್ಯಂತ ಚರ್ಚುಗಳ ಮೇಲೆ, ಕ್ರಿಶ್ಚಿಯನ್ ಸಮುದಾಯದ ಮೇಲೆ ತಿಂಗಳುಗಟ್ಟಲೇ ನಡೆದ ಅವ್ಯಾಹತ ದಾಳಿಗಳು, ಇಡೀ ರಾಜ್ಯದಾದ್ಯಂತ, ಅದರಲ್ಲೂ ವಿಶೇಷವಾಗಿ ಕರಾವಳಿಯಾದ್ಯಂತ ನಿರಂತರವಾಗಿ ಎಗ್ಗಿಲ್ಲದೇ ಸಾಗಿರುವ ಮುಸ್ಲಿಮರ ಮೇಲಿನ ದಾಳಿಗಳು ಅಲ್ಪಸಂಖ್ಯಾತ ಸಮುದಾಯಗಳು ಸದಾ ಆತಂಕದಲ್ಲಿ ಬದುಕುವ ದುಸ್ಥಿತಿಯನ್ನು ಸೃಷ್ಟಿಸಿವೆ.

ಜೊತೆಗೂಡಿ ಸಹಬಾಳ್ವೆ ನಡೆಸುತ್ತಿರುವ ಜನಸಮುದಾಯಗಳು ಪರಸ್ಪರ ಕಿತ್ತಾಡಿಕೊಂಡಷ್ಟೂ, ಹೆಚ್ಚೆಚ್ಚು ಹೆಣಗಳು ಉರುಳಿದಷ್ಟೂ, ಹೆಚ್ಚೆಚ್ಚು ರಕ್ತ ಹರಿದಷ್ಟೂ ಹಿಂದೂಗಳ ಓಟುಗಳು ಸದೃಢೀಕರಣಗೊಂಡು

ಎಚ್ಚರಿಕೆ!

ಬಿಜೆಪಿಗೆ ಬೀಳುತ್ತವೆ ಎಂದು ಬಲವಾಗಿ ನಂಬಿರುವ ಈ ಹಿಂದೂ ಭಯೋತ್ಪಾದಕರು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಬೆಂಕಿಯಿಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಅದರಲ್ಲೂ ರಾಜ್ಯದಲ್ಲಿ ಬಿಜೆಪಿ ಪಕ್ಷವೇ ಅಧಿಕಾರದಲ್ಲಿರುವುದರಿಂದ ಅವರಾಡುವ ರಕ್ತದೋಕುಳಿಗೆ ಅಡೆತಡೆಯೇ ಇಲ್ಲದಂತಾಗಿದೆ. ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವ ಈ ದಿನಗಳಲ್ಲಿ ಅವರು ರಾಜ್ಯಾದ್ಯಂತ ಹಚ್ಚಿರುವ ಬೆಂಕಿಯ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ. ಇವು ಅವರ ರಾಕ್ಷಸೀ ಪ್ರವೃತ್ತಿಯನ್ನು ಬಿಚ್ಚಿ ತೋರಿಸುತ್ತವೆ; ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಎಂಥ ರಕ್ತಸಿಕ್ತ ಭರತಖಂಡ ನಿರ್ಮಾಣವಾಗಬಹುದೆಂಬುದನ್ನು ಸೂಚ್ಯವಾಗಿ ಎಚ್ಚರಿಸುತ್ತಿವೆ.



ಬಿಜೆಪಿ ಅಧಿಕಾರಕ್ಕೆ ಬರಬೇಕೆ?








...ಹಿಂದೂ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಎಂದೆಲ್ಲಾ ...ಡುತ್ತಾ ಮುತಾಲಿಕ್ ನೇತೃತ್ವದ ಶ್ರೀರಾಮ ಸೇನೆಯ ...ಗಗಳು ಮಂಗಳೂರಿನ ಪಬ್ ಮೇಲೆ ದಾಳಿ ಮಾಡಿ, ...ಹಿಂದೂ ಧರ್ಮದ ಮಹಿಳೆಯರನ್ನು ಬೀದಿಯಲ್ಲಿ ...ಡಿಸಿಕೊಂಡು ಬಡಿದು ಸಂಸ್ಕೃತಿ ರಕ್ಷಣೆ ಮಾಡಿದರು! ... ಕಾರಣಕ್ಕೆ ಹಿಂದೂ ಮಹಿಳೆಯರಿಂದಲೇ ಕಂಡಕಂಡಲ್ಲಿ ...ಗಿ ಉಗಿಸಿಕೊಂಡರು. ನಂತರ ...ಖಕ್ಕೆ ಬಿದ್ದ ಎಂಜಲನ್ನು ...ಕೊಂಡು 'ಪ್ರೇಮಿಗಳ ದಿನ' ...ವಿಸಲು ಬಿಡುವುದಿಲ್ಲ ಎಂದು ...ಂಕರಿಸಿದರು. ಇದಕ್ಕೆ ...ರೋಧವಾಗಿ ಮತ್ತದೇ ...ದೂ ಮಹಿಳೆಯರು ...ತಾಲಿಕನಿಗೆ 'ಗುಲಾಬಿ ...ಗಳನ್ನು ಉಡುಗೊರೆಯಾಗಿ ...ತ್ತಾಗ ಹೊರಗೆ ಬಂದು ...ಖ ತೋರಿಸಲಾಗದ ...ತಾಲಿಕನ ಮಂಗಗಳು ಅವರ ...ತ್ರಿ ಕೇಸು ಹಾಕುವುದಾಗಿ ಬೆದರಿಸಿದ್ದರು. ಅದಕ್ಕೂ ...ದಲು ಹದಿನಾರು ವರ್ಷ ತುಂಬಿರದ ಅಶ್ವಿನಿ ಕುಲಾಲ್ ... ಮಂಗಳೂರಿನ ಹುಡುಗಿಯೊಬ್ಬಳು ಮುಸ್ಲಿಮ್ ...ಡುಗನೊಂದಿಗೆ ಮಾತನಾಡುತ್ತಿದ್ದಳು ಎಂದು ...ರಂಗಿಗಳು ಆಕೆಗೆ ಕೊಡಬಾರದ ಕಿರುಕುಳ ಕೊಟ್ಟರು. ... ಕಿರುಕುಳ ತಾಳಲಾರದೆ ಅಶ್ವಿನಿ ನೇಣಿಗೆ ಕೊರ...ಳು; ಕುದಿ ಆರಳುವ ಮೊದಲೇ ಕಮರಿಹೋಯಿತು. ... ಹಿಂದೂ ಹುಡುಗಿಯೊಬ್ಬಳನ್ನು ಬಲಿತೆಗೆದುಕೊಳ್ಳುವ ...ಲಕ ಹಿಂದೂ ಧರ್ಮ ರಕ್ಷಣೆಯನ್ನು ಭಜರಂಗಿಗಳು ...ದರು. ಇವು ಕೇವಲ ಎರಡು ತಿಂಗಳ ಅವಧಿಯಲ್ಲಿ ... ಘಟನೆಗಳ ಕೆಲ ಸ್ಯಾಂಪಲ್‌ಗಳು ಮಾತ್ರ.

ಪುತ್ತೂರು: ಜೊತೆಗೆ ಓಡಾಡುವುದೂ ಅಪರಾಧ!

ಈಗ ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವಂತೆಯೇ ಇವರ ಇಂತಹ ಪುಂಡಾಟಿಕೆಗಳ ಮುಂದುವರೆದ ಭಾಗ ಅನಾವರಣಗೊಳ್ಳುತ್ತಿದೆ. ಮೊನ್ನೆ ಮಾರ್ಚ್ 17ರಂದು ಪುತ್ತೂರಿನಲ್ಲಿ ಭಜರಂಗಿ-ಬಿಜೆಪಿ ಗೂಂಡಾಗಳು ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮೇಲೆ ನಡೆಸಿದ ಮಾರಣಾಂತಿಕ ದಾಳಿ ಅದಕ್ಕೊಂದು ಉದಾಹರಣೆ.

ಮಂಗಳೂರಿನ ಹಂಪನಕಟ್ಟೆಯಲ್ಲಿರುವ ಫ್ರಾಂಕ್‌ಫಿನ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಮ್ಯಾನೇಜ್‌ಮೆಂಟ್ ಅಧ್ಯಯನಕ್ಕಾಗಿ ತಂಡಗಳನ್ನು ರಚಿಸಿಕೊಂಡು ಪುತ್ತೂರು ಮತ್ತು ಸುಳ್ಯಕ್ಕೆ ಹೋಗಿದ್ದರು. ಪುತ್ತೂರಿಗೆ ಬಂದಿದ್ದ ತಂಡದಲ್ಲಿ ಹಿಂದೂ ಮತ್ತು ಮುಸ್ಲಿಮ್ ಎರಡೂ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳಿದ್ದರು. ಇಡೀ ಕರಾವಳಿಯಲ್ಲಿ ಈ ಎರಡೂ ಸಮುದಾಯಗಳ ನಡುವೆ ದ್ವೇಷ, ಅಸೂಯೆ, ವೈರತ್ವಗಳನ್ನು ಬೆಳೆಸುವುದಕ್ಕೆ ನಿರಂತರವಾಗಿ ಪ್ರಯತ್ನಿಸುತ್ತಿರುವ ಸಂಘಪರಿವಾರಿಗಳಿಗೆ ಈ ವಿದ್ಯಾರ್ಥಿಗಳು ಜೊತೆಗೂಡಿ ಅಧ್ಯಯನ ಮಾಡುತ್ತಿರುವುದು ಸಹಜವಾಗಿ ಹೊಟ್ಟೆಯಲ್ಲಿ ಬೆಂಕಿಬಿದ್ದಂತಾಗಿದೆ. ಸುಮಾರು ಐವತ್ತರಷ್ಟಿದ್ದ ಭಜರಂಗಿ-ಬಿಜೆಪಿ ಗೂಂಡಾಗಳು ಪುತ್ತೂರಿನ ವಿದ್ಯಾರ್ಥಿಗಳ ತಂಡದ ಮೇಲೆ ದಾಳಿ ಮಾಡಿ ರಿಶಲ್, ವಿಶ್ವಾಸ್ ಮತ್ತು ರೋಹನ್ ಎಂಬ ವಿದ್ಯಾರ್ಥಿಗಳನ್ನು, ಕಾವ್ಯ ಮತ್ತು ಜೀನಾ ಎಂಬ ವಿದ್ಯಾರ್ಥಿನಿಯರನ್ನು ದನಕ್ಕೆ ಬಡಿದಂತೆ ಬಡಿದು ಹಾಕಿದ್ದಾರೆ.



ಇದೇ ವೇಳೆಯಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯ ಎಂಬ ಸಂಘಟನೆ ಭಜರಂಗಿ-ಬಿಜೆಪಿ ಗೂಂಡಾಗಳಿಂದ ಹಲ್ಲೆಗೊಳಗಾದ ವಿದ್ಯಾರ್ಥಿಗಳ ಪರವಾಗಿ ನಿಂತುಕೊಂಡಿದ್ದೇ ತಡ ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ಹೋಗಿದೆ. ಹಲ್ಲೆ ನಡೆಸಿದ ಗೂಂಡಾಗಳ ವಿರುದ್ಧ ಇಡೀ ಪುತ್ತೂರು ಸ್ವಯಂಪ್ರೇರಿತವಾಗಿ ಬಂದ್ ಆಗಿದೆ. ಈ ಘಟನೆ ಪುತ್ತೂರು ಮಾತ್ರವಲ್ಲದೇ ಅಕ್ಕಪಕ್ಕದ ನಗರ, ಪಟ್ಟಣಗಳಲ್ಲೂ ಪ್ರತಿಧ್ವನಿಸಿ ಸಾಮಾನ್ಯ ಜನ ಹಿಂದೂ-ಮುಸ್ಲಿಮರೆನ್ನದೇ ಭಜರಂಗಿ-ಬಿಜೆಪಿ ಗೂಂಡಾಗಳಿಗೆ ಮಂಗಳಾರತಿ ಎತ್ತಿದ್ದಾರೆ.

ಮರುದಿನ ಈ ಘಟನೆಯನ್ನು ಒಂದು ಪೂರ್ಣಪ್ರಮಾಣದ ಕೋಮುಗಲಭೆಯನ್ನಾಗಿ ಪರಿವರ್ತಿಸುವಲ್ಲಿ ಭಜರಂಗಿಗಳು ಯಶಸ್ವಿಯಾದರು. ಇಡೀ ಪುತ್ತೂರಿನಾದ್ಯಂತ ಹಿಂಸಾಚಾರ ಪ್ರಾರಂಭವಾಗಿ ಹತ್ತಾರು ಗ್ಯಾರೇಜ್‌ಗಳು, ವಾಹನಗಳು ಬೆಂಕಿಗಾಹುತಿಯಾದವು; ಮುಸ್ಲಿಮರ ಮನೆಮನೆಗೆ ನುಗ್ಗಿದ ಭಜರಂಗಿ-ಬಿಜೆಪಿಗಳು ಮತ್ತು ಮಫ್ತಿಯಲ್ಲಿದ್ದ ಪೊಲೀಸರು ಮನಬಂದಂತೆ




ದೌರ್ಜನ್ಯಗಳನ್ನು ನಡೆಸಿದರು. ಪುತ್ತೂರು ಮತ್ತೊಮ್ಮೆ ಬಂದ್ ಆಯಿತು. ನಿಷೇಧಾಜ್ಞೆಯನ್ನು ಮತ್ತೆ ವಿಸ್ತರಿಸಲಾಯಿತು.

ಬಿಜೆಪಿ ಕೇಂದ್ರದಲ್ಲೂ ಅಧಿಕಾರಕ್ಕೆ ಬಂದರೆ ಹುಡುಗ-ಹುಡುಗಿಯರು ಜೊತೆಗೂಡಿ ಓಡಾಡುವುದೂ ಅಪರಾಧವಾಗಿಬಿಡುತ್ತದೆ; ಅಣ್ಣ-ತಂಗಿ, ಶಿಕ್ಷಕ-ವಿದ್ಯಾರ್ಥಿನಿ, ಹುಡುಗ-ಹುಡುಗಿ – ಯಾರೂ ಪರಸ್ಪರ ಮಾತನಾಡುವ ಪರಿಸ್ಥಿತಿಯಿರುವುದಿಲ್ಲ, ಅವರು ಹಿಂದೂ-ಮುಸ್ಲಿಮರೇ ಆಗಿರಬೇಕೆಂದೇನೂ ಇಲ್ಲ, ಹುಡುಗ-ಹುಡುಗಿ ಆಗಿದ್ದರೆ ಸಾಕು, ಭಜರಂಗಿ-ಬಿಜೆಪಿಗಳು ಬಂದು ಬಡಿದು ಹಾಕುತ್ತಾರಷ್ಟೆ.

■ ಕುಮಾರ್ ಬುರುಡಿಕಟ್ಟಿ

ಬಿಜೆಪಿ ಸ್ಲೋಗನ್ 'ರಾಮನಿಗೆ ಪಟ್ಟ ಅಲ್ಲಾನಿಗೆ ಚಟ್ಟ'

ಮುಸ್ಲಿಮರ ಧಾರ್ಮಿಕ ಭಾವನೆಯನ್ನು ಕೆರಳಿಸಿ, ಕೋಮುಗಲಭೆ ಎಬ್ಬಿಸಿ, ರಕ್ತ ಹರಿಸುವುದಕ್ಕಾಗಿ ಸಂಘಪರಿವಾರಿಗಳು ಕುಂದಾಪುರದಲ್ಲಿ ಮಾಡಿದ ಅರಚಾಟ ಈ ರೀತಿಯದ್ದು. ಮಂಗಳೂರಿನಲ್ಲಿ ಬಿಜೆಪಿ, ಸಂಘಪರಿವಾರಿಗಳು ಇದೇ ಮಾರ್ಚ್ 15ರ ಭಾನುವಾರ ಹಿಂದೂ ಸಮಾಜೋತ್ಸವ ಆಚರಿಸಿದರು. ಅಲ್ಲಿಂದ ವಾಪಸ್ಸು ಹೋಗುವಾಗ ಕುಂದಾಪುರ ಸಮೀಪದ ಬೈಂದೂರಿನಲ್ಲಿರುವ ನೂರು ವರ್ಷಗಳಷ್ಟು ಹಳೆಯದಾದ ಚಾರಿತ್ರಿಕ ಜುಮ್ಮಾ ಮಸೀದಿ ಮುಂದೆ



ನಿಂತು 'ಅಲ್ಲಾನಿಗೆ ಚಟ್ಟ, ಶ್ರೀರಾಮನಿಗೆ ಪಟ್ಟ' ಎಂಬ ಪ್ರಚೋದನಾಕಾರಿ ಘೋಷಣೆಯನ್ನು ಕೂಗುತ್ತಾ ಮಧ್ಯರಾತ್ರಿಯ ಹೊತ್ತಿಗೆ ದಾಳಿಯಿಟ್ಟಿದ್ದಾರೆ. ಮುಸ್ಲಿಮರ ಪವಿತ್ರ ಧಾರ್ಮಿಕ ಗ್ರಂಥವಾದ ಖುರಾನ್‌ಗೆ ಸೀಮೆಎಣ್ಣೆ ಹಾಕಿ ಬೆಂಕಿ ಹಚ್ಚಿದ್ದಲ್ಲದೇ ಮಸೀದಿಯ ಒಳಗಡೆಯಿರುವ ಎಲ್ಲಾ ವಸ್ತುಗಳನ್ನು ಧ್ವಂಸಗೊಳಿಸಿದ್ದಾರೆ. ಮಸೀದಿಯ ಆವರಣದಲ್ಲೇ ಹತ್ತಾರು ವಿಸ್ಕೀ ಬಾಟಲಿಗಳು ದೊರೆತಿದ್ದು ಮದ್ಯಪಾನ ಮಾಡಿ ದಾಳಿ ಮಾಡಿದ್ದಾರೆನ್ನಲಾಗುತ್ತಿದೆ.

1992ರಲ್ಲಿ ಹಿಂದೂ ಭಯೋತ್ಪಾದಕರು ಚಾರಿತ್ರಿಕ ಬಾಬ್ರಿ ಮಸೀದಿ ಕೆಡವಿದ ಮೇಲೆ ದೇಶದಾದ್ಯಂತ ಕೋಮುಗಲಭೆಗಳ ಹೊತ್ತಿಕೊಂಡಾಗಲೂ ಈ ಮಸೀದಿಯ ಮೇಲೆ ದಾಳಿ ನಡೆದಿತ್ತು. ಈಗ ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಮತ್ತೊಮ್ಮೆ ಕಾಲು ಕೆದರಿ ಜಗಳ ಮಾಡುವ ಪ್ರಯತ್ನವನ್ನು ಹಿಂದೂ ಭಯೋತ್ಪಾದಕರು ನಡೆಸಿದ್ದಾರೆ.

ಬೈಂದೂರಿನಲ್ಲಿ ಮಸೀದಿಗೆ ದಾಳಿ ಮಾಡಿದ ಎರಡೇ ದಿನಗಳಲ್ಲಿ ಕೋಟದ ಮದ್ರಸಾಕ್ಕೆ ಬೆಂಕಿಯಿಟ್ಟಿದ್ದಾರೆ. ಮಾರ್ಚ್ 17ರ ಬೆಳಗಿನ ಜಾವ ಪೆಟ್ರೋಲ್ ಕ್ಯಾನ್‌ಗಳೊಂದಿಗೆ ದಾಳಿಯಿಟ್ಟ ಭಜರಂಗಿ-ಬಿಜೆಪಿ ಪುಂಡರ ದಂಡು ಒಳಗೆ ಮಲಗಿದ್ದವರ ಸಮೇತವಾಗಿ ಇಡೀ ಮದರಸಾವನ್ನು ಸುಟ್ಟು ಹಾಕುವುದಕ್ಕೆ ಪ್ರಯತ್ನ ನಡೆಸಿದೆ.

ಈ ಎರಡು ಘಟನೆಗಳಲ್ಲಿ ಭಜರಂಗಿ-ಬಿಜೆಪಿಗಳು ಕಾಲು ಕೆದರಿ ಜಗಳ ಮಾಡಲು ಪ್ರಯತ್ನಿಸಿದರಾದರೂ ಅಲ್ಪಸಂಖ್ಯಾತ ಮುಸ್ಲಿಮ್ ಸಮುದಾಯದ ಜನ ಸಂಯಮ ತೋರಿದ್ದರಿಂದ ಭುಗಿಲೇಳಬಹುದಾಗಿದ್ದ ಒಂದು ಕೋಮುದಳ್ಳುರಿ ಶಮನವಾಯಿತು; ಹತ್ತಾರು ಹೆಣಗಳು ಉರುಳುವುದು ತಪ್ಪಿತು.

ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಅರ್ಧಕ್ಕೆ ನಿಂತಿರುವ ಕೋಮು ಬೆಂಕಿ ಮತ್ತೆ ಹೊತ್ತಿಕೊಂಡು ಉರಿಯುತ್ತದೆ. ಅಳಿದುಳಿದ ಶಾಂತಿ, ನೆಮ್ಮದಿಯೂ ಅದರಲ್ಲಿ ಸುಟ್ಟು ಬೂದಿಯಾಗುತ್ತದೆ.



ಎಲ್ಲಿಗೆ ಪಯಣ? ಯಾವುದು ಪಕ್ಷ

ಕಳೆದ ಮೂರ್ನಾಲ್ಕು ದಿನಗಳಿಂದ ಕುಮಾರ ಸ್ವಾಮಿ ಜೊತೆ ರಹಸ್ಯ ಮಾತುಕಥೆ ನಡೆಸಿರುವ ಅಂಬರೀಶ್ ಒಂದೋ ಬೆಂಗಳೂರು ದಕ್ಷಿಣ ಅಥವಾ ಬೆಂಗಳೂರು ಗ್ರಾಮಾಂತರ (ಕನಕಪುರ) ಜೆಡಿಎಸ್‌ನಿಂದ ಅಖಾಡಕ್ಕಿಳಿಯುವ ಮಾತು ಕೇಳಿ ಬರುತ್ತಿದೆ. ಹಾಗೇನಾದರೂ ಆದರೆ ಬಿಜೆಪಿಯ ಅನಂತಕುಮಾರ್ ಅವರಿಗೆ ನಡುಕ ಮತ್ತು ಸಿ.ಪಿ. ಯೋಗೇಶ್ವರ್‌ಗೆ ಸೋಲು ಕಟ್ಟಿಟ್ಟ ಬುತ್ತಿ...



● ಸದಾಶಿವ ಶೆಣೈ

ಅತ್ತ ಕಾಂಗ್ರೆಸನ್ನೂ ತೊರೆಯಲಾಗದೆ ಅತ್ತ ಬಿಜೆಪಿಗೂ ಹೋಗಲಾರದೆ ವಿಚಿತ್ರವಾದ ಸ್ಥಿತಿಯಲ್ಲಿ ರೆಬಲ್ ಸ್ಟಾರ್, 'ಮಂಡ್ಯದ ಏಕೈಕ ಗಂಡು' ಅಂಬರೀಶ್ ಒದ್ದಾಡುತ್ತಿದ್ದಾರೆ. ಅಂಬಿಯ ಈ ರಾಜಕೀಯ ಅತಂತ್ರ ಸ್ಥಿತಿಗೆ ಸ್ವತಃ ಅಂಬಿ ಕಾರಣವೇ ವಿನಃ ಬೇರೆ ಯಾರೂ ಅಲ್ಲ.

ಚುನಾವಣೆ ಘೋಷಣೆಯಾದ ನಂತರ ಅಂಬರೀಶ್ ಬಗ್ಗೆ ದಿನಕ್ಕೊಂದು ಕತೆ ಹುಟ್ಟುತ್ತಲೇ ಇದೆ. ಕಾಂಗ್ರೆಸ್ ತೊರೆದು ಅಂಬಿ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಯಾಗುತ್ತಾರೆ ಎಂಬುದು ದಟ್ಟವಾಗಿ ಹಬ್ಬರುವ ಸುದ್ದಿ. ಅಂಬಿ ಬಿಜೆಪಿ ಸೇರಿದರೂ ಚುನಾವಣೆಯಲ್ಲಿ ಸ್ಪರ್ಧಿಸದೇ ಬರೀ ಪಕ್ಷದ ಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಎಂಬುದು ಇನ್ನೊಂದು ಸುದ್ದಿ. ಚನ್ನಪಟ್ಟಣ ಕ್ಷೇತ್ರದ ವಂಚಕ ಶಾಸಕ ಕಂ ಕೆಟ್ಟ ಸಿನಿಮಾ ನಟ ಯೋಗೇಶ್ವರ್ ಬಿಜೆಪಿ ಸೇರಿ ಲೋಕಸಭೆಗೆ ಸ್ಪರ್ಧಿಸುತ್ತಿರುವುದರಿಂದ ಅವರ ಚನ್ನಪಟ್ಟಣ ಕ್ಷೇತ್ರದಿಂದ ಅಂಬಿ ವಿಧಾನಸಭೆಗೆ ಸ್ಪರ್ಧಿಸಿ ರಾಜ್ಯ ರಾಜಕೀಯಕ್ಕೆ ಧುಮುಕಿ ಯಡ್ಡಿ ಕ್ಯಾಬಿನೆಟ್‌ನಲ್ಲಿ ಚೆಡ್ಡಿ ತೊಟ್ಟು ಮಂತ್ರಿಯಾಗುತ್ತಾರೆ ಎಂಬುದು ಮತ್ತೊಂದು ಸುದ್ದಿ. ಈಗ ಅಂಬಿ ಜೆಡಿಎಸ್ ಸೇರಿ ಬೆಂಗಳೂರು ಗ್ರಾಮಾಂತರದಿಂದ ಸ್ಪರ್ಧಿಸಲಿದ್ದಾರೆಂಬುದು ಲೇಟೆಸ್ಟ್ ಸುದ್ದಿ.

ಅಂಬರೀಶ್ ಅವರನ್ನು ಅತ್ಯಂತ ಹತ್ತಿರದಿಂದ ಬಲ್ಲವರಿಗೆ ಈ ಯಾವ ಸುದ್ದಿಯೂ ಆಶ್ಚರ್ಯ ಮೂಡಿಸುವುದಿಲ್ಲ. ಏಕೆಂದರೆ ಸಿನಿಮಾಗಳಲ್ಲಿ ಪಾತ್ರಗಳನ್ನು ಬದಲಿಸಿದಂತೆ ರಾಜಕೀಯದಲ್ಲಿ ಪಕ್ಷಗಳನ್ನು ಬದಲಾಯಿಸುವುದು ಅಂಬಿಗೇನು ಹೊಸತಲ್ಲ.

ಪಾತ್ರದಂತೆ ಪಕ್ಷವೂ ಬದಲು

ಕಳೆದ ಮೂರ್ನಾಲ್ಕು ದಿನಗಳಿಂದ ಕುಮಾರಸ್ವಾಮಿ ಜೊತೆ ರಹಸ್ಯ ಮಾತುಕತೆ ನಡೆಸಿರುವ ಅಂಬಿ ಒಂದೋ ಬೆಂಗಳೂರು ದಕ್ಷಿಣ ಅಥವಾ ಬೆಂಗಳೂರು ಗ್ರಾಮಾಂತರ(ಕನಕಪುರ) ಜೆಡಿಎಸ್‌ನಿಂದ ಅಖಾಡಕ್ಕಿಳಿಯುವ ಮಾತು ಕೇಳಿಬರುತ್ತಿದೆ.

ಈ ಸುದ್ದಿ ಬಿಜೆಪಿಗಳಿಗೆ ನಿರಾಶೆಯನ್ನೂ ಕಾಂಗೈಗಳಲ್ಲಿ ಆತಂಕವನ್ನೂ ಉಂಟುಮಾಡಿದೆ.

ಅಂಬಿ ತನ್ನ ರಾಜಕೀಯ ಜೀವನದ ಆರಂಭದಲ್ಲೇ ಬೆಂಗಳೂರಿನಲ್ಲಿ ಅಧ್ವಾನಿಯವರಿಂದ ಹಾರ ಹಾಕಿಸಿಕೊಂಡು ಬಿಜೆಪಿ ಸೇರಿದ್ದರು. ಆದರೆ ಇದರ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ "ನಾನು ಕಲಾವಿದ. ಎಲ್ಲಾ ಪಕ್ಷದಲ್ಲೂ ನನಗೆ ಸ್ನೇಹಿತರಿದ್ದಾರೆ. ನಾನು ಸುಮ್ಮನೆ ಹೋಗಿ ಅಧ್ವಾಣಿಯನ್ನು ವಿಶ್ ಮಾಡಿದ್ದೆ'' ಎಂಬ ಡೈಲಾಗ್ ಹೊಡೆದಿದ್ದರು. ಅದೇ ಹೊತ್ತಿಗೆ ಕಾಂಗ್ರೆಸ್ ವಲಯದಲ್ಲೂ, ದೇವೇಗೌಡರ ಮನೆಯ ಪಡಸಾಲೆಯಲ್ಲೂ ಕಾಣಿಸಿಕೊಳ್ಳುತ್ತಿದ್ದರು ಅಂಬಿ.



ಇಂತಹ ಜಾಣತನದ ಅಂಬಿ ವೀಸಲಾತಿ ಕೋರಿ ಒಕ್ಕಲಿಗರು ನಡೆಸಿದ ಅಭೂತಪೂರ್ವ ಸಮಾವೇಶದಲ್ಲಿ ದೇವೇಗೌಡ ಮತ್ತು ಆದಿ ಚುಂಚನಗಿರಿಯ ಬಾಲಗಂಗಾಧರ ಸ್ವಾಮೀಜಿ ಜೊತೆಗೆ ವೇದಿಕೆಯನ್ನು ಅಲಂಕರಿಸಿದ್ದರು. ಅಲ್ಲಿಯತನಕ "ಕಲಾವಿದರಾದ ನಮಗೆ ಜಾತಿಯ ಸೋಂಕು ಇಲ್ಲ'' ಎಂದೇ ಹೇಳುತ್ತಿದ್ದ ಅಂಬಿ ಆ ಮೂಲಕ ತಾನು ಒಕ್ಕಲಿಗ ಎಂದು ಸಾರಿ ಆ ಸಮುದಾಯದೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದರು.

ಈ ಮಧ್ಯೆ ಅಂಬಿ ಕಾಂಗ್ರೆಸ್ ಜೊತೆಗಿನ ಒಡನಾಟವನ್ನೂ ಮುಂದುವರೆಸಿದ್ದರು. 1994ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಒಮ್ಮೆ ಅಂಬಿ ಕಾಂಗ್ರೆಸ್ ಪರ ಪ್ರಚಾರ ಮಾಡಲು ಮಂಡ್ಯಕ್ಕೆ ಹೋಗಿದ್ದರು. ಆದರೆ ಆಗ ಜನತಾದಳ ಗೆದ್ದರೆ ದೇವೇಗೌಡರೇ ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ, ಒಕ್ಕಲಿಗರಾದ ಕೆಂಗಲ್ ಹನುಮಂತಯ್ಯ ಕಟ್ಟಿಸಿದ್ದ ವಿಧಾನಸೌಧದಿಂದ ರಾಜ್ಯವನ್ನಾಳುವ ಪ್ರಥಮ ಒಕ್ಕಲಿಗರಾಗುತ್ತಾರೆ ಎಂಬ ಹವಾ ರಾಜ್ಯದ ದಕ್ಷಿಣ ಭಾಗದಲ್ಲಿ ಹಬ್ಬಿತ್ತು. ಆದ್ದರಿಂದ ಒಕ್ಕಲಿಗರಾದ ಅಂಬಿ ಒಕ್ಕಲಿಗ ಗೌಡರ ವಿರುದ್ಧವೇ ಪ್ರಚಾರಕ್ಕೆ ಬಂದಿದ್ದಾರೆಂದು ಭಾವಿಸಿದ ಮಂಡ್ಯದ ಜನ ಅಂಬಿಯತ್ತ ಟೊಮೆಟೊ, ಮೊಟ್ಟೆ, ಚಪ್ಪಲಿ ಇತ್ಯಾದಿಗಳನ್ನು ತೂರಿ ಅವರು ಭಾಷಣವನ್ನೇ ಮಾಡದಂತೆ ತಮ್ಮ ಕೋಪವನ್ನು ವ್ಯಕ್ತಪಡಿಸಿದ್ದರು.

ಆ ಚುನಾವಣೆಯಲ್ಲಿ ಗೌಡರು ರಾಮನಗರದಿಂದ ಅಭೂತಪೂರ್ವ ಜಯ ಸಾಧಿಸಿದರಲ್ಲದೆ ಅವರು ಮುಖ್ಯಮಂತ್ರಿಯೂ ಆದರು. ಆಗ ಅಂಬಿ ಕಾಂಗ್ರೆಸ್ ಪಕ್ಷದ ಸಹವಾಸವನ್ನು ತೊರೆದು ಜನತಾ ದಳ ಸೇರಿ ರಾಜಕೀಯದ ಗಾಳಿ ಎತ್ತ ಬೀಸುತ್ತಿದೆ ಎಂಬುದನ್ನು ಗ್ರಹಿಸುತ್ತಾ ಬಂದರು. ದೇವೇಗೌಡ ಮತ್ತು ಅವರ ಪುತ್ರ ನಿರ್ಮಾಪಕ ಕುಮಾರಸ್ವಾಮಿಗೆ ಹತ್ತಿರವಾದರು. ಎಷ್ಟರಮಟ್ಟಿಗೆ ಎಂದರೆ ಅದಾದ 16 ತಿಂಗಳುಗಳ ನಂತರ ದೇವೇಗೌಡರು ಪ್ರಧಾನ ಮಂತ್ರಿ ಪಟ್ಟಕ್ಕೆ ಏರಿದಾಗ ಅವರು ತೆರವು ಮಾಡಿದ್ದ ರಾಮನಗರ ಕ್ಷೇತ್ರದ ಜನತಾ ದಳದ ಅಭ್ಯರ್ಥಿಯಾಗಿ ಅಂಬಿಯನ್ನೇ ಘೋಷಿಸಿದರು.

ಅಂಬಿಯನ್ನು ತಮ್ಮ ಕ್ಷೇತ್ರದ ಅಭ್ಯರ್ಥಿ ಮಾಡುವ ಮುಖಾಂತರ ದೇವೇಗೌಡರು ಅಂಬಿಯನ್ನು ತಮ್ಮ ರಾಜಕೀಯ ಉತ್ತರಾಧಿಕಾರಿ ಎಂದು ಘೋಷಿಸಿದ್ದಾರೆ ಎಂದೇ ಒಕ್ಕಲಿಗ ಬಾಂಧವರು ಕನಸು ಕಂಡಿದ್ದರು.

ಅದಕ್ಕೆ ತಕ್ಕಂತೆ ರಾಮನಗರ ಅಸೆಂಬ್ಲಿ ಕ್ಷೇತ್ರದಿಂದ ಅಂಬಿಯನ್ನು ಗೆಲ್ಲಿಸುವ ಜವಾಬ್ದಾರಿಯನ್ನು ದೇವೇಗೌಡರು ಮತ್ತು ಅವರ ಮಕ್ಕಳಾದ ರೇವಣ್ಣ ಮತ್ತು ಕುಮಾರಸ್ವಾಮಿ ವಹಿಸಿಕೊಂಡರು. ಜೊತೆಗೆ ಆಗಿನ ರಾಜ್ಯದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಕೂಡ ಅಂಬಿಯನ್ನು ಗೆಲ್ಲಿಸಲೇಬೇಕೆಂದು ಪಣ ತೊಟ್ಟು ಓಡಾಡಿದರು. ಜನಪ್ರಿಯ ಸಿನಿಮಾ ನಟ, ಜೊತೆಗೆ ಒಕ್ಕಲಿಗ, ಸಾಲದೆಂಬಂತೆ ದೇವೇಗೌಡರ ಪರಮಾಪ್ತ ಎಲ್ಲವೂ ಅಂಬಿ ಆಗ ಆಗಿದ್ದರಿಂದ ಅವರು ಗೆಲ್ಲುವುದು ಕಟ್ಟಿಟ್ಟ ಬುತ್ತಿ ಎಂದೇ ಎಲ್ಲರೂ ಭಾವಿಸಿದ್ದರು.

ಆದರೆ ರಾಮನಗರದ ಪ್ರಜ್ಞಾವಂತ ಮತದಾರರು ಮಾತ್ರ ಹಾಗೆ ಭಾವಿಸಿರಲಿಲ್ಲ. ಅವರು ನಿರ್ದಾಕ್ಷಿಣ್ಯವಾಗಿ ಅಂಬಿಯನ್ನು ಸೋಲಿಸಿ ಕಾಂಗ್ರೆಸ್‌ನ ಸಿ.ಎಂ. ಲಿಂಗಪ್ಪ ಅವರನ್ನು ಗೆಲ್ಲಿಸಿ ಎಲ್ಲರನ್ನು ಚಕಿತಗೊಳಿಸಿದ್ದರು.



ಈ ಚುನಾವಣೆಯ ಫಲಿತಾಂಶ ಒಂದು ರೀತಿಯಲ್ಲಿ ಅಂಬಿ ಪಾಲಿಗೆ 'ಪ್ರಥಮ ಚುಂಬನ ದಂತ ಭಗ್ನ' ಎಂಬಂತಾಯಿತು. ಈ ಸೋಲಿನ ಆಘಾತದಿಂದ ಹೊರಬರಲಾಗದ ಅಂಬರೀಶ್ "ರಾಜಕೀಯ ನನ್ನಂಥವರಿಗಲ್ಲ, ಇದರಿಂದ ನಾನು ದೂರವಿದ್ದರೇ ವಾಸಿ'' ಎಂದು ತಮ್ಮ ಸ್ನೇಹಿತರ ಮುಂದೆ ನೋವನ್ನು ತೋಡಿಕೊಂಡಿದ್ದುಂಟು.

ಮಂಡ್ಯದಿಂದ ಅಂಬಿ ಗೆಲುವು

ಅಂಬಿಗೆ ಬೇಡ ಅನ್ನಿಸಿದ್ದರೂ ದೇವೇಗೌಡರು ಅವರನ್ನು ಬಿಡಲಿಲ್ಲ. ರಾಮನಗರದಿಂದ ವಿಧಾನಸಭೆಗೆ ಗೆಲ್ಲಲಾಗದಿದ್ದ ಅಂಬಿಗೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮಂಡ್ಯದ ಟಿಕೆಟ್ ಕೊಟ್ಟರು. ಮಾತ್ರವಲ್ಲ, ಅಲ್ಲಿಯತನಕ ಕಾಂಗ್ರೆಸ್‌ನ ಭದ್ರಕೋಟೆಯಂತಿದ್ದ ಮಂಡ್ಯದಿಂದ ಪ್ರಥಮ ಬಾರಿಗೆ ಜನತಾ ಪಕ್ಷದ ಅಂಬಿ ಗೆಲ್ಲುವಂತೆ ನೋಡಿಕೊಂಡರು. ಅದೂ ಮಾದೇಗೌಡರಂತಹ ಹಿರಿಯ ರಾಜಕಾರಣಿಯನ್ನು ಸೋಲಿಸಿದ್ದರಿಂದ ಅಂಬಿಗೆ ರಾಜಕೀಯದಲ್ಲೂ 'ಸ್ಟಾರ್ ವ್ಯಾಲ್ಯೂ' ಬಂತು.

ಆದರೆ ಕಾಲಕ್ರಮೇಣ ಜನತಾ ದಳದಲ್ಲಿ ಅಪ್ಪ ಮಕ್ಕಳ ಸರ್ವಾಧಿಕಾರ ಹೆಚ್ಚುತ್ತಾ ಹೋಗಿದ್ದರಿಂದ ಅಂಬಿಗೆ ಲೋಕಸಭಾ ಸದಸ್ಯನಾಗಿ ಮೆರೆಯಲು ಸಾಧ್ಯವಾಗಲಿಲ್ಲ. ಸಿನಿಮಾ ರಂಗದಲ್ಲಿ ನಾಯಕ ನಟನಾಗಿ ಮೆರೆಯುತ್ತಿದ್ದ ಅಂಬಿಗೆ ರಾಜಕಾರಣದಲ್ಲಿ ಪೋಷಕ ನಟನ ಪಾತ್ರವನ್ನು ನಿಭಾಯಿಸುವುದು ಸಹಿಸಲಾಗಲಿಲ್ಲ. ಆಗ ದೇವೇಗೌಡ ಮತ್ತು ಜನತಾ ದಳಕ್ಕೆ ಅವರು ಖಳನಾಯಕನಾಗಲು ಹೊರಟರು.

ಆಗ ಅವರ ನೆರವಿಗೆ ಬಂದದ್ದು ಅವರ ಮತ್ತೊಬ್ಬ ಪರಮಾಪ್ತ ರಾಜಕೀಯ ಗೆಳೆಯ ಕಂ ಸಿನಿಮಾ ನಿರ್ಮಾಪಕ ಸ್ಲಂ ರಮೇಶ್. ಆ ಕಾಲಘಟ್ಟದಲ್ಲಿ ಪಿ.ವಿ. ನರಸಿಂಹರಾವ್ ಪ್ರಧಾನಿಯಾಗಿದ್ದರು. ನರಸಿಂಹರಾವ್ ಬ್ರಾಹ್ಮಣರಾಗಿದ್ದರಿಂದ ಸ್ಲಂ ರಮೇಶ್‌ನಂತಹ ಜನಿವಾರಿಗೆ ಪ್ರಧಾನಿಗಳೊಂದಿಗೆ ಸುಲಭವಾಗಿ ಸಂದರ್ಶನಗಳು ಸಿಗುತ್ತಿದ್ದವು. ಹೀಗೆ ಕಾಂಗ್ರೆಸ್ ಬಾಗಿಲು ಅಂಬಿಗೆ ತೆರೆದುಕೊಂಡು ನರಸಿಂಹರಾವ್ ಅಂಬಿಗೆ ಹಾರ ಹಾಕಿ ಕಾಂಗ್ರೆಸ್‌ಗೆ ಸೇರಿಸಿಕೊಂಡರು.

ಅನಂತರ ಅಂಬಿ ಎರಡು ಬಾರಿ ಮಂಡ್ಯದಿಂದ ಕಾಂಗ್ರೆಸ್ ಸಂಸದರಾಗಿ ಗೆದ್ದದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಆ ಗೆಲುವುಗಳಿಗೆ ಕಾರಣ ಅಂಬಿಯ ವೈಯಕ್ತಿಕ ಚರಿಸ್ಮಾ, ಕಾಂಗ್ರೆಸ್ ಪಕ್ಷದ ಗಟ್ಟಿತನ ಮತ್ತು 'ಮಂಡ್ಯದ ಗಂಡು' ಅಂಬಿ ಬಗ್ಗೆ ಅಲ್ಲಿನ ಜನರ ಪ್ರೀತಿ. ಈ ಮಧ್ಯೆ ಪ್ರಧಾನಿ ಮನಮೋಹನ್ ಸಿಂಗ್ ಅವರು ಅಂಬಿಗೆ ಪ್ರತಿಷ್ಠೆಯ ವಾರ್ತಾ ಮತ್ತು ಪ್ರಸಾರ ಇಲಾಖೆಯ ರಾಜ್ಯ ಸಚಿವ ಸ್ಥಾನವನ್ನು ಕೊಡುವ ಮೂಲಕ ಮಂಡ್ಯದ ಅಂಬಿ ಅಭಿಮಾನಿಗಳ ಬಹುದಿನಗಳ ಕನಸನ್ನು ಈಡೇರಿಸಿದರು.

ಹಿಂದೊಮ್ಮೆ ನೆಹರು, ಇಂದಿರಾ ಗಾಂಧಿ ಮೊದಲಾದವರು ನಿರ್ವಹಿಸಿದ್ದ ವಾರ್ತಾ ಇಲಾಖೆಯ ಮಂತ್ರಿ ಸ್ಥಾನ ಅಂಬಿಗೆ ದೊರಕಿದ್ದನ್ನು ನೋಡಿ ತಮ್ಮ ಮಂಡ್ಯದ ಗಂಡು ಕೂಡ ಮುಂಬರುವ ದಿನಗಳಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಮೆರೆಯಬಹುದು ಎಂದು ಲೆಕ್ಕ ಹಾಕಿದ ಮಂಡ್ಯದ ಜನ ಸಂತೋಷದಿಂದ ಕುಣಿದು ಕುಪ್ಪಳಿಸಿ ಆನಂದಿಸಿದ್ದರು.

ಆದರೆ ಈ ಅಂಬಿ ಮಹಾಶಯ ಮಾಡಿದ್ದೇನು ಗೊತ್ತೆ? ಮಂತ್ರಿಯಾಗಿ ತನ್ನ ಸ್ಥಾನದಲ್ಲಿ ಒಂದು ದಿನವೂ ಕುಳಿತುಕೊಳ್ಳಲೇ ಇಲ್ಲ. ತಮಗೆ ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸಲು ಒಂದು ಕೊಠಡಿಯನ್ನು ಪಡೆದುಕೊಳ್ಳಲೂ ಅವರಿಂದ ಸಾಧ್ಯವಾಗಲಿಲ್ಲ. ಹೀಗಾಗಿ ಮಂತ್ರಿಯಾಗಿ ಒಂದೇ ಒಂದು ಕಡತವನ್ನು ವಿಲೇವಾರಿ ಮಾಡಲಾಗದ, ಯಾವುದೇ ಫೈಲುಗಳಿಗೆ ಸಹಿಯನ್ನೂ ಮಾಡದ ಮೊದಲ ಮಂತ್ರಿ ಎಂಬ ಅಪಹಾಸ್ಯಕ್ಕೆ ಅಂಬಿ ತುತ್ತಾದರು. ಅಷ್ಟೇ ಯಾಕೆ, ಮಂತ್ರಿಯಾಗಿ ಸಂಸತ್‌ನಲ್ಲಿ ಒಂದೇ ಒಂದು ಉತ್ತರವನ್ನೂ ನೀಡುವ ಅವಕಾಶ ಇವರಿಗೆ ಸಿಗಲೇ ಇಲ್ಲ. ಕೊನೆಗೆ ಈ ಎಲ್ಲ ಅವಮಾನಗಳನ್ನು ನುಂಗಲಾರದ ಸ್ಥಿತಿ ತಲುಪಿದ ಅಂಬಿ ಕಾವೇರಿ ಗಲಾಟೆ ಸಂದರ್ಭವನ್ನೇ ನೆಪ ಮಾಡಿಕೊಂಡು ಪಕ್ಷದ ಹೈಕಮಾಂಡಿಗೆ ತಮ್ಮ ಮಂತ್ರಿಗಿರಿಗೆ ರಾಜೀನಾಮೆ ನೀಡಿದರು. ಆದರೆ ಹೈಕಮಾಂಡ್ ಅದನ್ನು ಸ್ವೀಕರಿಸಲೇ ಇಲ್ಲ. ಆ ಬಗ್ಗೆ ಅಂಬರೀಶ್ ಒತ್ತಾಯವನ್ನೂ ಮಾಡಲಿಲ್ಲ. ಬದಲಿಗೆ ಸಂಸತ್ತಿಗೆ ಹೋಗುವುದನ್ನೇ ಬಿಟ್ಟು ತಮ್ಮ ಗೆಳೆಯರೊಂದಿಗೆ ಬೆಂಗಳೂರಿನಲ್ಲೇ ಆರಾಮವಾಗಿ ಕಾಲಕಳೆಯತೊಡಗಿದರು.

ಅಂಬಿಯ ಈ ವರ್ತನೆಯಿಂದ ಸಹಜವಾಗಿ ಮಂಡ್ಯದ ಅಭಿಮಾನಿಗಳೆಲ್ಲ ಸಿಟ್ಟುಗೊಂಡರು. ಮಂಡ್ಯದ ರೈತರ ಜೀವನದಿಯಾಗಿರುವ ಕಾವೇರಿಗಾಗಿ ತಮ್ಮ ಜೀವದ ಹಂಗನ್ನು ತೊರೆದು ಉಗ್ರವಾದ ಹೋರಾಟದಲ್ಲಿ ತೊಡಗಿರುವಾಗ ಲೋಕಸಭಾ ಸದಸ್ಯನಾಗಿ, ಒಬ್ಬ ಒಕ್ಕಲಿಗನಾಗಿ ಅಂಬಿ ಸ್ಪಂದಿಸಲಿಲ್ಲ ಎಂದು ಅಸಮಾಧಾನಗೊಂಡರು. ಮುಂದಿನ ಬಾರಿ ಚುನಾವಣೆಯಲ್ಲಿ ಅಂಬಿಗೆ ಪಾಠ ಕಲಿಸಬೇಕೆಂದು ಶಪಥ ಮಾಡಿದರು.

▶▶▶12

ಕಾಂಗ್ರೆಸ್‌ಗೆ ನಿಷ್ಠೆ; ಚೆಡ್ಡಿಗಳಿಗೆ ವಿರೋಧ

ವಾಸ್ತವವಾಗಿ ಕಾಂಗ್ರೆಸ್ ಬಗ್ಗೆ ಅಂಬಿಗೆ ಅಂತಹ ಸಿಟ್ಟೇನೂ ಇಲ್ಲ. ಹಾಗೆಯೇ ಕಾಂಗ್ರೆಸ್ ಹೈಕಮಾಂಡಿಗೂ ಅಂಬಿ ಬಗ್ಗೆ ಕೋಪವಿಲ್ಲ. ಹೀಗಾಗಿ ಅಂಬಿ ಯಾವುದೇ ಕಾರಣಕ್ಕೂ ಪಕ್ಷ ತೊರೆದು ಹೋಗುವಂತಹ ಅವಕಾಶ ಮಾಡಿಕೊಡಬಾರದು ಎಂದು ಕಾಂಗ್ರೆಸ್ ಹೈಕಮಾಂಡ್ ರಾಜ್ಯ ಘಟಕದ ಅಧ್ಯಕ್ಷ ದೇಶಪಾಂಡೆಗೆ ಸೂಚನೆ ನೀಡಿದೆ. ಇದಕ್ಕೆ ಮುಖ್ಯ ಕಾರಣ ಕಾಂಗ್ರೆಸ್‌ನ ಅತ್ಯಂತ ಸಂಕಷ್ಟದ ಸಮಯದಲ್ಲೂ ಅಂಬಿ ಪಕ್ಷದ ಪರವಾಗಿ ಬಂಡೆಗಲ್ಲಿನಂತೆ ನಿಂತಿದ್ದು.

ಎರಡನೆ ಬಾರಿ ಪ್ರಧಾನಮಂತ್ರಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ 1998ರಲ್ಲಿ ಜಯಲಲಿತಾರ ಎಐಎಡಿಎಂಕೆ ತನ್ನ ಬೆಂಬಲವನ್ನು ವಾಪಸ್ಸು ಪಡೆಯಿತು. ಆಗ ಸಂಸತ್ತಿಯಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲಾಗಿತ್ತು. ಆಗ ಪ್ರತಿ ವೋಟೂ ಅತಿ ಅಮೂಲ್ಯವಾಗಿದ್ದು ಅಂಬಿ ಕಾಂಗ್ರೆಸ್‌ಗೆ ಕೈಕೊಟ್ಟು ಬಿಜೆಪಿ ನೇತೃತ್ವದ ಸರ್ಕಾರವನ್ನು ಬೆಂಬಲಿಸುವಂತೆ ಅವರ ಮನಸ್ಸನ್ನು ಒಲೈಸುವ ಪ್ರಯತ್ನ ನಡೆದಿತ್ತು.

ಹಲವರ ಪ್ರಕಾರ ಆಗ ಈ ಕಾರ್ಯದ ಮಧ್ಯಸ್ಥಿಕೆಯನ್ನು ವಹಿಸಿಕೊಂಡದ್ದು ತಮಿಳುನಾಡಿನ ಸೂಪರ್ ಸ್ಟಾರ್ ಮತ್ತು ಅಂಬಿಯ ಕ್ಲೋಸ್ ಫ್ರೆಂಡ್ ರಜನೀಕಾಂತ್. ಆಗ ನೂರಾರು ಆಮಿಷಗಳನ್ನು ಒಡ್ಡಲಾಗಿತ್ತಾದರೂ ಅಂಬಿ ಮಾತ್ರ ಕಾಂಗ್ರೆಸ್ ಪರವಾಗಿಯೇ ನಿಂತರು. ಆಗ ವಾಜಪೇಯಿ ನೇತೃತ್ವದ ಸರ್ಕಾರ ಒಂದು ಮತದ ಅಂತರದಲ್ಲಿ ಸೋತಿದ್ದನ್ನು ಯಾರೂ ಮರೆತಿಲ್ಲ.

ಅದೇ ರೀತಿ ಅಮೆರಿಕದೊಂದಿಗಿನ ಅಣು ಒಪ್ಪಂದಕ್ಕೆ ಸಂಬಂಧಪಟ್ಟಂತೆ ಮನಮೋಹನ್ ಸಿಂಗ್ ಅವರ ಯುಪಿಎ ಸರ್ಕಾರ ಕೂಡ ವಿಶ್ವಾಸ ಮತವನ್ನು ಯಾಚಿಸಿದಾಗಲೂ ಮತ್ತೆ ಅಂಬಿಯನ್ನು ಬಿಜೆಪಿ ಪಕ್ಷದತ್ತ ಸೆಳೆಯಲು ಹಲವಾರು ಪ್ರಯತ್ನಗಳು ನಡೆದಿದ್ದವು. ಅಷ್ಟೊತ್ತಿಗಾಗಲೇ ಅಂಬಿ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರೂ, ಸಂಸತ್ತಿನ ಕಲಾಪಗಳಲ್ಲಿ ಭಾಗವಹಿಸದಿದ್ದರೂ ಅವರು ತನ್ನ ಪಕ್ಷನಿಷ್ಠೆಯನ್ನು ಬದಲಾಯಿಸದೆ ವಿರೋಧ ಪಕ್ಷದವರನ್ನು ದಂಗುಪಡಿಸಿದ್ದರು.

ಅಷ್ಟೇ ಅಲ್ಲ, ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೂ ಅಂಬಿಗೆ ಬಿಜೆಪಿಯ ಚೆಡ್ಡಿ ತೊಡಿಸಲು ಮಂತ್ರಿ ಅಶೋಕ್ ಮತ್ತು ಇತರೆ ಚೆಡ್ಡಿ ಒಕ್ಕಲಿಗರು ಯತ್ನಿಸಿದ್ದರು. ಆಗಲೂ ಅಂಬಿ ತಮ್ಮ ಮಂಡ್ಯದ ಗಂಡಿನ ಶೈಲಿಯಲ್ಲಿ "ಹೋಗ್ರಲೋ, ನನಗೆ ನಿಮ್ಮ ದೊಗಲೆ ಚೆಡ್ಡಿ ಬೇಕಿಲ್ಲ'' ಎಂದು ಒದ್ದೋಡಿಸಿದ್ದರು. ■

...ವಮೊಗ್ಗ ಹರಾಜ್

...ತಿ ಬೂತ್‌ಗೆ 2 ಲಕ್ಷ!

...ನಾವಣೆ ವೆಚ್ಚ 100 ಕೋಟಿ!



ಮುಖ್ಯಮಂತ್ರಿ ಯಡ್ಡಿಯು ತವರು ಜಿಲ್ಲೆ ಶಿವಮೊಗ್ಗದಲ್ಲಿ ಬಿಜೆಪಿಗೆ ನಾಯಕರು ಬೇಕಾಗಿದ್ದಾರೆ! ಹಾಗಂತ ಯಡ್ಡಿಯೇ ಟಾಂಟಾಂ ಹೊಡೆದುಕೊಂಡು ಓಡಾಡುತ್ತಿದ್ದು, ಒಂದಿಷ್ಟು ಹೆಸರು ಮಾಡಿರುವ ಪುಡಿ ನಾಯಕರಿಗೆ, ಪ್ರಮುಖ ಕಾರ್ಯಕರ್ತರಿಗೆ ಫೋನ್ ಮಾಡಿ 'ಬನ್ನಿ ಪಕ್ಷ ಸೇರಿ, ನಿಮಗೆ ಸೂಕ್ತ ಅಧಿಕಾರ ನೀಡಲಾಗುವುದು' ಎಂದು ಭರವಸೆ ನೀಡುತ್ತಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲೀಗ ಯಡ್ಡಿ ಸೇರಿದಂತೆ ಮೂವರು ಸಚಿವರಿದ್ದಾರೆ. ಜಿಲ್ಲೆಯ ಭದ್ರಾವತಿ ಮತ್ತು ತೀರ್ಥಹಳ್ಳಿ ಕ್ಷೇತ್ರಗಳನ್ನು ಬಿಟ್ಟರೆ ಮತ್ತೆಲ್ಲಾ ಕ್ಷೇತ್ರಗಳಲ್ಲಿಯೂ ಬಿಜೆಪಿಯೇ ಗೆದ್ದಿದೆ. ಏನಿಲ್ಲವೆಂದರೂ ಜಿಲ್ಲಾ ಬಿಜೆಪಿಯ ಒಂದು ಡಜನ್ ಪ್ರಮುಖ ನಾಯಕರು ರಾಜ್ಯಮಟ್ಟದಲ್ಲಿ ಮಿಂಚುತ್ತಿದ್ದಾರೆ. ಆದರೂ ಬಿಜೆಪಿ ಈಗ 'ನಾಯಕರು, ಕಾರ್ಯಕರ್ತರು ಬೇಕಾಗಿದ್ದಾರೆ' ಆಂದೋಲನ ಕೈಗೊಂಡಿದೆ. ಇದೇಕೆ?

ಉತ್ತರ ಮೂಲ ಬಿಜೆಪಿಯವರಿಗೆ ಗೊತ್ತಿದೆ!

ಪಕ್ಷದ ಜಿಲ್ಲಾ ಘಟಕದ, ರಾಜ್ಯ ನಾಯಕರ ವಿರೋಧದ ನಡುವೆಯೂ ಯಡ್ಡಿ ಹಠಕ್ಕೆ ಬಿದ್ದು ತಮ್ಮ ಮಗ ರಾಘವೇಂದ್ರನನ್ನು ಅಭ್ಯರ್ಥಿಯಾಗಿ ಮಾಡಿದ್ದಾರೆ. ಇದರಿಂದ ರೊಚ್ಚಿಗೆದ್ದಿರುವ ಜಿಲ್ಲೆಯ ಮೂಲ ಬಿಜೆಪಿ ನಾಯಕರು ಮೇಲ್ನೋಟಕ್ಕೆ 'ರಾಘವೇಂದ್ರ ಭಜನೆ' ಮಾಡುತ್ತಿದ್ದಾರಾದರೂ, ಪುತ್ರವ್ಯಾಮೋಹ ತೋರಿದ ಯಡ್ಡಿಗೆ ಚುನಾವಣೆಯಲ್ಲಿ 'ಸರಿಯಾಗಿ ಬುದ್ಧಿ' ಕಲಿಸಲು ನಿರ್ಧರಿಸಿದ್ದಾರೆ. ಇದನ್ನರಿತ ಯಡ್ಡಿ, ಜಿಲ್ಲೆಯಲ್ಲಿ ತಮ್ಮ ಆಣತಿಯಂತೆಯೇ ನಡೆಯುವ ಬಿಜೆಪಿ ಕಟ್ಟಲು ನಿರ್ಧರಿಸಿದ್ದಾರೆ. ಹೀಗಾಗಿ ಈಗ ನಾಯಕರ ಹುಡುಕಾಟದಲ್ಲಿ ತೊಡಗಿದ್ದಾರೆ. ಅದರ ಅಂಗವಾಗಿಯೇ ಕರ್ನಾಟಕದ ಅತೀ ದೊಡ್ಡ ಚುನಾವಣಾ ಹರಾಜು ಕಟ್ಟೆ ಈಗ ಶಿವಮೊಗ್ಗದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಮುಖ್ಯಮಂತ್ರಿ ಯಡಿಯೂರಪ್ಪನೆ ಇದರ ಮುಖ್ಯ ದಲ್ಲಾಳಿ!!

ಶಿವಮೊಗ್ಗ ಲೋಕಸಭಾ ಕ್ಷೇತ್ರದ ಉದ್ದಗಲಕ್ಕೂ ಈಗ ಪಕ್ಷಾಂತರದ ಭರಾಟೆ ರಭಸದಿಂದ ನಡೆಯುತ್ತಿದೆ. ಕಾಂಗ್ರೆಸ್, ಜೆಡಿಎಸ್, ಸಮಾಜವಾದಿ ಪಾರ್ಟಿಯ ಹಿರಿ-ಕಿರಿ ನಾಯಕರುಗಳಿಂದ ಆರಂಭಿಸಿ ಲೋಕಲ್ ಪುಢಾರಿಗಳ ತನಕ ಯಾರನ್ನೂ ಬಿಡದೆ ಬಿಜೆಪಿಗಳು ಹೋಲ್‌ಸೇಲಾಗಿ ಖರೀದಿಸುತ್ತಿದ್ದಾರೆ.

ಅವರವರ ಯೋಗ್ಯತಾನುಸಾರ ದುಡ್ಡುಕೊಟ್ಟು ನಡೆಸುತ್ತಿರುವ ಖರೀದಿ ರಾಜಕೀಯ ಇದು. ಇಷ್ಟು ಸಾಲದೆಂಬಂತೆ ಪ್ರತಿ ಬೂತ್‌ಗೂ ಇಂತಿಷ್ಟೆಂದು ಹಣ ಕೊಡುವುದಾಗಿ ಬಿಜೆಪಿಗಳ ಪ್ರಚಾರ ನಡೆಸುತ್ತಿದ್ದಾರೆ.

ಆ ಮೊತ್ತ 2 ಲಕ್ಷ ರೂಪಾಯಿಗಳು!

ಶಿವಮೊಗ್ಗ ಕ್ಷೇತ್ರದ 13.98 ಲಕ್ಷ ಮತದಾರರಿಗೆ ಈಗ ಒಟ್ಟು 1650 ಬೂತ್‌ಗಳಿವೆ. ಪ್ರತಿ ಬೂತ್‌ಗೆ ಎರಡು ಲಕ್ಷವಂತೆ ಎನ್ನುವ ಮಾತು ನಿಜವೇ ಆದರೆ ಆ ಬಾಬ್ತಿನಲ್ಲೇ ಬಿಜೆಪಿಗಳು 33 ಕೋಟಿ ರೂಪಾಯಿ ಖರ್ಚು ಮಾಡಲು ತಯಾರು ಎಂದಾಯಿತು. ಆದರೆ ಎಲೆಕ್ಷನ್ ಖರ್ಚು ಅಂದರೆ ಇಷ್ಟು ಮಾತ್ರ ಅಲ್ಲವಲ್ಲ. ಒಂದು ತಿಂಗಳ ಪ್ರಚಾರ, ಸಾವಿರಾರು ಕಾರು-ಜೀಪು-ಬೈಕುಗಳು ಪೆಟ್ರೋಲ್- ಬಾಟ, ಕಾರ್ಯಕರ್ತರಿಗೆ ಗುಂಡು-ತುಂಡು, ಕರಪತ್ರ, ಬ್ಯಾನರ್, ಮತದಾರರಿಗೆ ಸೀರೆ, ಹಣ, ಗುಂಡು..... ಹೀಗೆ ಒಂದಾ ಎರಡಾ..? ಇವೆಲ್ಲಾ ಲೆಕ್ಕ ಹಾಕಿದರೆ ಈ ಸಾರಿ ಶಿವಮೊಗ್ಗ ಒಂದರಲ್ಲೇ ಮುಖ್ಯಮಂತ್ರಿ ಯಡಿಯೂರಪ್ಪ ನೂರು ಕೋಟಿ ರೂಪಾಯಿ ಚೆಲ್ಲಲು ಹೊರಟಂತೆ ಕಾಣುತ್ತಿದೆ.

ಯಡ್ಡಿ ಇಷ್ಟೆಲ್ಲಾ ಮಾಡುತ್ತಿರುವುದು ಪಕ್ಷಕ್ಕಾಗಿ ಅಲ್ಲ, ಕೇವಲ ತನ್ನ ಸುಪುತ್ರನ ರಾಜಕೀಯ ಭವಿಷ್ಯಕ್ಕಾಗಿ..

ಬಿ.ವೈ. ರಾಘವೇಂದ್ರನೆಂಬ ಈ ಆಸಾಮಿ ತಾನೇ ಖುದ್ದಾಗಿ ಊರೂರು ಅಲೆಯುತ್ತಾ ಕೋತಿಗಳನ್ನು ಹಿಡಿದು ಬೋನಿಗೆ ತುಂಬುವಂತೆ ಕೈಗೆ ಸಿಕ್ಕ ಲೋಕಲ್ ಪುಢಾರಿಗಳನ್ನು ಹಿಡಿದು ಬಿಜೆಪಿ ಬೋನಿಗೆ ತುಂಬುತ್ತಿದ್ದಾನೆ.

ಈ ಒಳರಾಜಕೀಯವನ್ನು ಮುಚ್ಚಿಟ್ಟು, ಬಿಜೆಪಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯವನ್ನು ಮೆಚ್ಚಿ ಬೇರೆ ಬೇರೆ ಪಕ್ಷಗಳ ನಾಯಕರು ಬಿಜೆಪಿ ಸೇರುತ್ತಿದ್ದಾರೆ ಎಂದು ಯಡ್ಡಿಯ ಬಂಟರು ಹೇಳಿಕೊಂಡು ಓಡಾಡುತ್ತಿದ್ದಾರೆ. ಆದರೆ ಸತ್ಯ ಏನೆಂದು ಮೂಲ ಬಿಜೆಪಿಯವರಿಗೆ ಗೊತ್ತು, ಆದರೆ ಪಾಪ ಅವರು ಬಾಯಿಬಿಡುವಂತಿಲ್ಲ, ಮೊನ್ನೆಯವರೆಗೂ ತಮ್ಮನ್ನು ಬೈಯುತ್ತಾ, ಟೀಕಿಸುತ್ತಾ ಓಡಾಡಿಕೊಂಡವರನ್ನೆಲ್ಲಾ ಹಾಗೂ ತಾವು ಭ್ರಷ್ಟರು, ದುಷ್ಟರು ಎಂದು ಬೈದವರನ್ನೆಲ್ಲಾ ಈಗ ಯಡ್ಡಿ ಮೀನು ಹಿಡಿದಂತೆ ಗಾಳ ಹಾಕಿ ಹಿಡಿದು, ಪಕ್ಷಕ್ಕೆ ಸೇರಿಸಿಕೊಳ್ಳುತ್ತಿರುವುದನ್ನು ನೋಡಿ ಅವರೆಲ್ಲಾ ಬೆಚ್ಚಿ ಬಿದ್ದಿದ್ದಾರೆ. ಮುಂದೆ ಪಕ್ಷದಲ್ಲಿ ನಾವೇ 'ತೃತೀಯರಾಗುತ್ತೇವೆ' ಎಂದು ಈಗಲೇ ಲೆಕ್ಕಹಾಕಿ ಮನೆ ಸೇರುತ್ತಿದ್ದಾರೆ.

ಮೂಲ ಬಿಜೆಪಿ - ಯಡ್ಡಿ ಬಿಜೆಪಿ

ಶಿವಮೊಗ್ಗ ಬಿಜೆಪಿ ಈಗ ಮೂಲ ಬಿಜೆಪಿ, ಯಡ್ಡಿ ಬಿಜೆಪಿ ಎಂದು ಸ್ಪಷ್ಟವಾಗಿ ಎರಡು ಭಾಗವಾಗಿದೆ. ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿಯೇ ಸಾಗರದಲ್ಲಿ ಈ ಇಬ್ಭಾಗದ ಸೂಚನೆ ಬಹಿರಂಗವಾಗಿ ಕಾಣಿಸಿಕೊಂಡಿತ್ತು, ಆದರೆ ಅಧಿಕಾರ ಹಿಡಿಯುವ ಆಸೆಯಿಂದ ಎಲ್ಲರೂ ಸುಮ್ಮನಿದ್ದರು. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದ ಯಡ್ಡಿ ತಮ್ಮ ಬಣವನ್ನು ಪ್ರತಿ ಕ್ಷಣವೂ ಬಲಪಡಿಸುತ್ತಾ ಬಂದಿದ್ದಾರೆ. ಹೀಗಾಗಿ ಶಿವಮೊಗ್ಗದಲ್ಲಿ ಯಡ್ಡಿಯ ಬಿಜೆಪಿ ಬಣ ಹೇಳಿದ್ದೇ ಈಗ 'ವೇದ ವಾಕ್ಯ'. ಇದಕ್ಕೆ ತಾಜಾ ಉದಾಹರಣೆ ಮೂಲ ಬಿಜೆಪಿ ಎಷ್ಟೇ ವಿರೋಧಿಸಿದ್ದರೂ, ರಾಘವೇಂದ್ರ ಪಕ್ಷದ ಅಭ್ಯರ್ಥಿಯಾಗಿದ್ದು.

ಆಣೆ ಹೋಯ್ತು ಹಣ ಬಂತು

"ನನ್ನ ಮಾತು ನಂಬಿ, ದೇವರಾಣೆಗೂ ನನ್ನ ಮಗನಿಗೆ ಬಿಜೆಪಿ ಟಿಕೆಟ್ ಕೊಡಲ್ಲ" ಎಂದು ಇಡೀ ಕರ್ನಾಟಕಕ್ಕೆ ಕೇಳಿಸುವಂತೆ ಆಣೆ-ಪ್ರಮಾಣ ಮಾಡಿದ್ದ ಯಡ್ಡಿ ಈಗ ತನ್ನ ಸುಪುತ್ರ ರಾಘವೇಂದ್ರನನ್ನು ಗೆಲ್ಲಿಸಲು ದಿನ ಬಿಟ್ಟು ದಿನ ಶಿವಮೊಗ್ಗಗೆ ಬಂದು ಹೋಗುತ್ತಿದ್ದಾರೆ. ತನ್ನ ಮಗನನ್ನು ಗೆಲ್ಲಿಸುವುದೇ ಪ್ರತಿಷ್ಠೆಯ ವಿಷಯವಾಗಿಸಿಕೊಂಡಿರುವ ಯಡ್ಡಿಗೆ ಒಳಗಿಂದೊಳಗೆ ಕೊಂಚ ಭಯವೂ ಇದ್ದಂತಿದೆ. ಅದು ಯಾಕೆಂದರೆ ಕಾಂಗ್ರೆಸ್‌ನಿಂದ ಬಂಗಾರಪ್ಪ ಸ್ಪರ್ಧಿಸಲಿ ಅಥವಾ ಕುಮಾರ್ ಬಂಗಾರಪ್ಪನವರೇ ನಿಲ್ಲಲಿ ರಾಘವೇಂದ್ರನಿಗೆ ಹೋರಾಟ ನಡೆಸದೇ ವಿಧಿಯಿಲ್ಲ. ಗೆಲುವು ಅಷ್ಟು ಸುಲಭವೂ ಅಲ್ಲ. ಹಾಗಾಗಿ ತನ್ನ ಪ್ರತಿಸ್ಪರ್ಧಿಯ ಬೆಂಬಲಿಗರ ನೆಟ್‌ವರ್ಕ್ ಮುರಿದು ಹಾಕಲು ಸ್ಥಳೀಯ ನಾಯಕರು ಕಾರ್ಯಕರ್ತರೇ ಸಿಗದಂತೆ ನೋಡಿಕೊಳ್ಳಲು ಶಿವಮೊಗ್ಗದ ಬಿಜೆಪಿಗಳು 'ಆಪರೇಷನ್ ಕಮಲ' ಮುಂದುವರೆಸುತ್ತಿದ್ದಾರೆ.



ಕಳೆದ ವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯೊಂದರಲ್ಲಿ ಯಡ್ಡಿ 'ಯಾವುದೇ ಪಾರ್ಟಿ ಕಾರ್ಯಕರ್ತರು ಸಿಕ್ಕರೂ ಬಿಡಬೇಡಿ ಬಿಜೆಪಿಗೆ ಎಳ್ಕೊಂಡು ಬನ್ನಿ' ಎಂದು ಹುರಿದುಂಬಿಸಿದ್ದರು. ಅದರರ್ಥ ಬೇರೇನೂ ಅಲ್ಲ, ಆಮಿಷ, ಹಣ, ಜಾತಿ, ಬೆದರಿಕೆ, ತಂತ್ರ... ಹೀಗೆ ಯಾವ ಮಾರ್ಗವಾದರೂ ಬಳಸಿ ಎಂದು.

ಶಿವಮೊಗ್ಗದ ಮಟ್ಟಿಗೆ ಈಗ ಬಿಜೆಪಿಗಳ ಅಟ್ಟಹಾಸ, ಹುಮ್ಮಸ್ಸು ಎದ್ದು ಕಾಣುತ್ತಿರುವುದೇನೋ ನಿಜ. ಅನ್ಯ ಪಕ್ಷಗಳಿಂದ ವಲಸೆ ಬರುತ್ತಿರುವವರ ಬಗೆಗಿನ ಮೀಡಿಯಾ ಪ್ರಚಾರವೇ ಅದಕ್ಕೆ ಕಾರಣ.

ರಾಘವೇಂದ್ರ ಅಭ್ಯರ್ಥಿ ಎಂದು ಘೋಷಣೆಯಾದ ಮೇಲೆ ಯಡ್ಡಿ ತಮ್ಮ ನಿವಾಸದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪ್ರಮುಖರ ಪಟ್ಟಿ ಹಿಡಿದುಕೊಂಡು ಕುಳಿತು ಒಬ್ಬರ ನಂತರ ಒಬ್ಬರಿಗೆ ಫೋನ್ ಮಾಡುತ್ತಿದ್ದಾರೆ. ಪಕ್ಷ ಸೇರಿ ಎಂದು ಗೋಗರೆಯುತ್ತಿದ್ದಾರೆ. ಯಡ್ಡಿಯ ಈ ರೀತಿಯ ಗಾಣಕ್ಕೆ ಬಿದ್ದ ಮೊದಲ ದೊಡ್ಡ ಲೀಡರ್ ಎಂದರೆ ಕಳೆದ ಒಂದು ದಶಕದಿಂದ ಶಿವಮೊಗ್ಗ ಡಿಸಿಸಿ ಬ್ಯಾಂಕನ್ನುತಮ್ಮ ಹತೋಟಿಯಲ್ಲಿಟ್ಟುಕೊಂಡಿರುವ ಆರ್.ಎಂ. ಮಂಜುನಾಥ ಗೌಡ ಎಂಬ 'ಮಾಜಿ' ಸಮಾಜವಾದಿ.

ಈ ಮಧ್ಯೆ ಒಕ್ಕಲಿಗ ಜಾತಿಗೆ ಸೇರಿರುವ ತೀರ್ಥಹಳ್ಳಿಯ ಆರಗ ಜ್ಞಾನೇಂದ್ರ ಪಕ್ಷದ ಮೆಟ್ಟಿಲುಗಳನ್ನು ಹತ್ತಲೂ ಯಡ್ಡಿ ಬಿಟ್ಟಿರಲಿಲ್ಲ, ಮಗನನ್ನು ಗೆಲ್ಲಿಸಲು ಹೊರಟ ಯಡ್ಡಿಗೆ ಜ್ಞಾನೇಂದ್ರರ ಸಿಟ್ಟು, ಅಭಿಪ್ರಾಯ ಏಕೆ ಬೇಕು ಹೇಳಿ. ಅದಕ್ಕೆ ಮುಂಜುನಾಥ ಗೌಡರನ್ನು ಪಕ್ಷಕ್ಕೆ ಸೇರಿಸಿಕೊಂಡು ಜಿಲ್ಲೆಯ ಪ್ರಮುಖ ಒಕ್ಕಲಿಗ ನಾಯಕ ಪಕ್ಷ ಸೇರಿದ್ದಾನೆ ಎಂದು ಬೀಗುತ್ತಿದ್ದಾರೆ.

ಸಮಾಜವಾದಿ ಮಂಜುನಾಥ ಗೌಡರು ಹಿಂದೊಮ್ಮೆ ಜೆ.ಎಚ್. ಪಟೇಲ ಜೊತೆಗಿದ್ದರು. ಆನಂತರ ಬಂಗಾರಪ್ಪನವರ ಬೆನ್ನಿಗೆ ನಿಂತಿದ್ದರು. ಆಮೇಲೆ ಕಾಗೋಡು ತಿಮ್ಮಪ್ಪ ತಮ್ಮ ನಾಯಕರು ಎಂದಿದ್ದರು. ಈಗ ಬ್ಯಾಂಕಿಗೆ ಸಂಬಂಧಿಸಿದಂತೆ ಕೆಲವು ಇಕ್ಕಟ್ಟುಗಳಿರುವ ಕಾರಣ ಬಿಜೆಪಿಗಳು ಅವರಿಗೆ ಒತ್ತಡ ಹೇರಿ ಯಡ್ಡಿ ಪಡಸಾಲೆಗೆ ಹೋಗಿ ನಿಲ್ಲುವಂತೆ ಮಾಡಿದ್ದಾರೆ ಎನ್ನಲಾಗಿದೆ.

ಇವರೊಂದಿಗೆ ಮುಖವಿಲ್ಲದ ಒಂದಿಷ್ಟು ಜಿ.ಪಂ.ಸದಸ್ಯರು, ಅಲ್ಪ ಸಂಖ್ಯಾತರ 'ಮುಖಂಡರು', ಒಕ್ಕಲಿಗ ಸಮಾಜದ ಸ್ವಯಂಘೋಷಿತ ನಾಯಕರು, ವಿವಿಧ ಪಕ್ಷಗಳ ಕಾರ್ಯಕರ್ತರು, ಸಂಘ-ಸಂಸ್ಥೆಗಳ ಸದಸ್ಯರು ಹೀಗೆ ಒಟ್ಟು 100ಕ್ಕೂ ಹೆಚ್ಚು ಪುಡಿ ರಾಜಕಾರಣಿಗಳು ಬಿಜೆಪಿ ಸೇರಿದ್ದಾರೆ. ಮುಖ್ಯಮಂತ್ರಿ ಯಡ್ಡಿ ತಾವೇ ನಿಂತು ಈ 'ಮಹಾನ್ ನಾಯಕರಿಗೆ' ಹಾರ ಹಾಕಿ ಪಕ್ಷಕ್ಕೆ ಬರಮಾಡಿಕೊಂಡು, ದೊಡ್ಡ ಮಟ್ಟದ ಪ್ರಚಾರ ನೀಡುತ್ತಿದ್ದಾರೆ. ತಮ್ಮ ಬಿಜೆಪಿ ಸೇರ್ಪಡೆಗೆ ಈ ರೀತಿಯ ಪ್ರಚಾರ ಸಿಕ್ಕಿರುವುದನ್ನು ನೋಡಿ ಈ ಪುಡುಗೋಸಿ ರಾಜಕಾರಣಿಗಳೆಲ್ಲ ಮೂರ್ಛೆ ಹೋಗದಿರುವುದೇ ದೊಡ್ಡ ವಿಷಯ ಎಂದು ಬಿಜೆಪಿ ಕಾರ್ಯಕರ್ತರು ಆಡಿಕೊಳ್ಳುತ್ತಿದ್ದಾರೆ. ಇವರಿಂದ ಪಕ್ಷಕ್ಕೆಷ್ಟು ಲಾಭವಾಗುತ್ತದೆಯೋ ಗೊತ್ತಿಲ್ಲ, ಪಕ್ಷದಿಂದ ಇವರಿಗಂತೂ ಲಾಭ ಖಂಡಿತ ಎಂದು ಮೂಲ ಬಿಜೆಪಿ ಮುಖಂಡರು ಹೊಟ್ಟೆ ಉರಿದುಕೊಳ್ಳುತ್ತಿದ್ದಾರೆ.

ಜೆಡಿಎಸ್‌ನ ಮಾಜಿ ಶಾಸಕ ಅಪ್ಪಾಜಿ ಗೌಡ (ಭದ್ರಾವತಿ) ಹಾಗೂ ಶಾರದಾ ಪೂರ್‍ಯನಾಯ್ಕ (ಶಿವಮೊಗ್ಗ ಗ್ರಾಮಾಂತರ) ರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಯಡ್ಡಿ ಹರಸಾಹಸ ಪಡುತ್ತಿದ್ದಾರೆ. ರೌಡಿಸಂನಿಂದಲೇ ಸದಾ ಸುದ್ದಿಯಲ್ಲಿರುವ ಅಪ್ಪಾಜಿ ಗೌಡ ಪಕ್ಷಕ್ಕೆ ಸೇರಿದರೆ ನೆಲೆಯೇ ಇಲ್ಲದ ಭದ್ರಾವತಿಯಲ್ಲಿ ಪಕ್ಷ ಬೇರು ಬಿಡಬಹುದು ಎಂಬ ಲೆಕ್ಕಾಚಾರ ಯಡ್ಡಿಯದು. ಆದರೆ ಅಪ್ಪಾಜಿ ಗೌಡ ಕಮಲದ 'ವಾಸನೆಗೆ' ಮರುಳಾಗುವ ಒಕ್ಕಲಿಗರೇನೂ ಅಲ್ಲ! ಹೀಗಾಗಿ ಯಡ್ಡಿ, ಈಶ್ವರಿ ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾಗಿವೆಯಂತೆ. ಇನ್ನು ಶಾರದಾ ಪೂರ್‍ಯನಾಯ್ಕ ಪಕ್ಷ ಸೇರಿದರೆ ಲಂಬಾಣಿ ಸಮುದಾಯ ರಾಘವೇಂದ್ರನನ್ನು ಬೆಂಬಲಿಸಲಿದೆ ಎಂಬ ಲೆಕ್ಕಾಚಾರ ಹಾಕಿರುವ ಯಡ್ಡಿ, ಅವರಿಗೆ ಇಲ್ಲದ ಆಸೆಗಳನ್ನು ತೋರಿಸುತ್ತಿದ್ದಾರೆ. ಗ್ರಾಮಾಂತರ ಕ್ಷೇತ್ರದ ಹಾಲಿ ಶಾಸಕ ಕುಮಾರಸ್ವಾಮಿ ಸುಳ್ಳುಜಾತಿ ಪ್ರಮಾಣ ಪತ್ರ ಸಲ್ಲಿಸಿದ ಪ್ರಕರಣ ನ್ಯಾಯಾಲಯದಲ್ಲಿದ್ದು, ಆತ ಶಾಸಕ ಸ್ಥಾನ ಕಳೆದುಕೊಳ್ಳುವುದು ಗ್ಯಾರಂಟಿ. ಆಗ ನಡೆಯುವ ಉಪಚುನಾವಣೆಯಲ್ಲಿ ಪಕ್ಷದ ಟಿಕೆಟನ್ನು ತಮಗೇ ಕೊಡುತ್ತೇವೆ, ಈಗ ಪಕ್ಷ ಸೇರಿ ರಾಘವೇಂದ್ರನ ಪರವಾಗಿ ಕೆಲಸ ಮಾಡಿ ಎಂದು ಶಾರದಾರ ಮನವೊಲಿಸುವ ಕಾರ್ಯದಲ್ಲಿ ಯಡ್ಡಿ ನಿರತರಾಗಿದ್ದಾರೆ.

ಜಿಲ್ಲೆಯಲ್ಲಿ ಒಡೆದ ಮನೆಯಂತಾಗಿರುವ ಕಾಂಗ್ರೆಸ್ ಪಕ್ಷದ ನಾಯಕರನ್ನು ಸೆಳೆದುಕೊಳ್ಳಲು ಯಡ್ಡಿ ಎಲ್ಲಿಲ್ಲದ ಸಾಹಸ ಪಡುತ್ತಿದ್ದಾರೆ. ಈ ಹಿಂದೆ ಜನತಾ ಪರಿವಾರದಲ್ಲಿದ್ದು, ನಂತರ ಕಾಂಗ್ರೆಸ್ ಸೇರಿ ಒಂದು ರೀತಿಯಲ್ಲಿ ಮೂಲೆ ಗುಂಪಾಗಿದ್ದ ಜಿ.ಪಂ. ಸದಸ್ಯ ಜಯಂತ್‌ಗೆ ಯಡಿಯೂರಪ್ಪ ಕಮಲದ ಕೆರೆಯ ಕೆಸರೆರಚಿದ್ದಾರೆ ಎಂಬ ಸುದ್ದಿ ಇದೆ. ಬಂಗಾರಪ್ಪ ಸೆಗಣಿ ಸ್ವಾಮೀಜಿ ಬಗ್ಗೆ ಆಡಿದ ಮಾತು ಈ ಮಾಜಿ ಸಮಾಜವಾದಿಗೆ ಈಗ ಒಗ್ಗಿಲ್ಲವಂತೆ.

ಯುವ ಕಾಂಗ್ರೆಸ್‌ನ ರವಿಕುಮಾರ್, ಶಿವಮೊಗ್ಗ ನಗರ ಯುವ ಕಾಂಗ್ರೆಸ್‌ನ ಬೆಳ್ಳಕೆರೆ ಸಂತೋಷ್, ಕಾಂಗ್ರೆಸ್‌ನ ನಗರಸಭಾ ಸದಸ್ಯರು, ಜಿ.ಪಂ. ಸದಸ್ಯರು ಹೀಗೆ ಯಡ್ಡಿ ಉದ್ದನೆಯ ಪಟ್ಟಿ ಸಿದ್ಧಮಾಡಿಟ್ಟುಕೊಂಡು ಎಲ್ಲರನ್ನೂ ಹಿಡಿದು ಪಕ್ಷಕ್ಕೆ ತನ್ನಿ ಎಂದು ಆದೇಶಿಸಿದ್ದಾರೆ. ರವಿಕುಮಾರ್ ಮತ್ತಿತರರು ತಮಗೆ ಆಹ್ವಾನ ನೀಡಲು ಬಂದ ಚೆಡ್ಡಿಗಳಿಗೆ ಉಗಿದು ಉಪ್ಪಿನಕಾಯಿ ಹಾಕಿದ್ದು, ಮತ್ತೆ ಕೆಲವರು ಜೊಲ್ಲು ಸುರಿಸುತ್ತಿರುವ ಸುದ್ದಿ ಇದೆ. ಕ್ಷೇತ್ರದಲ್ಲಿನ ಪ್ರತಿ ಚುನಾವಣಾ ಬೂತ್ ಖರ್ಚಿಗೆ ತಲಾ 2 ಲಕ್ಷ ಹಂಚುವುದಾಗಿ ಯಡ್ಡಿ ಗುಂಪು ಆಮಿಷ ಒಡ್ಡುತ್ತಿರುವುದೂ ಇದರ ಹಿನ್ನೆಲೆಯಲ್ಲಿದೆ.

ಒಟ್ಟಾರೆ ಈಗ ಶಿವಮೊಗ್ಗ ಬಿಜೆಪಿ ವೇದಿಕೆ ನಾಯಕರುಗಳಿಂದ ತುಂಬಿ ತುಳುಕುತ್ತಿದೆ. ಇದರ ಭಾರಕ್ಕೆ ಕುಸಿದು ಬೀಳುವ ಲಕ್ಷಣಗಳೇ ಜಾಸ್ತಿ ಇದೆ. ಇದನ್ನೇ ಮೂಲ ಬಿಜೆಪಿಯವರೂ ಬಯಸುತ್ತಿದ್ದಾರೆ.

● ವರದಿಗಾರ

...ಕ್ಷಾಂತರಿಗಳ ಖರೀದಿ

...ಗಿನ ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿನ 8 ...ಕ್ಷೇತ್ರಗಳ ಪೈಕಿ ಆರರಲ್ಲಿ ಬಿಜೆಪಿ ಶಾಸಕರಿದ್ದಾರೆ. ... ಮತ್ತು ತೀರ್ಥಹಳ್ಳಿಯಲ್ಲಿ ಕಾಂಗ್ರೆಸ್ ಇದೆ. ...ಮತದಾರರ ಸಂಖ್ಯೆ 13.98 ಲಕ್ಷ. ಬಿಜೆಪಿ ... ಆರು ಶಾಸಕರಿದ್ದಾಗಲೂ ಯಡಿಯೂರಪ್ಪ ...ಂಜೀಗಳನ್ನು ಬಿಡದೆ ಬಿಜೆಪಿಗೆ ಎಳೆತರುತ್ತಿರು...ಕಾರಣ ಏನೆಂದರೆ 2005 ರ ಲೋಕಸಭಾ ...ಣಾ ಫಲಿತಾಂಶ.

... ಬಿಜೆಪಿ ತ್ಯಜಿಸಿ ಸಮಾಜವಾದಿ ಪಾರ್ಟಿಯಿಂದ ... ಬಂಗಾರಪ್ಪ 2.69 ಲಕ್ಷ (ಶೇ. 36) ಓಟ್ ...ಗೆದ್ದಿದ್ದರು. ಕಾಂಗ್ರೆಸ್‌ನಿಂದ ಆಯನೂರು ...ನಾಥ್‌ಗೆ 2.52 ಲಕ್ಷ (33%) ದಕ್ಕಿದರೆ ... ಭಾನುಪ್ರಕಾಶ್‌ಗೆ ಸಿಕ್ಕಿದ್ದಿದ್ದು ಕೇವಲ 1.45 ...9.89%) ಓಟ್‌ಗಳು ಮಾತ್ರ. ಅವತ್ತಿಗೆ ...ಪ್ಪ ಸಮಾಜವಾದಿ ಪಾರ್ಟಿಯಿಂದ ಗಳಿಸಿದ್ದ ... ಮುಕ್ಕಾಲು ಲಕ್ಷ ಓಟುಗಳು ಅವರ ಸ್ವಂತ ...ು ಭಾವಿಸಿದರೆ ಮತ್ತು ಕಾಂಗ್ರೆಸ್‌ನ ಎರಡೂವರೆ ...ಗಳೂ ಸೇರಿದರೆ ಈಗಲೂ ಬಂಗಾರಪ್ಪನವರಿಗೆ ... ಜಾಸ್ತಿ ಇದ್ದಂತಿದೆ. ಆದರೂ ಕಳೆದ ನಾಲ್ಕು ...ಲ್ಲಿ ಶಿವಮೊಗ್ಗ ಜಿಲ್ಲಾ ರಾಜಕೀಯದಲ್ಲಿ ಬಿಜೆಪಿ ... ಬಲಿಷ್ಠವಾಗಿದೆ. ಜೊತೆಗೆ ಬಿಜೆಪಿಗೆ ಹಣದ ... ಹೆಚ್ಚಿದೆ. ಮೇಲ್ನೋಟಕ್ಕೆ ಬಿಜೆಪಿಗಳು ಅತಿ ...ಸ ತೋರುತ್ತಿದ್ದರೂ ಒಳಗಿನ ಪರಿಸ್ಥಿತಿ ಅಷ್ಟು ...ಲ್ಲ, ಈಗ ಆಪರೇಷನ್ ಕಮಲ ನಡೆದಿರುವುದು ...ರತೆ ತುಂಬಿಸಿ ಕೊಳ್ಳಲು ಮಾತ್ರ. ಇಷ್ಟಕ್ಕೂ ಪಕ್ಷಾಂತರ ಮಾಡುತ್ತಿರುವವರಲ್ಲಿ ಅಂತ ಲೀಡರ್‌ಗಳ್ಯಾರೂ ಇಲ್ಲ.


...ಬ ತಾಲ್ಲೂಕಿನ ಅನಮಟ್ಟಿಯ ಕೆಲ ಗ್ರಾಮ ...ತಿ ಮೆಂಬರ್‌ಗಳು, ಶಿಕಾರಿಪುರ ಗ್ರಾಮ ...ತಿಯ ಮಹೇಶ್ ಮಾಜಿ ಪುರಸಭಾ ಉಪಾ...ೇಶ್ ಯಾನೆ ರಾಮಿ, ಭದ್ರಾವತಿಯ ಮಹಿಳಾ ... ಶಶಿಕಲಾ, ಪಿಎಲ್‌ಡಿ ಬ್ಯಾಂಕಿನ ಮಾಜಿ ...ಕ್ಷದ ಜಯಣ್ಣ, ಹೊಸನಗರದ ಕಾಂಗ್ರೆಸ ... ಪಂಚಾಯತಿ ಸದಸ್ಯ ಲಕ್ಷ್ಮಣಗೌಡ, ...ಯ ವ್ಯವಸಾಯ ಸೇವಾ ಸಂಘದ ಪರಮೇಶ, ...ರ್ತಿ, ಪ್ರೇಂಕುಮಾರ್... ಹೀಗೆ ಅನೇಕ ... ಆಸಾಮಿಗಳು ಈಗ ಬಿಜೆಪಿ ಸೇರಿವೆ. ಇವೆಲ್ಲಾ ... ಗಿರಾಕಿಗಳು. ಒಬ್ಬ ಜುಜುಬಿ ಗ್ರಾಮ ... ಮೆಂಬರ್ ಬಿಜೆಪಿ ಸೇರಿದರೆ ಈಗ ಮಟ್ಟಿಗೆ ಅದೇ ಭಾರಿ ಸುದ್ದಿ ಎಂದಾಗಿಬಿಟ್ಟಿದೆ. ...ಜೆಪಿ ಹುಳಿಯಿಲ್ಲ ಸುಳಿಯದೆ ಕಾಂಗ್ರೆಸ್, ...ಲ್ಲಿ ಇನ್ನು ನೂರಾರು ಲೀಡರ್‌ಗಳು ಉಳಿದು ...ವುದಂತೂ ಸತ್ಯ.

ಅಕ್ರಮಕ್ಕೆ ಎಣೆ ಇಲ್ಲ


ತಮ್ಮ ಮಗ ರಾಘವೇಂದ್ರನನ್ನು ಹೇಗಾದರೂ ಮಾಡಿ ಗೆಲ್ಲಿಸಬೇಕೆಂದು ಪಣ ತೊಟ್ಟಿರುವ ಮುಖ್ಯಮಂತ್ರಿ ಯಡ್ಡಿ ಕೇವಲ ಭಾರಿ ಪ್ರಮಾಣದಲ್ಲಿ 'ಆಪರೇಷನ್ ಕಮಲ' ನಡೆಸುತ್ತಿಲ್ಲ, ಚುನಾವಣಾ ಅಕ್ರಮಗಳನ್ನೂ ಹಾಗೆಯೇ ನಡೆಸುತ್ತಿದ್ದಾರೆ. ಇದುವರೆಗೆ ರಾಜ್ಯದಲ್ಲಿ ನೀತಿಸಂಹಿತೆ ಉಲ್ಲಂಘಿಸಿದ 13 ಪ್ರಕರಣಗಳು ನಡೆದಿದ್ದು, ಅವುಗಳಲ್ಲಿ ಆರು ಪ್ರಕರಣ ಶಿವಮೊಗ್ಗದಲ್ಲಿಯೇ ನಡೆದಿದೆ ಎಂದು ಚುನಾವಣಾ ಆಯೋಗವೇ ಹೇಳಿದೆ. ನೀತಿಸಂಹಿತೆ ಉಲ್ಲಂಘಿಸಿದ ಕಾರಣಕ್ಕೆ ಯಡ್ಡಿಯ ಆಪ್ತ ಸಹಾಯಕ ಪಡಕ್ಷರಿ ಎಂಬ ಡೀಲಿಂಗ್ ಮಾಸ್ಟರ್‌ನನ್ನು ಮನೆಗೆ ಕಳುಹಿಸಲಾಗಿದೆ.

ಈ ನಡುವೆ ಬಂ ಸಗಣಿ ಸ್ವಾಮೀಜಿ ಬಗ್ಗೆ ಮಾಡಿರುವ ಟೀಕೆಯನ್ನೇ ಮುಂದಿಟ್ಟುಕೊಂಡು ಕೆಲ ಬ್ರಾಹ್ಮಣ ಸಂಘಟನೆಗಳು ಬೀದಿಗಿಳಿದಿವೆ. ತಾವು ಬ್ರಾಹ್ಮಣ ಸಮಾಜವನ್ನು ಟೀಕಿಸಿಲ್ಲ, ಸ್ವಾಮೀಜಿ ಮಾಡುತ್ತಿರುವ ರಾಜಕಾರಣವನ್ನಷ್ಟೇ ಟೀಕಿಸಿದ್ದೇನೆ ಎಂದು ಬಂ ನೀಡಿರುವ ವಿವರಣೆ ಈ 'ಬುದ್ಧಿವಂತ'ರಿಗೆ ಅರ್ಥವಾದಂತಿಲ್ಲ. ಹೀಗಾಗಿ ಪ್ರತಿಭಟನೆ ಮುಂದುವರೆಸಿದ್ದಾರೆ. ಇದರಿಂದ ಬಂಗೆ ಲಾಭವೇ ಹೆಚ್ಚು, ಈಡಿಗ ಸಮುದಾಯ ನಿಧಾನವಾಗಿ ಮತ್ತೆ ಬಂ ರತ್ತ ವಾಲುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದ್ದು, ಇದನ್ನು ಗಮನಿಸಿದ ಯಡ್ಡಿ 'ರಾಘವೇಂದ್ರ ... ರಾಘವೇಂದ್ರ' ಎಂದು ಕಿರುಚುತ್ತಿದ್ದಾರಂತೆ. ಅವರು ಮಗನನ್ನು ಕರೆದರೋ, ದೇವರನ್ನು ನೆನೆದರೋ ಎಂಬುದು ಇನ್ನೂ ಬಿಜೆಪಿ ನಾಯಕರಿಗೆ ಗೊತ್ತಾಗಿಲ್ಲವಂತೆ!

ಕಲಬುರ್ಗಿ: ಬಿಜೆಪಿಯ ಪಾಪಕ್ಕೆ ಬೆಳಮಗಿ ಬಲಿ?



ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗುತ್ತಿರುವುದಕ್ಕಿಂತ ಬಹುತೇಕ ಮುಂಚೆಯೆ ಕಲಬುರ್ಗಿ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಯ ಬಿರುಸಿನ ಪ್ರಚಾರಕಾರ್ಯ ಶುರುವಾಗಿತ್ತು. ಚುನಾವಣೆಯ ದಿನಾಂಕ ಪ್ರಕಟವಾಗಿ ಬಿಟ್ಟರೆ ಚುನಾವಣೆಯ ನೀತಿಸಂಹಿತೆ ಅಡ್ಡ ಬಂದು ಬಂಟಿಂಗ್, ಬ್ಯಾನರ್ ಕಟ್ಟುವುದು ನಿಷೇಧವಾಗುವುದು ಎಂದು ಅರಿತಿರುವ ಕಾಂಗ್ರೆ ಈ ಮೊದಲೆ ಅವುಗಳನ್ನು ಇಡೀ ಕ್ಷೇತ್ರದ ತುಂಬ ಹರಡುವಂತೆ ವ್ಯವಸ್ಥಿತವಾಗಿ ನೋಡಿಕೊಂಡಿತ್ತು. ಜಿಲ್ಲೆಯಲ್ಲಿ ಕಾಂಗ್ರೆಸ್ 28 ಬ್ಲಾಕ್ ಸಮಿತಿಗಳನ್ನು ರಚಿಸಿಕೊಂಡಿದೆ. ಈಗಾಗಲೆ ಪ್ರತಿಯೊಂದು ಪೋಲಿಂಗ್ ಬೂಥ್‌ಗೆ ತಲಾ 12 ಜನ ಕಾರ್ಯಕರ್ತರನ್ನು ನಿಯುಕ್ತಗೊಳಿಸಿಕೊಂಡಿದೆ. ಪ್ರತಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ 37 ಜನರು ಪಕ್ಷದ ಪರವಾಗಿ ಕೆಲಸ ಮಾಡಲು ಸಜ್ಜಾಗಿ ನಿಂತಿದ್ದಾರೆ.



ಕರ್ನಾಟಕದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಚೆಡ್ಡಿಗಳು ಕಾಂಗ್ರೆಸ್‌ನ ಭದ್ರಕೋಟೆಯಾಗಿರುವ ಕಲಬುರ್ಗಿ ಲೋಕಸಭಾ ಕ್ಷೇತ್ರವನ್ನೂ ತಮ್ಮ ಬುಟ್ಟಿಯಲ್ಲಿ ಹಾಕಿಕೊಳ್ಳಬೇಕು ಎಂಬ ಹುನ್ನಾರಕ್ಕೆ ತೊಡಗಿವೆ. ಇದಕ್ಕೆ ಪೂರಕವೆನ್ನುವ ಹಲವಾರು ನಾಟಕಗಳನ್ನು ಬಹು ತಿಂಗಳುಗಳಿಂದಲೆ ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿವೆ. ಸಿ.ಎಂ. ಯಡಿಯೂರಪ್ಪನೇ ಖುದ್ದಾಗಿ ಮೂರ್‍ನಾಲ್ಕು ಸಲ ಸಣ್ಣಪುಟ್ಟ ಕಾರ್ಯಕ್ರಮಗಳಿಗೂ ಬಂದು ಹೋಗಿದ್ದಾರೆ.

ಬಿಜೆಪಿ ಮಾಡಿದ ಘನಂಧಾರಿ ಕೆಲಸದ ಕಾರಣಕ್ಕೆ ಬಿಜೆಪಿಯಿಂದ ಕಣಕ್ಕಿಳಿಯುತ್ತಿರುವ ರೇವುನಾಯಕ ಬೆಳಮಗಿ ಬಲಿಪಶುವಾಗುವ ಸಾಧ್ಯತೆಯೇ ಹೆಚ್ಚಾಗಿದೆ. ಕಲಬುರ್ಗಿಯ ಬಿಜೆಪಿಯಲ್ಲಿ ಎಲ್ಲವೂ ಸುಸೂತ್ರವಾಗಿಯೇನೂ ಇಲ್ಲ, ಏಕೆಂದರೆ ಗುಲಬರ್ಗಾ ಮತಕ್ಷೇತ್ರದ ಶಾಸಕ ಚಂದ್ರಶೇಖರ ಪಾಟೀಲ ರೇವೂರ ಈಗಾಗಲೆ ತಾನು ತೋಡಿಕೊಂಡ ಖೆಡ್ಡಾದಲ್ಲಿ ತಾನೆ ಬಿದ್ದು ಒದ್ದಾಡುವ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಚುನಾವಣೆಯ ಆಯೋಗ ಹಾಗೂ ಕರ್ನಾಟಕ. ಲೋಕಾಯುಕ್ತರಿಗೆ ತಮ್ಮ ಆಸ್ತಿ - ಪಾಸ್ತಿಯ ಕುರಿತು ತಪ್ಪು ಮಾಹಿತಿ ನೀಡಿ ಎಸ್.ಕೆ.ಕಾಂತಾರಿಂದ ಹೆಟ್ಟಿಸಿಕೊಂಡಾಗಿದೆ.

ಸಮಾಜವಾದ ಮೂಲದಿಂದ ಬಂದವರು ಎಂದು ಹೇಳಿಕೊಂಡು ಮಜಾ ಮಾಡಿಕೊಂಡು ಬಂದಿರುವ ಕೆ.ಬಿ.ಶ್ಯಾಣಪ್ಪನಂಥ ರಾಜ್ಯಸಭಾ ಸದಸ್ಯ ಯಾವತ್ತೂ ತನ್ನ ಲೋಕದಲ್ಲಿಯೆ ಮುಳುಮುಳುಗಿ ನೆಲಹಿಡಿದಿರುವ ಮಾಜಿ ಲೋಕಸಭಾ ಸದಸ್ಯ ಬಿ.ಜಿ.ಜವಳಿ, ಜೆಡಿಎ ಮಾಜಿ ಅಧ್ಯಕ್ಷ ಶ್ಯಾಮರಾವ್ ಪ್ಯಾಟಿ, ಡಾ.ಕಟ್ಟಿ ಮುಂತಾದವರು ಬಹಿರಂಗವಾಗಿಯೆ ಯಡ್ಡಿಯ ಅಡ್ನಾಡಿತನದ ವಿರುದ್ಧ ಸಿಡಿದು ನಿಂತಿದ್ದಾರೆ. ಸೇಡಂ ತಾಲೂಕಿನ ಜನಮಾನಸದ ವ್ಯಕ್ತಿಯೆಂದೇ ಗುರುತಿಸಿಕೊಂಡಿದ್ದ ಡಾ.ರಾಜಕುಮಾರ ತೇಲ್ಕೂರ್ ಈಗಾಗಲೆ ಬಿಜೆಪಿಯ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದಾರೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಯಡ್ಡಿಯ ಅಡ್ಡಾದಿಡ್ಡಿ ಬಜೆಟ್ ಮಂಡನೆ ಪ್ರಜ್ಞಾವಂತರನೇಕರಿಗೆ ಹೇಸಿಗೆ ತರಿಸಿದೆ. ಕೋಟ್ಯಂತರ ರೂಪಾಯಿಗಳ ಕುಬೇರನೆ ಆಗಿರುವ ಜಿಡಗಾದಂತಹ ಆಗರ್ಭ ಶ್ರೀಮಂತಿಕೆಯ ಮಠಕ್ಕೂ ಯಡ್ಡಿ ಕೋಟ್ಯಂತರ ರೂಪಾಯಿಗಳ ಕೊಡುಗೆ ಕೊಟ್ಟದ್ದು ಜನರಲ್ಲಿ ಹೇವರಿಕೆ ಹುಟ್ಟಿಸಿದೆ. ಅಲ್ಲದೇ ಇದು ಸಹಜವಾಗಿ ಕೆಳ ಸಮುದಾಯದ ಮಠ - ಮಾನ್ಯಗಳ ಸ್ವಾಮಿಗಳಿಗೆ ಹೇಗೋ ಹಾಗೆ ಆಯಾ ಜನಾಂಗದವರಿಗೂ ಬೇಸರ ಮೂಡಿಸಿದೆ. ಇದೆಲ್ಲದ್ದರಿಂದ ಚೆಡ್ಡಿಯೆ ಕಳಚಿಬಿಡುವ ಪೂರ್ವಸೂಚನೆಗಳು ದಟ್ಟವಾಗಿವೆ.

ಸಿದ್ಧರಾಮಯ್ಯನ ಕಂಕುಳ ಖುಷಿ ಪಡಿಸಲು ಹಾಗೂ ಅದೇ ವೇಳೆಗೆ ಖರ್ಗೆಯಂತವರನ್ನೂ ಪಾರ್ಟಿ ಕಡೆಗಣಿಸದಂತೆ ನೋಡಿಕೊಳ್ಳಬೇಕೆಂದು ನಿರ್ಧರಿಸಿರುವ ಕಾಂಗ್ರೆ ಮಲ್ಲಿಕಾರ್ಜುನ ಖರ್ಗೆಯನ್ನು ಕಣಕ್ಕಿಳಿಸಿದೆ. ಆದರೆ ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣಕ್ಕೆ ಹೋಗುವ ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಖರ್ಗೆ ಕಲಬುರ್ಗಿ ಲೋಕಸಭಾ ಅಖಾಡಕ್ಕೆ ನಿಂತಿದ್ದಾರೆ. ತೀರಾ ಇತ್ತೀಚೆಗೆ ಇಡೀ ರಾಷ್ಟ್ರದ ಗಮನವನ್ನು ಸೆಳೆದ ಬೃಹತ್ ಬೌದ್ಧ ವಿಹಾರದ ರೂವಾರಿಯಾದ ಮಲ್ಲಿಕಾರ್ಜುನ ಖರ್ಗೆಯ ಬಗೆಗೆ ಇಡೀ ಕ್ಷೇತ್ರದ ತುಂಬಾ ಒಳ್ಳೆಯ ಹವಾ ಇದೆ. ಈ ಹವಾ ಮತವಾಗಿ ಮಾರ್ಪಟ್ಟರೆ ಖರ್ಗೆ ದೆಹಲಿ ಅಮ್ಮನ ಮಡಿಲಿಗೆ ಇನ್ನಷ್ಟು ಹತ್ತಿರವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಚೆಡ್ಡಿಗಳ ಖೊಟ್ಟಿ ಹಿಂದೂ ಧರ್ಮವನ್ನು ಸರಿಯಾಗಿ ಅರಿಯದೆ ಹೋದರೆ ಮತದಾರನೆ ಪಿಗ್ಗಿ ಬೀಳುವ ಸಾಧ್ಯತೆಗಳಿವೆ.

ಈ ಎಲ್ಲ ಬೆಳವಣಿಗೆಗಳ ನಡುವೆಯೂ ಜೆಡಿಎಸ್ ತನ್ನ ಉಮೇದುವಾರನನ್ನು ಯಾರನ್ನು ಮಾಡಬೇಕು ಎಂಬ ಜಿಜ್ಞಾಸೆಯಿಂದ ಹಲವಾರು ಸಭೆಗಳನ್ನು ನಡೆಸಿದೆ. ಪಕ್ಷದ ವರಿಷ್ಠ ದೇವೇಗೌಡರೆ ಮೂರ್‍ನಾಲ್ಕು ಬಾರಿ ಬಂದು ವಿಚಾರ ವಿನಿಮಯ ಮಾಡಿಕೊಂಡಿದ್ದಾರೆ. 2004 ರ ಚುನಾವಣೆಯ ಸಂದರ್ಭದಲ್ಲಿ ಇದ್ದ ಜೆಡಿಎಸ್ ಜನಪ್ರಿಯತೆ ಇಲ್ಲವಾದರೂ ವಣಕಿಹಾಳ ಶಂಕ್ರಣ್ಣ ಎಂಬ ಜಿಲ್ಲಾಧ್ಯಕ್ಷನಿಂದ ಸ್ವಲ್ಪ ಚೇತರಿಸಿಕೊಂಡಿದೆ. ಜಿಲ್ಲಾ ಪಂಚಾಯತಿಯಲ್ಲಿ ಅಭಿವೃದ್ಧಿ ರಂಗದ ಸಂಚಾಲಕರಾಗಿ ಹೊರಹೊಮ್ಮಿದ ಸುಭಾಸ ರಾಠೋಡ, ಮಾಜಿ ಕಾರ್ಮಿಕ ಸಚಿವ ಸಿ.ಗುರುನಾಥ, ಬೀದರ ಮೂಲದ ಬಾಬು ಹೊನ್ನಾನಾಯಕ ಮುಂತಾದ ಹೆಸರುಗಳು ಕೇಳಿಬರುತ್ತವೆ.


ಇದೇನೆ ಇದ್ದರೂ ಕಲಬುರ್ಗಿ ಲೋಕಸಭಾ ಕ್ಷೇತ್ರದಲ್ಲಿ ಹಣಾಹಣಿ ನಡೆಯುವುದು ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆಯೆ. ಬಿಜೆಪಿ ಮಾಡಿದ ಪಾಪವೇ ರೇವುನಾಯಕ ಬೆಳಮಗಿಯನ್ನು ಅರ್ಧ ಸೋಲಿಸುವುದರಿಂದ ಉಳಿದರ್ಧವನ್ನು ಜಂಗೀಕುಸ್ತಿಯಲ್ಲಿ ಖರ್ಗೆ ಸೋಲಿಸಬೇಕಷ್ಟೆ.

● ವಿಶ್ವಾರಾಧ್ಯ ಸತ್ಯಂಪೇಟೆ

ಜನರಿಗೆ ಹೆದರುತ್ತಿರುವ ವಿಧಾನಸೌಧ

▶▶▶ 3

ಅನ್ನು ಅಮಿತಾಬ್ ಬಚ್ಚನ್‌ನ ಎಬಿಸಿಎಲ್ ಕಂಪನಿಗೆ ಬಾಡಿಗೆ ಆಧಾರದ ಮೇಲೆ ನೀಡಲಾಗಿತ್ತು. ಇದರರ್ಥ ಇಷ್ಟೇ: ಜನರಿಂದ ದೂರವಾದ ಸರ್ಕಾರ ಉದ್ಯಮಪತಿಗಳಿಗೆ ಹತ್ತಿರವಾಯಿತು. ಈ ಹೊಸ ಸಹಸ್ರಮಾನದಲ್ಲಿ ಸಾಮಾನ್ಯ ಜನರನ್ನು ಹೊರಗಿಡುವ ಭದ್ರಕೋಟೆಯಾಗಿ ವಿಧಾನಸೌಧ ಮಾರ್ಪಾಡುಗೊಂಡಿದೆ. ಅದರ ಸುತ್ತಲೂ ಈಗ ಎತ್ತರದ ಕಬ್ಬಿಣದ ಬೇಲಿಗಳನ್ನು ನಿರ್ಮಿಸಲಾಗಿದೆ. ಸುತ್ತಲೂ ಪೊಲೀಸರು ಕಾವಲು ನಿಂತಿರುತ್ತಾರೆ. ಮೆಟಲ್ ಡಿಟೆಕ್ಟರ್‌ಗಳೊಂದಿಗೆ ಪೊಲೀಸರು ಬಂಕರ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ಇತ್ತೀಚೆಗೆ ನಾನು ವಿಧಾನಸೌಧದ ಎದುರು ಹೋದಾಗಲೆಲ್ಲ "ಜನರ ಆಕ್ರೋಶಕ್ಕೆ ಹೆದರಿ ಅಲ್ಲಿರುವ ಜನನಾಯಕರು ತಮ್ಮ ರಕ್ಷಣೆಗೆ ಇಷ್ಟೆಲ್ಲಾ ಭದ್ರತೆಗಳನ್ನು ಮಾಡಿಕೊಂಡಿದ್ದಾರೆ" ಅನ್ನಿಸಿ ನಗು ಮತ್ತು ವ್ಯಥೆ ಎರಡೂ ನನ್ನನ್ನು ಕಾಡುತ್ತವೆ.



ಜನರೊಂದಿಗೆ, ಜನಪರವಾಗಿ, ನಿಜವಾದ ಜನರ ಪ್ರತಿನಿಧಿಗಳಾಗಿ, ಜನರ ಹಿತಾಸಕ್ತಿಯನ್ನು ನಮ್ಮ ಸರ್ಕಾರ ತನ್ನದಾಗಿಸಿಕೊಂಡಿದ್ದರೆ ಅದಕ್ಕೆ ಜನರಿಂದ ಇಂತಹ ರಕ್ಷಣೆ ಅಗತ್ಯವಾಗಿರುತ್ತಿತ್ತೆ?

ಇಷ್ಟೆಲ್ಲ ಹೇಳಿದ್ದಕ್ಕೆ ಕಾರಣವಿದೆ. ಮೊನ್ನೆ ಬೆಂಗಳೂರು ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರು ಗೃಹ ಇಲಾಖೆಯ ಆದೇಶದ ಮೇರೆಗೆ ರಾಜ್ಯ ಪತ್ರದಲ್ಲಿ ಅಧಿಕೃತ ಸೂಚನೆಯೊಂದನ್ನು ಹೊರಡಿಸಿದ್ದಾರೆ. ಆ ಸೂಚನೆಯ ಪ್ರಕಾರ ಇನ್ನುಮುಂದೆ ಪ್ರತಿಭಟನೆ, ಸಭೆ ಇತ್ಯಾದಿಗಳನ್ನು ನಡೆಸುವವರು ಹಲವಾರು ನಿಬಂಧನೆಗಳನ್ನು ಒಪ್ಪಿಕೊಂಡರೆ ಮಾತ್ರ ಅವರಿಗೆ ಅನುಮತಿ ನೀಡಲಾಗುತ್ತದೆ. ಆ ನಿಬಂಧನೆಗಳು ಹೇಗಿವೆ ಎಂದರೆ ಮೈಕ್ ಸೆಟ್ಟಿಗೆ, ವಿದ್ಯುತ್ ಸಂಪರ್ಕಕ್ಕೆ ಅನುಮತಿ ಪಡೆಯುವುದರಿಂದ ಹಿಡಿದು ಮೆರವಣಿಗೆ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯನ್ನು ಹಾದುಹೋಗುವಂತಿದ್ದರೆ ಅದಕ್ಕೆ ಅನುಗುಣವಾಗಿ ಹಿರಿಯ ಪೊಲೀಸ್ ಅಧಿಕಾರಿಗಳ ಅನುಮತಿಯನ್ನು ಪಡೆಯಬೇಕು. ಮಾತ್ರವಲ್ಲ ಪ್ರತಿಭಟನೆಯ ಉದ್ದೇಶ ಸಾರ್ವಜನಿಕ ಹಿತಾಸಕ್ತಿಯಾದ್ದಾಗಿದೆಯೇ, ಅನುಮತಿ ಕೋರಿ ಅರ್ಜಿ ಸಲ್ಲಿಸಿರುವವರ ಗಣ್ಯತೆ ಮತ್ತು ಹಿನ್ನೆಲೆ ಏನು ಎಂಬ ಆಧಾರದ ಮೇಲೆ ಅನುಮತಿಯನ್ನು ನಿರಾಕರಿಸುವ ಹಕ್ಕನ್ನು ಅಧಿಕಾರಿಗಳಿಗೆ ನೀಡಲಾಗಿದೆ. ಜೊತೆಗೆ ಯಾವುದೇ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘಟನೆಗಳ ವಿರುದ್ಧ ಘೋಷಣೆಗಳನ್ನು ಕೂಗಬಾರದೆಂದೂ ಷರತ್ತು ವಿಧಿಸಲಾಗಿದೆ.

ಪ್ರತಿಭಟನೆಗಳಿಂದಾಗಿ ವಾಹನ ಸಂಚಾರ ವ್ಯವಸ್ಥೆಗೆ ಮತ್ತು ಸಾರ್ವಜನಿಕರಿಗೆ ಅನಾನುಕೂಲ ಆಗಬಾರದೆಂಬ ಕಾರಣವನ್ನು ನೀಡಿ ಆ ಹೊಸ ನಿಯಮಗಳನ್ನು ರೂಪಿಸಲಾಗಿದೆಯಾದರೂ ವಾಸ್ತವವಾಗಿ ಬಿಜೆಪಿ ಸರ್ಕಾರದ ವಿರುದ್ಧದ ಪ್ರತಿಭಟನೆ, ಸಭೆ ಮತ್ತು ಸಮಾರಂಭಗಳನ್ನು ಹತ್ತಿಕ್ಕುವ ಉದ್ದೇಶ ಇದರ ಹಿಂದಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ.

ಸರ್ಕಾರದ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸುವುದು, ತಮ್ಮ ಅಹವಾಲುಗಳ ಈಡೇರಿಕೆಗೆ ಸಭೆ-ಸಮಾರಂಭ ನಡೆಸುವುದು ನಮ್ಮ ಸಂವಿಧಾನ ನಮಗೆ ನೀಡಿರುವ ಹಕ್ಕು. ಮಾತ್ರವಲ್ಲ ಪ್ರತಿಭಟಿಸುವುದು ಒಂದು ರೀತಿಯಲ್ಲಿ ವಿರೋಧವೂ ಹೌದು, ವಾಕ್ ಸ್ವಾತಂತ್ರ್ಯದ ಇನ್ನೊಂದು ರೂಪವೂ ಹೌದು. ಇವೆರಡೂ ಯಾವುದೇ ಪ್ರಜಾಪ್ರಭುತ್ವ ತನ್ನ ಜನತೆಗೆ ನೀಡುವ ಮೂಲಭೂತ ಹಕ್ಕುಗಳು ಕೂಡ.


ಹೀಗಿರುವಾಗ ಗೃಹಮಂತ್ರಿ ವಿ.ಎಸ್. ಆಚಾರ್ಯರಿಗೆ ಈ ಮೂಲಭೂತ ಹಕ್ಕುಗಳನ್ನೇ ನಿರಾಕರಿಸುವಷ್ಟು ಧಿಮಾಕು ಬಂದಿದೆ ಎಂದರೆ ಕರ್ನಾಟಕ ಫ್ಯಾಸಿಸ್ಟ್ ರಾಜ್ಯವಾಗುತ್ತಿದೆ ಎಂಬುದರ ಸೂಚನೆಯಷ್ಟೆ.

● ಗೌರಿ ಲಂಕೇಶ್

ಎಲ್ಲಿಗೆ ಪಯಣ? ಯಾವುದು ಪಕ್ಷ

▶▶▶10

ರೈತಾಪಿ ಜನರ ಸಿಟ್ಟು ಮತ್ತು ಆಕ್ರೋಶವನ್ನು ಅರಿತ ಅಂಬಿ ತಾನು ಇದೇ ಕ್ಷೇತ್ರದಿಂದ ಮತ್ತೆ ಸಂಸತ್ತಿಗೆ ಗೆಲ್ಲುವುದು ಕಷ್ಟ ಎಂದು ಅರಿತರು. ಈ ಕಾರಣಕ್ಕಾಗಿಯೇ ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಸ್ಪರ್ಧಿಸಿ ರಾಜ್ಯ ರಾಜಕಾರಣವನ್ನು ಪ್ರವೇಶಿಸಲು ಯತ್ನಿಸಿದರು. ಆದರೆ ವಿಧಾನ ಸಭಾ ಕ್ಷೇತ್ರದ ಆಯ್ಕೆಯಲ್ಲಿ ಯಡವಟ್ಟು ಮಾಡಿಕೊಂಡರು. ಭಗೀರಥ ಪ್ರಯತ್ನವನ್ನೇ ಮಾಡಿ, ಎರಡನೇ ಪಟ್ಟಿಯಲ್ಲಿ, ಅದೂ ಕೊನೇ ಕ್ಷಣದಲ್ಲಿ ಶ್ರೀರಂಗಪಟ್ಟಣ ಕ್ಷೇತ್ರಕ್ಕೆ ಟಿಕೆಟ್ ಪಡೆದ ಅಂಬಿ ಸ್ಥಳೀಯ ಟಿಕೆಟ್ ಆಕಾಂಕ್ಷಿಗಳ ಕೋಪಕ್ಕೆ ಗುರಿಯಾಗಿದ್ದರಿಂದ ಹೀನಾಯವಾಗಿ ಸೋತರು. ಅಲ್ಲಿಗೆ ರಾಜ್ಯ ರಾಜಕಾರಣಕ್ಕೆ ಧುಮುಕಿ ಮಂತ್ರಿಯಾಗುವ ಅಂಬಿಯ ಕನಸು ಎರಡನೇ ಬಾರಿಯೂ ನುಚ್ಚುನೂರಾಯಿತು.



ಈಗ ಸಮಸ್ಯೆಯಾಗಿರುವುದೇ ಅದು. ಶ್ರೀರಂಗಪಟ್ಟಣ ಅಸೆಂಬ್ಲಿ ಕ್ಷೇತ್ರದಿಂದ ಆಯ್ಕೆಯಾಗದ ಈ ಮಂಡ್ಯದ ಗಂಡು ಮತ್ತೆ ಲೋಕಸಭಾ ಸದಸ್ಯರಾಗಿ ಪುನರಾಯ್ಕೆಗೊಳ್ಳುವರೇ ಎಂಬ ಅನುಮಾನ ಕಾಂಗ್ರೆಸ್ ಹೈಕಮಾಂಡಿನದ್ದು. ಈ ಕಾರಣದಿಂದಲೇ ಮೊನ್ನೆ ನಡೆದ ಉಪಚುನಾವಣೆ ಸಂದರ್ಭದಲ್ಲಿ ಅಂಬಿಯನ್ನು ನಿರ್ಲಕ್ಷಿಸಿ ಮದ್ದೂರು ಅಸೆಂಬ್ಲಿ ಕ್ಷೇತ್ರಕ್ಕೆ ಅವರ ವಿರೋಧಿಗಳಾದ ಶಿವರಾಮೇಗೌಡ ಮತ್ತು ರವೀಂದ್ರ ಶ್ರೀಕಂಠಯ್ಯರನ್ನು ಕ್ಷೇತ್ರದ ವೀಕ್ಷಕರನ್ನಾಗಿ ಆಯ್ಕೆ ಮಾಡಿತ್ತು ಹೈಕಮಾಂಡ್. ಇದರಿಂದ ಕುಪಿತಗೊಂಡ ಅಂಬಿ ಉಪಚುನಾವಣಾ ಪ್ರಚಾರದಲ್ಲಿ ಭಾಗಿಯಾಗದೇ ಮಲೇಷ್ಯಾಕ್ಕೆ ಟೂರ್ ಹೋಗಿ ಕಾಲಹರಣ ಮಾಡಿ ವಾಪಸ್ಸು ಬಂದರು.



ಅಂಬಿಗೆ ಕಾಂಗ್ರೆಸ್‌ನಲ್ಲಿ ಎಸ್.ಎಂ. ಕೃಷ್ಣ ಮತ್ತು ಡಿಕೆಶಿ ಗ್ಯಾಂಗ್‌ನ ತೀವ್ರವಾದ ವಿರೋಧವಿದೆ. ಒಂದು ಕಾಲದಲ್ಲಿ ಎಸ್.ಎಂ. ಕೃಷ್ಣರನ್ನು ಸಿಕ್ಕಾಪಟ್ಟೆ ಹೊಗಳುತ್ತಿದ್ದ ಅಂಬರೀಶ್ ಇತ್ತೀಚೆಗೆ "ಕೃಷ್ಣರ ಗ್ಯಾಂಗ್ ನನ್ನನ್ನು ಹತ್ತಿಕ್ಕುತ್ತಿದೆ" ಎಂದು ಆಪ್ತರಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಕಾಂಗ್ರೆಸ್ ಒಳಗಿನ ಗೌಡರ ಗದ್ದಲ ಎನ್ನಬಹುದು. ಕೃಷ್ಣ, ಡಿಕೆಶಿ, ಶಿವರಾಮೇಗೌಡ, ಶ್ರೀಕಂಠಯ್ಯ, ತೇಜಸ್ವಿನಿ ರಮೇಶ್ ಮೊದಲಾದವರ ಕಚ್ಚಾಟದಲ್ಲಿ ತನಗೆ ಭವಿಷ್ಯವಿಲ್ಲ ಎಂಬುದು ಅಂಬಿ ಅಳಲು. ಆದ್ದರಿಂದಲೇ ರೆಬೆಲ್‌ಸ್ಟಾರ್ ಅಂಬಿ ಈಗ ಕಾಂಗ್ರೆಸ್ ಪಕ್ಷಕ್ಕೆ ರೆಬೆಲ್ ಆಗಿ ಮತ್ತೆ ಪಕ್ಷ ಬದಲಾಯಿಸುವ ಮನಸ್ಸುಮಾಡಿದ್ದಾರೆ ಎಂಬುದು ಹಲವರ ತರ್ಕ.


ಹೇಗಿದ್ದರೂ ಬಿಜೆಪಿಗೆ ಸದ್ಯ ರಾಜ್ಯಾದ್ಯಂತ ಪ್ರಚಾರದಲ್ಲಿ ತೊಡಗಿಸಿಕೊಳ್ಳುವ ಒಬ್ಬ ಜನಪ್ರಿಯ ವ್ಯಕ್ತಿಯ ಆಗತ್ಯತೆ ಇದೆ. ಅಂಬರೀಶ್ ಚೆಡ್ಡಿ ತೊಟ್ಟು ಬಿಜೆಪಿ ಸೇರಿದರೆ ಆ ಕೊರತೆ ನೀಗುತ್ತದೆ ಮಾತ್ರವಲ್ಲ, ಬಿಜೆಪಿಯ ಕಟ್ಟಾವೈರಿ ದೇವೇಗೌಡರ ಬೆಂಬಲಕ್ಕಿರುವ ಒಕ್ಕಲಿಗ ಮತಗಳನ್ನು ಕೂಡ ಸ್ವಲ್ಪ ಮಟ್ಟಿಗೆ ಕಸಿದುಕೊಳ್ಳಬಹುದು ಎಂಬುದು ಅವರ ಲೆಕ್ಕಾಚಾರವಾಗಿದೆ. ಈ ಕಾರಣಕ್ಕೆ ಅಂಬಿಯನ್ನು 'ಕೊಳ್ಳಲು' ಬಿಜೆಪಿಯವರು ಹೊಂಚುಹಾಕುತ್ತಾ ಕುಳಿತಿದ್ದಾರೆ. ಆದರೆ ಅಂಬಿ ಹಾಕಿರುವ ಕೆಲವು ಷರತ್ತುಗಳು ಬಿಜೆಪಿ ನಾಯಕರಿಗೆ ಪಥ್ಯವಾಗಿಲ್ಲ ಎಂಬ ಕಾರಣಕ್ಕೆ ಯಾವುದೂ ಇನ್ನೂ ಇತ್ಯರ್ಥಗೊಂಡಿಲ್ಲ.

ಹೀಗೆ ಸಿನಿಮಾದಂತೆ ರಾಜಕೀಯದಲ್ಲೂ ರಂಗುರಂಗಿನ ಆಟವಾಡುತ್ತಿರುವ ಅಂಬಿ ಪಾಲಿಗೆ ಈ ಬಾರಿಯ ಚುನಾವಣೆ ಅಗ್ನಿಪರೀಕ್ಷೆಯಾಗಲಿದೆ. ರಾಜ್ಯ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯುಳ್ಳ ಅಂಬಿ ಎರಡು ಬಾರಿ ಸೋಲು ಕಂಡಿದ್ದಾರೆ. ಆದರೂ 'ಮರಳಿ ಯತ್ನವ ಮಾಡು' ಎಂಬ ಮಾತಿನಂತೆ ಮೂರನೇ ಬಾರಿ ಬಿಜೆಪಿ ಅಥವಾ ಜೆಡಿಎಸ್ ಮೂಲಕ ಪ್ರವೇಶ ಮಾಡಲು ಉತ್ಸುಕರಾಗಿದ್ದಾರೆ.




ಬೆಳಗಾವಿ ಅಡ್ನಾಡಿ ಅಂಗಡಿಯ ಕನ್ನಡ ದ್ರೋಹ!

ಸ್ತಾ ದಂಧೆಗೆ ಕಾಲಿಟ್ಟು ಮುಗ್ಧ ಜನರ ಮೇಲೆ ಶುರುಹಚ್ಚಿಕೊಂಡಿದ್ದ ಎಂಇಎಸ್-ಶಿವಸೇನಾ ಕಾಟದಿಂದ ತಮ್ಮನ್ನು ವಿಮೋಚನೆ ಮಾಡಬ ಎಂಬ ನಿರೀಕ್ಷೆಯೊಂದಿಗೆ ಕುಂದಾನಗರಿ ಬೆಳ ಕನ್ನಡಿಗರು ಕಳೆದ ಲೋಕಸಭಾ



[illegible]ಚುನಾವಣೆಯಲ್ಲಿ ಹೊಸ ಮುಖವಾಗಿ ಫೀಲ್ಡಿಗಿಳಿದ [illegible] ಅಂಗಡಿಯನ್ನು ಹೊತ್ತು ಕುಣಿದಾಡಿ ಆರಿಸಿ [illegible]. ಗಲ್ಲಿಗಲ್ಲಿಗಳಲ್ಲಿ ಹಾರಾಡುವ ಭಗವಾಧ್ವಜ, [illegible]ಷರ ನಾಮಫಲಕಗಳು ಕಣ್ಮರೆಯಾಗುತ್ತವೆ, [illegible]ಯುಲ್ಲಿ ಕನ್ನಡದ ಇಂಪು ಕೇಳಿಸುತ್ತದೆ ಎಂದು [illegible] ಅವನಿಗೆ ವೋಟು ಹಾಕಿದ್ದರು. ಆದರೆ [illegible] ಏನೆಂದರೆ, ಆ ಮನುಷ್ಯ ಪಾರ್ಲಿಮೆಂಟ್ [illegible] ದಾಟಿದ್ದೇ ತಡ, ಮರಾಠಿಗರ ಮಗನಾಗಿ "ಹಮ್ ಚಿ ಮರಾಠಿ, ಹಮ್ ಚಾ [illegible] ಕನ್ನಡ-ವನ್ನಡ ಕಾಯ್ ನಹೀರೆ.." ಎಂದು [illegible] ಬಗಿಯಲಾರಂಭಿಸಿದ. ಈ ಕನ್ನಡ [illegible]ಯನ್ನು ಮನೆಗೆ ಕಳುಹಿಸಲು, [illegible]ಚುನಾವಣೆಯಲ್ಲಿ ಇವನನ್ನು ತಿರಸ್ಕರಿಸಲು ಮೊನ್ನೆ [illegible] ಭಗವಾಧ್ವಜ ಪ್ರಕರಣದಲ್ಲಿ ಮರಾಠಿ [illegible]ಗಳ ಜತೆಗಿನ ಇವನ ಪುಂಡಾಟಿಕೆಯನ್ನು [illegible]ನೆನಪಿಸಿಕೊಂಡರೆ ಸಾಕು ಎನಿಸುತ್ತೆ. [illegible]ಳ್ಳಿಯಲ್ಲಿ ಸಮಸ್ಯೆಯೇ ಅಲ್ಲದ ಈದ್ಗಾ [illegible] ಸೃಷ್ಟಿಯಾಗುವಂತೆ ಮಾಡಿದ್ದ ಬಿಜೆಪಿ [illegible] ಶಿವಸೇನೆಯ ಬಾಳಾಸಾಹೇಬ [illegible]ಂದಿಗೆ ನೆಂಟಸ್ತಿಕೆ ಬೆಳೆಸಿ "ಜೂಲಿಜ್ ಪಾಂಚೆ" ಘೋಷಣೆ ಮೊಳಗಿಸಿದರು. ಅಲ್ಲಿಂದಾಚೆಗೆ ಬಿಜೆಪಿಯ ಶನಿಸಂತಾನಿಗಳು ಬೆಳಗಾವಿ ನೆಲದಲ್ಲಿ ಅದೇನು ಕಡಿದು ಗುಡ್ಡೆ ಹಾಕುತ್ತಿದ್ದಾರೆ ಎನ್ನುವುದಕ್ಕೆ ಸುರೇಶ್ ಅಂಗಡಿ ಮತ್ತವನ ಭಂಟ ಶಾಸಕ ಸಂಜಯ ಪಾಟೀಲ ಕೈಯಲ್ಲಿ ಭಗವಾಧ್ವಜ ಹಿಡಿದು ಬೆತ್ತಲೆ ಗೊಳಿಸಿದ್ದಾರೆ.

ಮತಕ್ಕಾಗಿ ಮರಾಠಿಗರನ್ನು ಓಲೈಸಿ, ಕನ್ನಡ ನಾಡು- ನುಡಿ-ಸಂಸ್ಕೃತಿಗಳನ್ನು ಬಲಿ ಕೊಡುವುದಕ್ಕೂ ಬಿಜೆಪಿ ಹಿಂಜರಿಯುವುದಿಲ್ಲ ಎಂಬ ತನ್ನ ನಿಜ ಜಾಯಮಾನವನ್ನು ಬೆಳಗಾವಿ ಸಂಸದ ಸುರೇಶ ಅಂಗಡಿ ಮತ್ತೊಮ್ಮೆ ಸಾಬೀತುಪಡಿಸಿದ್ದಾನೆ. ಈ ಹಿಂದೆ ಎಪಿಎಂಸಿ ನಾಮಕರಣ, ಮರಾಠಿ ಸಾಹಿತ್ಯ ಸಮ್ಮೇಳನ ಸೇರಿದಂತೆ ಹಲವಾರು ಸಂದರ್ಭಗಳಲ್ಲಿ ಎಂಇಎಸ್ ಬೆಂಬಲಕ್ಕೆ ನಿಂತು ತನ್ನ ಬಣ್ಣ ಬಯಲಾಗಿಸಿದ್ದ ಅಂಗಡಿ ಕಳೆದ ಮಾರ್ಚ್ 16ರ ಸೋಮವಾರ ಪಾಲಿಕೆ ಮೇಲಿನ ಭಗವಾಧ್ವಜ ವಿವಾದದಲ್ಲಿ ಮತ್ತೊಮ್ಮೆ ಮಹಾರಾಷ್ಟ್ರ ಏಕೀಕರಣ ಸಮಿತಿಯೊಂದಿಗೆ ಸೇರಿಕೊಂಡು ಪ್ರತಿಭಟನೆಗಿಳಿಯುವ ಮೂಲಕ ಇಡೀ ಕನ್ನಡ ನಾಡಿಗೆ ಮಹಾ ದ್ರೋಹ ಮಾಡಿದ್ದಾನೆ.


'ನಾನು ಮರಾಠಿಗರ ವಿರೋಧಿಯಲ್ಲ'

ಸರಿಸುಮಾರು 50 ವರ್ಷದ ಮಹಾನಗರಪಾಲಿಕೆ ಮೇಲಿನ ಧ್ವಜ ವಿವಾದ ಇನ್ನೇನು ಮುಗಿದೇಹೋಯಿತು ಎಂದು ಭಾವಿಸುತ್ತಿರುವಾಗಲೇ ಕೇಸರಿ ವಿವಾದ ಜೀವಂತಿಕೆ ಬಯಸುವ ಬಿಜೆಪಿಗಳು ಎಂಇಎಸ್ ಜತೆ ಸೇರಿಕೊಂಡು ಪ್ರತಿಭಟನೆ ನಡೆಸಿದ್ದನ್ನು ಹಳೆಯ ಬಾಟಲಿಗೆ ಹೊಸ ವೈನನ್ನು ಸುರಿದಂತಾಗಿದೆ. ನ್ಯಾಯಾಲಯದ ಮಧ್ಯಂತರದ ನಿರ್ದೇಶನದಂತೆ ಧ್ವಜ ವಿವಾದ ಈ ಹಿಂದೆಯೇ ಬೆಳಗಾವಿಯಿಂದ ಕಾಲ್ಕೀಳಬೇಕಾಗಿತ್ತು. ಆದರೆ ಬಿಜೆಪಿಗೆ ತಮ್ಮ ತಲೆ, ಕೈ ಕಾಲು ಒತ್ತೆ ಇಟ್ಟು ಕೂತಿದ್ದ ಸುರೇಶ ಅಂಗಡಿ, ಸಂಜಯ ಪಾಟೀಲಗಳಿಬ್ಬರು ವಿವಾದವನ್ನು ಜೀವಂತವಾಗಿಡಲು ಇವತ್ತು ಮತ್ತೆ ಕೇಸರಿ ಧ್ವಜದ ನೆರಳಲ್ಲಿ ಕಾಣಿಸಿಕೊಂಡಿದ್ದಾರೆ. ಹಾಗೆ ನೋಡಿದರೆ ಬೆಳಗಾವಿ ಮಹಾನಗರ ಪಾಲಿಕೆಯ ಮೇಲೆ ಕಳೆದ ಕೆ ದಶಕಗಳಿಂದ ಕೇಸರಿ ಧ್ವಜ ಹಾರಾಡುತ್ತಿತ್ತು. [illegible] ದಂಧೆಗಾಗಿ ಜನ್ಮ ಪಡೆದ ಎಂಇಎಸ್ ಕೇಸರಿ ಭಗವಾಧ್ವಜವನ್ನು ತನ್ನ ಧ್ವಜವೆಂದು ಅಂಗೀಕರಿಸಿ ಪಾಲಿಕೆ ಮೂಲಕ ಕೇಸರಿ ಧ್ವಜ ಹಾರಾಡುವಂತೆ ಮಾಡಿದರು. ಆದರೆ ಮೂಡಲಗಿಯ ಸಾಮಾಜಿಕ ಕಾರ್ಯಕರ್ತ ಭೀಮಪ್ಪ ಗಡಾದ ಪಾಲಿಕೆಯ ಮೇಲೆ ರಾಷ್ಟ್ರಧ್ವಜದ ಬದಲಿಗೆ ಕೇಸರಿ ಧ್ವಜ ಹಾರಿಸಿದ್ದನ್ನು ವಿರೋಧಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದರು.

ಇತ್ತೀಚೆಗಷ್ಟೇ ರಾಜ್ಯ ಉಚ್ಚನ್ಯಾಯಾಲಯ ಮೂಲಗಿಯ ಗಡಾದರ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡಾಗ ರಾಷ್ಟ್ರಧ್ವಜ ದೊಂದಿಗೆ ಮತ್ಯಾವುದೇ ಧ್ವಜ ಇರಬಾರದು ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ಪಾಲಿಕೆಯ ಆಡಳಿತವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವ ವೇಳೆ ಮೊನ್ನೆಯ ಸೋಮವಾರ ಜಿಲ್ಲಾಡಳಿತ ಕೇಸರಿ ಧ್ವಜವನ್ನು ಕೈಬಿಟ್ಟಿತ್ತು. ಇದನ್ನೇ ಕಾಯುತ್ತಿದ್ದ ಎಂಇಎಸ್ ಮತ್ತು ಶಿವಸೇನೆಗಳೆಂಬ ಹಫ್ತಾ ವಸೂಲಿ ವೀರರ ಗುಂಪು ಕೇಸರಿ ಧ್ವಜ ಹಿಡಿದುಕೊಂಡು ಪಾಲಿಕೆಯತ್ತ ನುಗ್ಗಲು ಯತ್ನಿಸಿದರು. ಕ್ಷಣಾರ್ಧದಲ್ಲಿ ಬಿಜೆಪಿ ಸಂಸದ ಸುರೇಶ ಅಂಗಡಿ ಮತ್ತು ಬೆಳಗಾವಿ ಗ್ರಾಮೀಣ ಶಾಸಕ ಚೆಡ್ಡಿ ಸಂಜಯ ಪಾಟೀಲ ಸ್ಥಳದಲ್ಲಿ ಪ್ರತ್ಯಕ್ಷಗೊಂಡು ಕೇಸರಿ ಧ್ವಜ ಹಿಡಿದುಕೊಂಡು ಮರಾಠಿ ಪುಂಡಾಟಿಕೆಗೆ ಬೆಂಗಾವಲಾದರು.



ಆದರೆ ಹೈಕೋರ್ಟಿನ ಸ್ಪಷ್ಟ ಸೂಚನೆ ಹೊರಬಿದ್ದಿದ್ದರಿಂದ ಪೊಲೀಸರು ನ್ಯಾಯಾಲಯದ ಆದೇಶದಂತೆ ನಡೆದುಕೊಂಡು, ಅಂಗಡಿ ನೇತೃತ್ವದ ಮರಾಠಿ ಪುಂಡರನ್ನು ಬಂಧಿಸಿದರು.

ಅಡ್ನಾಡಿ ಅಂಗಡಿಯ ಕನ್ನಡ ದ್ರೋಹಕ್ಕೆ ರಾಜ್ಯ ಬಿಜೆಪಿ ನಾಯಕರು ಮೌನವಾಗಿ ಬೆಂಬಲಿಸಿದ್ದಾರೆ. ತಮಗೆ ಸಿಕ್ಕ ಐದು ವರ್ಷದ ಅಧಿಕಾರಾವಧಿ ಪೂರ್ಣವಾಗುವ ಷ್ಟರಲ್ಲಿ ಅವರು ಇಡೀ ಅರ್ಧ ಕರ್ನಾಟಕವನ್ನು ಮಹಾರಾಷ್ಟ್ರಕ್ಕೆ ಸೇರಿಸಿದರೂ ಆಶ್ಚರ್ಯವಿಲ್ಲ.

● ಹುರುಳಿಕುಪ್ಪಿ ವಿನಯ್

ಕೋರ್ಟ್ ಹೇಳಿದ್ದೇನು?

"ಕಾನೂನಿಗಿಂತ ಯಾವುದೂ ದೊಡ್ಡದಿಲ್ಲ, ಯಾರೂ ದೊಡ್ಡವರಿಲ್ಲ. ದೇಶದ ಐಕ್ಯತೆ ಸಾರುವ ರಾಷ್ಟ್ರಧ್ವಜದ ಜತೆಗೆ ಭಗವಾಧ್ವಜ ಹಾರಿಸಲು ಅವಕಾಶ ಕಲ್ಪಿಸಿದ ಕ್ರಮ ನಿಜಕ್ಕೂ ದುರದೃಷ್ಟಕರ. ನಗರದಲ್ಲಿ ಶಾಂತಿಭಂಗ ಉಂಟಾಗುತ್ತಿದೆ ಎಂಬ ಕಾರಣಕ್ಕೆ, ಸಂವಿಧಾನದಲ್ಲಿರುವ, ಗೌರವಿಸುವ ನಿಯಮಗಳನ್ನು ಗಾಳಿಗೆ ತೂರಿ ಪಾಲಿಕೆಯ ಹಳೆಯ ಕಟ್ಟಡದ ಮೇಲೆ ಭಗವಾಧ್ವಜ ಹಾರಿಸಲು ಅವಕಾಶ ನೀಡಿದ್ದೇ ಮೊದಲ ತಪ್ಪು. ದೇಶ ಅಥವಾ ನಾಡಿಗೆ [illegible] ಧ್ವಜವನ್ನು ಪಾಲಿಕೆಯ ಜಾಗದಿಂದ [illegible] ತೆರವುಗೊಳಿಸಬೇಕಿತ್ತು. ಆದರೆ [illegible] ಚಟುವಟಿಕೆಗೆ ಅವಕಾಶ ಕೊಟ್ಟಿದ್ದ."

ಬಿಜೆಪಿಗೆ ಒಂದೆರಡು ಪ್ರಶ್ನೆಗಳು

- ರಾಜ್ಯ ಉಚ್ಚ ನ್ಯಾಯಾಲಯದ [illegible] ಶಾಸಕ ಸಂಜಯ ಪಾಟೀಲರೊಂದಿಗೆ [illegible] ಮುಂದಾಗಿರುವುದು ನ್ಯಾಯಾಂಗ ನಿಂದನೆಯಾಗುವುದಿಲ್ಲವೆ?
- ಸಂಸದ ಅಂಗಡಿ ಗ್ರಾಮೀಣ ಶಾಸಕ ಸಂಜಯ್ ಪಾಟೀಲರೊಂದಿಗೆ [illegible] ಜನತೆಯು [illegible] ಸೇರಿದಂತೆ ಅವರ ಮನಸ್ಸಿಗೆ ಸದಾ ನೋವುಂಟು ಮಾಡುವ ಕನ್ನಡ ವಿರೋಧಿ [illegible]?
- ಅಂಗಡಿ ಮತ್ತು ಸಂಜಯ್ ಪಾಟೀಲರ ಈ ವರ್ತನೆ ರಾಜ್ಯದ [illegible] ಬಗೆದ ದ್ರೋಹವಲ್ಲವೆ?
- ನಿಜವಾಗಿಯೂ ಬಿಜೆಪಿ ಪಕ್ಷ ಕನ್ನಡಿಗರ ಪರವಾಗಿದ್ದರೆ ಇನ್ನೂ ಯಾಕೆ ಬಿಜೆಪಿ ನಾಯಕರು ಮೌನ ತಾಳಿದ್ದಾರೆ?

ಬೀದರ್: ಗೆದ್ದಂತೆ ಆಡುವ ನಾಗಮಾರಪಳ್ಳಿ -ನಿದ್ದೆಯಲ್ಲಿರುವ ಕಾಂಗ್ರೆಸ್ಸಿಗರು



[illegible]ದರ ಡಿಸಿಸಿ ಬ್ಯಾಂಕ್ ಹಾಗೂ ನಾರಂಜಾ [illegible]ಕ್ಕರೆ ಕಾರ್ಖಾನೆಗಳನ್ನು ತನ್ನ [illegible]ದಲ್ಲಿಟ್ಟುಕೊಂಡು ಭ್ರಷ್ಟಾಚಾರಿಯಾಗಿರುವ ಗುರುಪಾದಪ್ಪ ನಾಗ[illegible] ಎಂಬ ಫ್ಯೂಡಲ್ ಲಾರ್ಡ್ ಬಿಜೆಪಿಯ [illegible]ಂದು ಬಹಳಷ್ಟು ತಿಂಗಳುಗಳ ಹಿಂದೆ [illegible] ಗೊತ್ತಾಗಿತ್ತು. ಈ ಮನುಷ್ಯ ತನ್ನ ಎದುರಾಳಿ [illegible]ಸ್ಪರ್ಧಿಗಳೇ ಗೊತ್ತಿರದಿದ್ದ ಕಾರಣಕ್ಕೋ ಏನೋ [illegible]ಮ ಕಬಡ್ಡಿಯ ಕಣಕ್ಕೆ ಆಗಲೇ ಧುಮುಕಿ [illegible] ತಟ್ಟುತ್ತ ನಿಂತುಬಿಟ್ಟಿದ್ದಾನೆ. ಇಡೀ ಬೀದರ [illegible]ಕ್ಷೇತ್ರದಲ್ಲಿ ಹಾಗೂ ಮುಖ್ಯವಾಗಿ ಬಿಜೆಪಿ[illegible]ಲ್ಲಿ ನಾಗಮಾರಪಳ್ಳಿ ಈಗಾಗಲೇ ಗೆದ್ದುಬಿಟ್ಟಂತೆ [illegible]ದ್ದಾನೆ. [illegible] ನಾಗಮಾರಪಳ್ಳಿಯ ಅಹಂಕಾರ [illegible] ನಡವಳಿಕೆಯಲ್ಲಿ ವ್ಯಕ್ತವಾಗುತ್ತಿದೆ. ಚುನಾವಣೆಗಳ ನೀತಿಸಂಹಿತೆಗಳು ಈತನಿಗೆ ಕಾಲಕಸವಾಗಿವೆ. ಸರಕಾರಿ ಅಧಿಕಾರಿಗಳೆಲ್ಲ ತನ್ನ ಕಾಲಬದಿಯಲ್ಲಿ ನಿಂತು ತನ್ನ ಆಜ್ಞೆಗಾಗಿ ಕಾಯಬೇಕು ಎಂಬ ಹಳೆಯ ಗೌಡಿಕೆಯ ಲೆಕ್ಕಾಚಾರದಲ್ಲಿದ್ದಾನೆ. ಆದರೆ ಈತನ ಲೆಕ್ಕಾಚಾರಗಳೆಲ್ಲ ಜನಪರ ನಿಲುವಿನ, ಸರಕಾರಿ ಆಜ್ಞೆಯನ್ನು ಅನೂಚಾನವಾಗಿ ಪಾಲಿಸುವ ಬಿ. ಶರಣಪ್ಪ ಸಗರ ಎಂಬ ತಹಶೀಲ್ದಾರರ ಎದುರು ತಲೆಕೆಳಗಾಗಿವೆ. ಎಂದಿನ ತನ್ನ ದರ್ಪದ ನಿಲುವಿನಲ್ಲಿ ಬೀದರನ ಪ್ರಮುಖ ದೇವಸ್ಥಾನವೊಂದರಲ್ಲಿ ಪಕ್ಷದ ಸಭೆ ನಡೆಸಿ, ಅವರೆಲ್ಲರ ಊಟಕ್ಕೂ ವ್ಯವಸ್ಥೆ ಮಾಡಿದ ನಾಗಮಾರಪಳ್ಳಿ ಪಟಾಲಂಗಳನ್ನು ಮೊಟ್ಟಮೊದಲ ಬಾರಿಗೆ ಬಂಧಿಸಿ, ಕೇಸ್ ಜಡಿಯುವ ಮೂಲಕ ತಹಶೀಲ್ದಾರ ಪ್ರಜಾಪ್ರಭುತ್ವವಾದಿಗಳ ಹೆಮ್ಮೆಗೆ ಪಾತ್ರವಾಗಿದ್ದಾರೆ.

ತಹಶೀಲ್ದಾರರ ದಿಟ್ಟ ಕ್ರಮದಿಂದ ಅಂಡುಸುಟ್ಟ ಬೆಕ್ಕಿನಂತಾದ ನಾಗಮಾರಪಳ್ಳಿ ಒಂದೇ ಸಮ ಚೀರುತ್ತ "ನಿಮ್ಮ ದರ್ಬಾರೇನಿದ್ದರೂ ನಲವತ್ತು ದಿನ. ಆಮೇಲೆ ನನ್ನ ದರ್ಬಾರು. ಆಗ ನಿಮ್ಮನ್ನು ಒಂದು ಕೈ ನೋಡಿಕೊಳ್ಳುತ್ತೇನೆ" ಎಂಬ ಧಮಕಿನ ಮಾತುಗಳನ್ನು ಮಾಧ್ಯಮಗಳಲ್ಲಿ ಹೇಳುವ ಮೂಲಕ ತಾನು ಯಾವುದರಿಂದ ಸಿಮಾರ್ಗಾಗೊಂಡ ವ್ಯಕ್ತಿ ಎಂದು ತೋರಿಸಿಕೊಂಡಿದ್ದಾನೆ. ಈತನ ಒಣ ಅಹಂಕಾರ, ಗತ್ತು, ಗೈರತ್ತುಗಳೆಲ್ಲ ತನ್ನ ಭ್ರಷ್ಟ ಪುಂಡಾಟಗಳನ್ನು ಮುಚ್ಚಿಕೊಳ್ಳಲಿಕ್ಕೆ ಎಂಬ ಸತ್ಯ ಇಲ್ಲಿನ ಮತದಾರರಿಗೆ ಅರ್ಥವಾಗಬೇಕಿದೆ.

ಆದರೆ ಕಾಂಗ್ರೆಸ್ ಎಂಬ ಸೋಂಬೇರಿ ನಾಯಕರು ಮಾತ್ರ ಅದೇನು ಕಾರಣವೋ ಇವತ್ತಿಗೂ ತನ್ನ ಪಕ್ಷದ ಅಭ್ಯರ್ಥಿ ಯಾರು ಎಂದು ಖಚಿತಪಡಿಸಿಲ್ಲ. ಮಾಜಿ ಕೇಂದ್ರ ಗೃಹ ಸಚಿವ ಶಿವರಾಜ ಪಾಟೀಲ ಎಂದು ಒಂದು ಬಾರಿ ಸುದ್ದಿ ಹಬ್ಬಿಸಿದರೆ ಇನ್ನೊಂದು ಬಾರಿ ಮಾಜಿ ಮಂತ್ರಿ ಧರ್ಮಸಿಂಗ್ ಎಂದು ಹೇಳುತ್ತದೆ.







ಮಗದೊಂದು ಬಾರಿ ಅಲ್ಪಸಂಖ್ಯಾತರ ಓಲೈಕೆ ಮಾಡಬೇಕಾಗಿರುವ ಅನಿವಾರ್ಯತೆಗೆ ಇಕ್ಬಾಲ್ ಅಹ್ಮದ್ ಸರಡಗಿಗೆ ಪಕ್ಷದ ಟಿಕೆಟ್ ಎಂದು ಹೇಳಿಕೊಂಡಿದೆ. ಆದರೆ ಬಿ.ಆರ್.ಪಾಟೀಲ ಎಂಬ ಕಾಂಗ್ರೆಸ್ ಪಾಳೆಯದ ನೇತಾರ ಮಾತ್ರ "ಶಿವರಾಜ ಪಾಟೀಲಗೆ ಟಿಕೆಟು ಕೊಟ್ಟರೆ ಮಾತ್ರ ಬೀದರ ಸಂಸದೀಯ ಕ್ಷೇತ್ರ ಕಾಂಗ್ರೆಸ್ ಮಡಿಲಿಗೆ ಬೀಳುತ್ತದೆ. ಜೊತೆಗೆ ಹೈದ್ರಾಬಾದ ಕರ್ನಾಟಕದ ಲಿಂಗಾಯತರಿಗೆ ಪ್ರಾತಿನಿಧ್ಯ ನೀಡಿದಂತಾಗುತ್ತದೆ. ಶಿವರಾಜ ಪಾಟೀಲರಿಗೂ ಕೂಡ ಬೀದರ ಸಂಸದೀಯ ಕ್ಷೇತ್ರ ಹೊಸದಲ್ಲ. ಇಲ್ಲದೆ ಹೋದರೆ ಕೋಮುವಾದಿ ಬಿಜೆಪಿಯ ಚೆಡ್ಡಿಗಳಿಗೆ ಮಣೆ ಹಾಕಬೇಕಾಗುತ್ತದೆ" ಎಂಬ ಎಚ್ಚರಿಕೆಯ ಮಾತುಗಳನ್ನು ಆಡಿದ್ದಾರೆ.

ಲೋಕನಾಯಕನೆಂದು ತನ್ನನ್ನು ತಾನೆ ಕರೆದುಕೊಂಡಿರುವ ಭಾಲ್ಕಿಯ ಲೋಪನಾಯಕ ಭೀಮಣ್ಣ ಖಂಡ್ರೆ ಎಂಬ ಉಟ್ಟು ಓರಾಟಗಾರನಿಗೆ ಟಿಕೆಟ್ ಕೊಡಿಸಬೇಕೆಂದು ಕೆಲವರು ದುಂಬಾಲು ಬಿದ್ದಿದ್ದಾರೆ. ತಮಾಷೆ ಎಂದರೆ ಭಾಲ್ಕಿಯ ಲಿಂಗೈಕ್ಯ ಚೆನ್ನಬಸವ ಪಟ್ಟದ್ದೇವರ ಹೋರಾಟದ ಫಲವಾಗಿ ರೂಪಿತವಾದ ಶಾಂತಿವರ್ಧಕ ಶಿಕ್ಷಣ ಸಮಿತಿಯನ್ನು ಪೂರ್ತಿ ಖಬ್ಜಾ ಮಾಡಿಕೊಂಡಿರುವ ಕಳ್ಳ ಇತಿಹಾಸ ಖಂಡ್ರೆ ಪಾಲಿಗೆ ಇದೆ. ಒಂದು ಕಡೆ ಪಂಚಾಚಾರ್ಯರನ್ನು ಓಲೈಸುತ್ತ ಮಗದೊಂದು ಕಡೆ ಚೆನ್ನಬಸವಪಟ್ಟದ್ದೇವರ ಖಾಸಾ ಶಿಷ್ಯ ಎಂದು ಈತ ತೋರಿಸಿಕೊಳ್ಳುತ್ತಿರುವುದೆ ನಾಚಿಕೆಗೇಡಿನ ಸಂಗತಿಯಾಗಿದೆ. ಈ ವ್ಯಕ್ತಿಗೆ ಕಾಂಗ್ರೆಸ್ ಮಣೆ ಹಾಕುವುದೆಂದರೆ ತನ್ನ ತಳವನ್ನು ತಾನೆ ತೋಡಿಕೊಂಡಂತೆ ಎಂಬ ಭಾವನೆಯೂ ಜನತೆಯಲ್ಲಿ ಕೇಳಿಬರುತ್ತಿದೆ.

ಇದೆಲ್ಲಕ್ಕಿಂತ ವಿಚಿತ್ರ ಹಾಗೂ ತಮಾಷೆ ಎಂದರೆ [illegible] ಕಾಣಿಸಿದರೂ [illegible].

● ವಿಶ್ವಾರಾಧ್ಯ ಸತ್ಯಂಪೇಟೆ

ಮುಂಜಾನೆಯ ಇಬ್ಬನಿ ಹನಿಯಲ್ಲಿ ಸೂರ್ಯಗೋಳದ ಪ್ರತಿಫಲನ

'ಲಂಕೇಶ್ ಪತ್ರಿಕೆ'ಯ ಓದುಗನಾಗಿದ್ದ ನನಗೆ ಎಲ್ಲರಂತೆ ಮೊದಲಿನಿಂದಲೇ ಅವರ ಟೀಕೆ ಟಿಪ್ಪಣಿಗಳು ಬಹಳ ಮೆಚ್ಚಿನ ಬರಹಗಳಾಗಿದ್ದವು. ನಂತರದಲ್ಲಿ 'ಮರೆಯುವ ಮುನ್ನ' ಬರಹಗಳು ಈ ಮೆಚ್ಚುಗೆಯ ಮೊದಲ ಸಾಲಿಗೆ ಬಂದು ನಿಂತವು. ಟೀಕೆ ಟಿಪ್ಪಣಿಗಳಲ್ಲಿ ಇದ್ದ ವೈಯಕ್ತಿಕ ಸ್ಪರ್ಶದ ನವಿರು 'ಮರೆಯುವ ಮುನ್ನ' ಬರಹಗಳಲ್ಲಿ ಮತ್ತಷ್ಟು ಹೃದ್ಯಗೊಂಡಂತೆ, ಕುತಲಗೊಂಡಂತೆ ಕಾಣಿಸಿಕೊಂಡ ರೀತಿ ಇದಕ್ಕೆ ಕಾರಣವಾಗಿರಬಹುದು.

ಇದರ ಹೊರತಾಗಿ ಸರಳವಾಗಿ ಹೇಳಬಹುದಾದ ಮಾತೆಂದರೆ, ಈ ಬರಹಗಳಲ್ಲಿ ಪಾರಿಭಾಷಿಕ ಪದಗಳ ಭಾರವಿಲ್ಲ, ಶುದ್ಧ ಶೈಕ್ಷಣಿಕ ಬರಹಗಳ ಗೊಡ್ಡುತನವಿಲ್ಲ, ಮಹತ್ವಾಕಾಂಕ್ಷೆಯ ಬರಹಗಳ ತೋರಿಕೆಯಿಲ್ಲ, ಅಂತೆಯೇ ಸಾಮಾನ್ಯ ಲಹರಿ ಬರವಣಿಗೆಯ ಲೋಲುಪತೆ ಅಥವಾ ಭಾವಾತಿರೇಕವಿಲ್ಲ, ಸಿದ್ಧಾಂತ ಮಂಡನೆಯ ತರ್ಕ, ವಾದಗಳ ಗೋಜಲಿಲ್ಲ. ಆದರೆ ಇವುಗಳಲ್ಲಿ ಲಂಕೇಶ್ ಇದ್ದಾರೆ. ಅವರ ಕ್ರಿಯಾಶೀಲತೆಯ ಮುಖ್ಯ ಧಾತುವಾಗಿದ್ದ ಸೂಕ್ಷ್ಮಪ್ರಜ್ಞೆ, ಸಾಹಿತಿ, ಕಳಕಳಿಯಿಂದ ಯೋಚಿಸುವ ಸಾಮಾಜಿಕ ಚಿಂತಕ, ಅನಿಷ್ಟಗಳ ಬಗ್ಗೆ ಸಿಡಿಮಿಡಿಗೊಳ್ಳುವ ಸಾಂಸಾರಿಕ, ಭಾವಿಸುವ-ಪ್ರೇಮಿಸುವ-ಸಂತಸಪಡುವ-ಗೊಂದಲಗೊಳ್ಳುವ ಮನುಷ್ಯನಾಗಿ ಬರೆದ ಈ ಬರಹಗಳು ಲಂಕೇಶರ ಸೃಜನಶೀಲತೆಯ ಅಂತಃಸತ್ವವನ್ನು ಬಹಳ ಸಮರ್ಥವಾಗಿ ಬಳಸಿಕೊಂಡಿವೆ.



ರಂಜನೆ, ಬೋಧನೆ, ಪ್ರಚೋದನೆ ತಮ್ಮ ಪತ್ರಿಕೆಯ ಉದ್ದೇಶ ಎಂದು ಅವರು ನೀಡುತ್ತಿದ್ದ ಉತ್ತರ ಬಹಳ ಜನಕ್ಕೆ ಗೊತ್ತು. ಲಂಕೇಶ್ ಪತ್ರಿಕೆಯಲ್ಲಿ ಬೇರೆ ಬೇರೆ ಲೇಖನಗಳು ಈ ಕೆಲಸಗಳನ್ನು ಬಿಡಿಬಿಡಿಯಾಗಿ ಮಾಡುತ್ತಿದ್ದವಾದರೆ; 'ಮರೆಯುವ ಮುನ್ನ' ಬರಹಗಳು ಈ ಮೂರೂ ಕೆಲಸಗಳನ್ನು ಒಟ್ಟಿಗೆ ಪರಿಣಾಮಕಾರಿಯಾಗಿ ನಿರ್ವಹಿಸಿರುವುದು ಇವನ್ನೆಲ್ಲ ಒಟ್ಟಿಗಿಟ್ಟುಕೊಂಡು ಓದುವಾಗ ಗೊತ್ತಾಗುತ್ತದೆ. ಇವುಗಳ ಮೂಲಕ ಲಂಕೇಶರು ಟ್ಯಾಬ್ಲಾಯ್ಡ್ ಸಂಪಾದಕರುಗಳಿಗೆ, ಅಂಕಣ ಬರಹಗಾರರಿಗೆ ಹೊಸತೊಂದು ಮಾದರಿಯನ್ನು ನಿರ್ಮಿಸಿಕೊಟ್ಟಿದ್ದಾರೆ. ಅವರೊಳಗಿದ್ದ 'ವ್ಯಗ್ರ ತರುಣ' ನೈತಿಕವಾದಿ ಟೀಕಾಕಾರನಾಗಿ ಮಾಗಿದ ಸಂದರ್ಭವನ್ನು ಇಲ್ಲಿನ ಬರವಣಿಗೆಗಳು ಒಳಗೊಂಡಿವೆ. ಆದ್ದರಿಂದಲೇ ಇವುಗಳಿಗಿರುವ ಪರಿಣಾಮಕಾರಿತ್ವ ಇಮ್ಮಡಿಸಿದೆ.

ಯಾವುದೇ ಆಲಂಕರಣಗಳ ಗೊಡವೆಗೆ ಹೋಗದೆ ಕಂಡದ್ದನ್ನು ಕಾಣಿಸುವ ಹಾಗೆ ಆಪ್ತ ನಿರೂಪಣೆಯಲ್ಲಿರುವ ಪುಟ್ಟಪುಟ್ಟ ಬರಹಗಳು, ಸಂಗ್ರಹವಾಗಿ ಹೇಳುವ ರೀತಿಗೊಂದು ಸುಂದರ ಉದಾಹರಣೆಯಂತಿವೆ. ಈ ಬರಹಗಳಿಗಿರುವ ಶೀರ್ಷಿಕೆಗಳು ಕೂಡ ವಿಶಿಷ್ಟವಾಗಿವೆ. ಆ ಶೀರ್ಷಿಕೆಗಳು ಬರವಣಿಗೆಯ ಸಾರಾಂಶವನ್ನು ಅಥವಾ ವಸ್ತುವನ್ನು ಕುರಿತು ಹೆಚ್ಚಿನ ಸಲ ನೇರವಾಗಿ ಏನನ್ನೂ ಹೇಳುವುದಿಲ್ಲ. ತಲೆಬರಹವೆಂಬುದು ಬರವಣಿಗೆಯನ್ನು ಓದುವುದಕ್ಕೆ ನಮಗೆ ನೀಡಿದ ಆಹ್ವಾನದಂತಿದೆಯೇ ಹೊರತು ಬೇರೆ ಲೇಖನಗಳಿಗಿರುವಂತೆ ವಿಂಗಡಿಸಿ ಹೇಳುವ ವಿಷಯಸೂಚಿಯಾಗಿಲ್ಲ. ಏನನ್ನು ಹೇಳುತ್ತಿದ್ದಾರೆ ಎಂಬ ಬಗ್ಗೆ ಕುತೂಹಲ ಮೂಡಿಸುವಂತೆ ತಟ್ಟನೆ ಆರಂಭವಾಗುವ ನಿರೂಪಣೆ, ಕಡೆಗೆ ಇಂತಹ ವಿಷಯವೊಂದನ್ನು ವಿವರಿಸುತ್ತಿದ್ದಾರೆ ಎಂದು ನಾವು ಊಹಿಸಿಕೊಳ್ಳುವ ಹೊತ್ತಿಗೆ ಬೇರೊಂದು ಕೋನಕ್ಕೆ ಕರೆದೊಯ್ಯುವಂತಹ ಕಾವ್ಯಾತ್ಮಕ ಗುಣ ಇಲ್ಲಿನ ಹಲವಾರು ಟಿಪ್ಪಣಿಗಳಿಗಿದೆ.



ತುಂಡು ವಾಕ್ಯಗಳಲ್ಲಿ, ನಿಖರವಾಗಿ, ನೇರವಾಗಿ ವಿಷಯ ಮಂಡಿಸುವ ಬರವಣಿಗೆಯನ್ನು ಲಂಕೇಶರೇ ಮೊದಲು ಬಳಸಿದರೆಂದು ಹೇಳಲು ಸಾಧ್ಯವಿಲ್ಲ. ಟಿಎಸ್ಸಾರ್, ಖಾದ್ರಿ ಶಾಮಣ್ಣ, ವೈಎನ್ಕೆ ಮುಂತಾದವರು ಈ ರೀತಿಯ ಚುರುಕು ಬರವಣಿಗೆಯನ್ನು ಪತ್ರಿಕಾ ರಂಗದಲ್ಲಿ ಮಾಡಿದ್ದಾರೆ. ಮತ್ತೆ ಕೆಲವರು ತಮ್ಮ ಕತೆ-ಕಾದಂಬರಿಗಳಲ್ಲಿ ಈ ವಿಧಾನ ಬಳಸಿದ್ದಾರೆ. ಆದರೆ ಲಂಕೇಶರ ಬರವಣಿಗೆಯ ಬನಿ ಪತ್ರಿಕಾ ಬರವಣಿಗೆಯ ಸಂಗ್ರಾಹ್ಯತೆಯನ್ನೂ, ಕಾವ್ಯಾತ್ಮಕ ಬರವಣಿಗೆಯ ಸೌಂದರ್ಯವನ್ನೂ ಒಟ್ಟು ಮಾಡಿಕೊಂಡ ಪರಿ ವಿಶಿಷ್ಟವಾದದ್ದು. ಆದರಿಂದಾಗಿ ಇವುಗಳಲ್ಲಿರುವ ಜಿಜ್ಞಾಸೆಯೆಂಬುದು ತನ್ನ ಲವಲವಿಕೆಯೊಂದಿಗೆ ಕಾಣಿಸಿಕೊಳ್ಳುತ್ತದೆ. ಅದು ಸ್ನೇಹಪೂರ್ವಕವಾಗಿರುವುದರಿಂದ ತರುಣರಲ್ಲಿ ಆಟದ ಜೊತೆಗೆ ಪಾಠ ಎಂಬಂತಹ ಖುಷಿಯನ್ನು, ಚಿಂತನೆಯ ಒಳನೋಟದಿಂದಾಗಿ ಓರಗೆಯವರಲ್ಲಿ ಬೆರಗನ್ನು, ಸಮತೋಲದ ನಿಲುವುಗಳಿಂದಾಗಿ ಹಿರಿಯರಲ್ಲಿ ಮೆಚ್ಚುಗೆಯನ್ನು ಉಂಟುಮಾಡುತ್ತಾ ಹೋಗುತ್ತದೆ.

ಅವರ ಬರವಣಿಗೆಗೆ ಮಾತ್ರವಲ್ಲ; ಸಾರ್ವಜನಿಕ ವೇದಿಕೆಗಳಲ್ಲಿ ಮಾತಾಡುವಾಗಲೂ ಅಂದಿನ ಭಾಷಣದ ಶೈಲಿಗಿಂತ, ಆಡುತ್ತಿರುವ ಮಾತಿನ ಚುರುಕಕ್ಕೆ, ಅವರು ಹೆಚ್ಚು ಗಮನ ನೀಡುತ್ತಿದ್ದರೆಂಬುದನ್ನು ನಾನಿಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ. ಈ ನಂಬಿಕೆಯಿಂದಾಗಿ ಅವರು ಬೊಂಬಾಟ್ ಭಾಷಣಕಾರರಾಗಲು ಸಾಧ್ಯವಾಗಿಲ್ಲದಿರಬಹುದು. ಆದರೆ ಅವರ ಮಾತುಗಳು ಕೇಳುಗರ ಅಂತರಾಳ ತಲುಪುತ್ತಿದ್ದವು- ಈ 'ಮರೆಯುವ ಮುನ್ನ' ಟಿಪ್ಪಣಿಗಳ ರೀತಿಯಲ್ಲೇ. ನನ್ನನ್ನು ಹೆಚ್ಚಾಗಿ ಕಾಡಿದ್ದು ಈ ಪರಿಣಾಮಕಾರಿತ್ವದ ಗುಣ. ಒಂದು ರೀತಿಯಲ್ಲಿ ಇವುಗಳನ್ನು ದೃಷ್ಟಾಂತ ಕಥೆಗಳಿಗೆ ಹೋಲಿಸಬಹುದು. ಕಥನ ಗುಣ, ಚಕಿತಗೊಳಿಸುವ ತಿರುವುಗಳು, ಅನೌಪಚಾರಿಕ ನಿರೂಪಣೆ, ಪ್ರಯೋಗಶೀಲ ದೃಷ್ಟಿಕೋನ ಹಾಗೂ ನೀತಿ ಬೋಧನೆಯನ್ನು ಧನಾತ್ಮಕವಾಗಿಸುವುದು- ಇವುಗಳನ್ನು ಸಾಮಾನ್ಯವಾಗಿ ಝೆನ್, ಸೂಫಿ, ದರವೇಶಿ ದೃಷ್ಟಾಂತ ಕಥೆಗಳ ಲಕ್ಷಣಗಳೆನ್ನಬಹುದು. 'ಮರೆಯುವ ಮುನ್ನ'ದ ಎಷ್ಟೋ ಟಿಪ್ಪಣಿಗಳು ಈ ಬಗೆಯಲ್ಲಿ ಅತ್ಯುತ್ತಮ ದೃಷ್ಟಾಂತ ಕಥೆಗಳ ಸಾರ್ಥಕತೆಯನ್ನು ಪಡೆದುಕೊಂಡಿವೆ.

1990ರ ನಂತರ ಬಂದ ಅವರ ಬರಹಗಳಲ್ಲಿ ಬೋಧನೆಯ ಗುಣ ಜಾಸ್ತಿಯಾಯಿತೆಂದು ದೂರುವವರು ಕೆಲವರಿದ್ದಾರೆ. ಮೂಲಭೂತವಾಗಿ ಅವರೊಬ್ಬ ಅಧ್ಯಾಪಕರಾದ್ದರಿಂದ ಈ 'ಮೇಷ್ಟ್ರು' ಗುಣ ಅವರ ಟೀಕೆ ಟಿಪ್ಪಣಿಗಳಲ್ಲಿ ಮತ್ತು ಮರೆಯುವ ಮುನ್ನ ಬರಹಗಳಲ್ಲಿ ಬೇಕಾದಷ್ಟಿದೆಯೆಂದು ಟೀಕಿಸುವವರೂ ಇದ್ದಾರೆ. ವಿಚಿತ್ರವೇನೆಂದರೆ ಇವುಗಳನ್ನು ಓದಿದ ಯುವ ತಲೆಮಾರಿನ ನಮಗೆ ಅವು ಬೋಧನೆಗಳ ರೀತಿ ಜಡವೆಂದು ಕಾಣಲಿಲ್ಲ, ಇಷ್ಟು ವರ್ಷಗಳ ನಂತರ ಅವುಗಳನ್ನು ಒಟ್ಟಿಗೆ ಓದಿದಾಗಲೂ ಅವುಗಳಲ್ಲಿರುವ ಜೀವನ ದರ್ಶನದ ಮಹತ್ವ ಮಸುಕಾಗಿದೆಯೆಂದು ಅನ್ನಿಸಲಿಲ್ಲ, ಲೇಖಕ, ಕವಿ, ಸಾಮಾಜಿಕ ಕ್ರಿಯಾಶೀಲ, ರಾಜಕಾರಣಿ, ಹಳ್ಳಿಯ ಮುಖಂಡ, ವಿದ್ಯಾರ್ಥಿ ಮುಂತಾದ ಹಲವು ಬಗೆಯ ಜನರು ಸ್ವೀಕರಿಸಬಹುದಾದ ಜೀವನದರ್ಶನ ಈ ಬರಹಗಳಲ್ಲಿದೆ. ಮರೆಯುವ ಮುನ್ನ ಟಿಪ್ಪಣಿಗಳ ಬರವಣಿಗೆಯ ಅಂದಚಂದ ಒತ್ತಟ್ಟಿಗಿರಲಿ, ಅವುಗಳು ಮೆಲುಮಾತಿನಲ್ಲಿ ಆದರೆ ಖಚಿತವಾಗಿ ಸೂಚಿಸುವ ಜೀವನದರ್ಶನವೇ ಅವುಗಳ ನಿಜವಾದ ಸೌಂದರ್ಯವಾಗಿದೆ.

ಪುಸ್ತಕ ಪರಿಚಯ

ರಾಜೀವ್ ಗಾಂಧಿ ತಮಿಳುನಾಡು ಪ್ರವಾಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಧರಿಸಿದ್ದ ಉಡುಪಿನ ಶೈಲಿಯ ಬಗ್ಗೆ ಲಂಕೇಶ್ ಬರೆಯುವುದು- "ಆತನ ಅಂತರ್ಯದಂತೆಯೇ ಈ ಬಾಹ್ಯ ಸಂದರ್ಭೋಚಿತವಾಗಿ ಬದಲಾಗಕೂಡದು. ಚೊಕ್ಕಟವಾದ, ತಿಳಿ ಬಣ್ಣಗಳ ಯಾವುದೇ ಉಡುಪು ಸಾಕು. ಆತನನ್ನು ನೋಡಿದರೆ 'ನಮ್ಮವನು' ಎನ್ನುವುದು ನಮ್ಮ ರಾಜ್ಯದ ಉಡುಪಿನಿಂದಲ್ಲ, ಆತನ ವ್ಯಕ್ತಿತ್ವದಿಂದ ಗೊತ್ತಾಗಬೇಕು. ಭಾರತದ ಪ್ರಧಾನಿ ನಕಲಿ ಶ್ಯಾಮನಂತಾಗಬಾರದು". ತಮಿಳುನಾಡಿಗೆ ಹೋದಾಗ ಅಲ್ಲಿನವರ ರೀತಿ ಬಟ್ಟೆ ಧರಿಸುವುದು ಒಂದು ಬಗೆಯಲ್ಲಿ ಸೌಹಾರ್ದಯುತ ನಡವಳಿಕೆ ಎಂದು ಮೆಚ್ಚಿಕೊಳ್ಳುವವರು ಅಥವಾ ಅದನ್ನೊಂದು ಗಮನಿಸಬೇಕಾದ ವಿಷಯವನ್ನಾಗಿ ಪರಿಗಣಿಸದಿರುವವರು - ಇವರ ನಡುವೆ ಲಂಕೇಶರ ಸೂಕ್ಷ್ಮಾವಲೋಕನ ಮತ್ತು ಆ ಬಗ್ಗೆ ತಳೆಯುವ ನಿಲುವು ಬಹಳ ಅರ್ಥಪೂರ್ಣ.

ಅಲ್ಲಲ್ಲಿನ ಶೈಲಿಯ ಉಡುಪು ಧರಿಸುವ ಮೂಲಕ, ಮೈಸೂರು ಪೇಟ ತೊಡುವ ಮೂಲಕ ಅವರು ತೋರಿಸಬೇಕೆಂದಿರುವ ಸಾಂಘಿಕ ಭಾವನೆ ಹೆಚ್ಚಿನ ಸಲ ವಿವಿಧ ವೇಷಾವಳಿಯಂತೆ ರಂಜನೀಯ ಮಾತ್ರವಾಗಿ ಬಿಡಬಹುದು. ಆದರೆ ಪ್ರಧಾನಿ ಹುದ್ದೆಯ ವ್ಯಕ್ತಿ ತನ್ನ ಸರಳ ವ್ಯಕ್ತಿತ್ವದ ದಿಟ್ಟ ನಿಲುವುಗಳ ಮೂಲಕ ದೇಶವೊಂದರ ಭಾವೈಕ್ಯತೆಯನ್ನು, ಘನತೆಯನ್ನು ಪ್ರತಿನಿಧಿಸುವಂತಿರಬೇಕು ಎಂಬ ವಾಸ್ತವ ಪರಿಜ್ಞಾನವೆಂಬುದಿಲ್ಲಿ ಹೆಚ್ಚು ಅರ್ಥಪೂರ್ಣ.

ಸಾಹಿತ್ಯ ಕೃತಿಗಳು ತಂದುಕೊಡುವ ಅಮರ ಕೀರ್ತಿಯ ಬಗ್ಗೆ ಲಂಕೇಶರ ಗ್ರಹಿಕೆ ಇದು- "ಅಮರತ್ವ ಸುಣಬಚಿಕೊಳ್ಳುವ ಸ್ವಭಾವದ್ದು. ವರ್ತಮಾನ ಭವಿಷ್ಯವನ್ನು ನಿರ್ಧರಿಸುವಲ್ಲಿ ಅಸಹಾಯಕವಾದದ್ದು. ಅಮರವಾಗಲೆಂದೇ ಬರೆದ ಸಾಹಿತ್ಯ ಮರಗಟ್ಟಿ ಹೋದದ್ದು ಕಂಡಿದ್ದೀರಿ..... ಆದ್ದರಿಂದ ತೀವ್ರವಾಗಿ ಬದುಕಿ, ತೀವ್ರವಾಗಿ ಬರೆಯುವುದು ಮಾತ್ರ ವರ್ತಮಾನದಲ್ಲಿ ನನ್ನಿಂದ ಸಾಧ್ಯ. ಅಮರತ್ವಕ್ಕಾಗಿ ಹುನ್ನಾರಗಳೇ ನನ್ನಲ್ಲಿಲ್ಲ..... ಆದರೆ ಈಗ ಬರೆಯಬೇಕೆಂದಿರುವ ಕತೆ ಸ್ವಲ್ಪ ಹೆಚ್ಚು ಅಮರವಾದೀತೆಂಬ ಹುಲುಮಾನವರ ಆಶೆ ನನ್ನಲ್ಲಿ ಕೂತು ಅಣಕಿಸುತ್ತಿದೆ." ಅಮರತ್ವದ ಬಗ್ಗೆ ಲಂಕೇಶರಿಗಿರುವ ನಿಲುವು ಹಾಗೂ ಆ ನಡುವೆಯೂ ಹೊಂಚಿಕೂತಿರುವ ಹುಲುಮಾನವ ಆಶೆಯ ದ್ವಂದ್ವದ ಬಗ್ಗೆ ಆತ್ಮಾವಲೋಕನ- ಇವು ನನ್ನಲ್ಲಿ ಮೆಚ್ಚುಗೆಯನ್ನೂ, ಆಲೋಚನೆಯನ್ನೂ ಹುಟ್ಟಿಸುತ್ತಿರುವ ಅಂಶಗಳಾಗಿವೆ.

ಕ್ರಾಂತಿಕಾರಿ ಚೆಗೆವೆರಾ ಬಗ್ಗೆ ಬರೆದ ಟಿಪ್ಪಣಿ ಕೊನೆಗೊಳ್ಳುವುದು ಹೀಗೆ- "ವೈಯಕ್ತಿಕ ಸಾಂತ್ವನದಿಂದ ದೇಶದ ಉದ್ಧಾರಕ್ಕಾಗಿ ಹೋದಂತೆಯೇ ಈತ ಜಾಗತಿಕ ಕ್ರಾಂತಿಗೆ ಪ್ರಯತ್ನಿಸಿದ. ಇವೆಲ್ಲದರ ನಡುವೆ ಈತ ತನ್ನ ಆಳದ ದಾಹ ಮರೆತಿರಲಿಲ್ಲ. ಪ್ರೀತಿಸಿದ, ಮದುವೆಯಾದ, ಸಂಸಾರಿಯಾದ. ಖಾಸಗಿ ಬದುಕಿನ ಸಂತೋಷ ಮತ್ತು ಮಿತಿ, ಸಾರ್ವಜನಿಕ ಸಾಧನೆಯ ಸಾರ್ಥಕ್ಯ ಮತ್ತು ದ್ವಂದ್ವ ಅವನಿಗೆ ಗೊತ್ತಾದವು.

ಹೇಗೆ ಗೊತ್ತಾದವು? ಕ್ರಿಯೆಯಲ್ಲಿ, ಸಾವಿನಲ್ಲಿ."

ಸಾಹಿತ್ಯ ಮತ್ತು ಕಲೆಗೆ ಜೀವಂತಿಕೆಯ ಸ್ಪರ್ಶ ಬರಬೇಕೆಂಬ ಲಂಕೇಶ್ ಯೋಚಿಸುವುದು- "ಕಲಾತ್ಮಕವಾಗಿ ಅಲೆದಾಡುವ ಪುಂಡ ಹುಡುಗರು ನಮ್ಮಲ್ಲೀಗ ಕಾದಂಬರಿ, ಕತೆ ಬರೆಯಬೇಕಾಗಿದೆ. ಅವರಿಂದ ಜೀವ ಬರಬೇಕಾಗಿದೆ, ಸಾಹಿತ್ಯಕ್ಕೆ, ರಾಜಕಾರಣಕ್ಕೆ, ಜಡ್ಡಾಗುತ್ತಿರುವ ಬದುಕಿಗೆ."

ನಮ್ಮ ಗ್ರಹಿಕೆಯ ನೆಲೆಗಳು ಯಾವುದರ ಬಗ್ಗೆಯಾದರೂ ಯಾಂತ್ರಿಕವಾಗಬಾರದೆಂದು, ಹೊರ ತೋರಿಕೆಗಿಂತ ಅದರ ಒಳ ದ್ರವ್ಯವೇ ಮುಖ್ಯವೆಂಬುದು ನನಗೆ ಸೈದ್ಧಾಂತಿಕವಾಗಿ ಗೊತ್ತಿತ್ತು. ಆದರೆ ವಾಸ್ತವದಲ್ಲಿ ಅದನ್ನು ಅಳವಡಿಸಿಕೊಳ್ಳುವುದು ಹೇಗೆಂದು ಮನವರಿಕೆ ಮಾಡಿಕೊಳ್ಳಲು 'ಮರೆಯುವ ಮುನ್ನ'ದ ಒಂದು ಟಿಪ್ಪಣಿ ನೆರವಾಗಿತ್ತು. ಆಗ ಕ್ರಾಂತಿಕಾರಿ ಮಾರ್ಕ್ಸ್‌ವಾದಿಯಾಗಿದ್ದ ನನಗೆ ಇದು ತುಂಬಾ ಪ್ರಾಯೋಗಿಕ ಪಾಠವಾಗಿತ್ತು ಎಂಬುದನ್ನು ಈಗಲೂ ನೆನೆದುಕೊಳ್ಳುತ್ತಿದ್ದೇನೆ. ಅದು ನಾಗಲೋಟಿಮಠರ ಬಗ್ಗೆ ಬರೆದ ಟಿಪ್ಪಣಿ. ಖ್ಯಾತ ವೈದ್ಯ ನಾಗಲೋಟಿಮಠರಿಗೆ ಆಡಳಿತ ಮಂಡಳಿಯಿಂದ ಅನ್ಯಾಯವಾಗಿತ್ತು, ಅದನ್ನು ಪ್ರತಿಭಟಿಸಲು ತಮ್ಮ ವರದಿಗಾರರಾಗಿದ್ದ ಮೋಹನ ನಾಗಮ್ಮನವರಿಗೆ ಲಂಕೇಶ್ ಹೇಳಿದಾಗ ಆತ ಬೇರೆ ಬೇರೆ ಕಾರಣಗಳನ್ನು ನೀಡಿ ತನ್ನ ನಿರಾಕರಣೆಯನ್ನು ಸೂಚಿಸಿದ ಪ್ರಸಂಗವಿದು.

ಆಗ ಲಂಕೇಶ್ ಹೇಳಿದ ಮಾತುಗಳು- "ಅಲ್ಲಯ್ಯ ಮೋಹನ್, 'ಪತ್ರಿಕೆ'ಗೆ ವಿಭೂತಿ ಕಟ್ಟು, ಶಿವಪೂಜೆ ಮುಂತಾದ್ದರ ವಿರುದ್ಧ ಇರುವ ಇಮೇಜ್ ಇದೆ ಎಂದು ತಿಳಿದು ಪತ್ರಿಕೆಯ ನಿಜವಾದ ವ್ಯಕ್ತಿತ್ವವನ್ನೇ ಮರೆಯುತ್ತಿದ್ದೀ, ಅಲ್ಲವೇ? ವಿಭೂತಿ ಕಟ್ಟು ಹೊಡೆದುಕೊಳ್ಳುವ ನಾಗಲೋಟಿಮಠ ವಂಚಕರೆ, ಭ್ರಷ್ಟರೆ? ಅವರಿಂದ ಯಾರಿಗಾದರೂ ಅನ್ಯಾಯವಾಗಿದೆಯೆ? ಅಥವಾ ಅವರಿಂದ ಒಂದು ಸಂಸ್ಥೆಗೆ, ಒಂದು ಜನತೆಗೆ ಒಳ್ಳೆಯದಾಗಿದೆಯೆ? ಇದು ಮುಖ್ಯ. ಸಮಾಜದ ಎಲ್ಲ ರಂಗದಲ್ಲಿರುವವರು ನನ್ನಂತೆ ನಿನ್ನಂತೆ ಕ್ರಾಂತಿಕಾರಿಗಳಾಗಿರಬೇಕೆಂದು ನಿರೀಕ್ಷಿಸುವುದು ತಪ್ಪು, ನಾಗಲೋಟಿಮಠ ಮೂಢನಂಬಿಕೆಯನ್ನು, ಶೋಷಣೆಯನ್ನು ಬೆಳೆಸುತ್ತಿದ್ದಾರೆಯೇ? ಇಲ್ಲ... ವಿಭೂತಿ ಧರಿಸುವ ನಾಗಲೋಟಿಮಠರ ಸಂಪ್ರದಾಯವಂತಿಕೆ ಜೆ.ಎಚ್. ಪಟೇಲರ ಸಮಾಜವಾದಕ್ಕಿಂತ ಒಳ್ಳೆಯದನ್ನು ಮಾಡಿದರೆ, ಪ್ರಾಮಾಣಿಕವಾಗಿ ಒಂದು ಸಂಸ್ಥೆ ಕಟ್ಟಿದರೆ, ಈ ಸಮಾಜದ ಅಸಹಾಯಕರ ನೆರವಿಗೆ ಬಂದರೆ... ಯಾವುದನ್ನು ಆರಿಸಿಕೊಳ್ಳುತ್ತೀ? ಎಲ್ಲರೂ ನನ್ನಂತೆ, ನಿನ್ನಂತೆ ಯಾಕಿರಬೇಕು?"

ಮ್ಯಾಕ್ಸಿಂ ಗಾರ್ಕಿಯು ಒಬ್ಬರೇ ಇದ್ದಾಗ 'ಮನುಷ್ಯನ ವರ್ತನೆ' ಎಂಬ ಟಿಪ್ಪಣಿ ಓದಿದಾಗ ಬರೆದದ್ದು "ಇದೆಲ್ಲ ನಿಮಗೆ ವಿಚಿತ್ರವಾಗಿ ಕಾಣುತ್ತದೆಯೇ? ನನಗಂತೂ ಹಾಗೆ ಕಾಣುವುದಿಲ್ಲ. ಗಾಂಧಿ ಒಬ್ಬರೇ ಇದ್ದಾಗ ತಮ್ಮ ಮೋಹಕ ನಗೆ ಅಭ್ಯಾಸ ಮಾಡಿಕೊಂಡಂತೆ, ಎದುರಾಳಿಗಳಿಗೆ ಬೆರಳು ತೋರಿಸಿ ಉತ್ತರಿಸಿದಂತೆ, ಗಂಭೀರವಾದರೂ ಎಗ್ಗಿಲ್ಲದ ನಡಿಗೆ, ಮಾತು, ನುಡಿಗಟ್ಟು ಇವೆಲ್ಲವುಗಳ ತಾಲೀಮು ನಡೆಸಿದಂತೆ ಕಲ್ಪಿಸಿಕೊಳ್ಳಬಲ್ಲೆ, ಯಾಕೆಂದರೆ ಇದರಲ್ಲಿ ಬಹುಪಾಲು ನಿಜ. ಮನುಷ್ಯ ಒಬ್ಬನೇ ಇದ್ದಾಗ... ತನ್ನ ಒಳಗಿನ ಜೀವಕ್ಕೆ, ಅನುಭವಕ್ಕೆ, ಕಾತರಗಳಿಗೆ ಹತ್ತಿರ ಇರುತ್ತಾನೆ. ಹೊರ ಜಗತ್ತಿನ ಸವಾಲುಗಳಿಗೆ ಆತ ತನ್ನ ಆಳದಿಂದ ಕಂಡುಕೊಳ್ಳುವ ಉತ್ತರ, ಪರಿಹಾರ ಈ ಏಕಾಂಗಿತನದಲ್ಲಿ ಸಾಧ್ಯವಾಗುತ್ತದೆ".

ನಿರ್ಮಮಕಾರವಾಗಿ ವಾಸ್ತವವನ್ನು ಹೀಗೆ ಗ್ರಹಿಸುವ ಮನೋಸ್ಥಿತಿ ನಮ್ಮೊಳಗೆ ರೂಪುಗೊಂಡರೆ ಮಹಾತ್ಮರು, ಮಹಾವೀರರು ಮುಂತಾದವುಗಳ ಬಗ್ಗೆ ಅವಾಸ್ತವಿಕ ಆರಾಧನೆ, ಭ್ರಮೆ ಹುಟ್ಟುವುದು ತಪ್ಪುತ್ತದೆ. ಸಾಧನೆಯಿಂದ ದೊಡ್ಡವರಾದವರು ಎಂಬುದನ್ನು ಮರೆಯದೆ ಅವರನ್ನೂ ನಮ್ಮಂತೆಯೇ ಮನುಷ್ಯರನ್ನಾಗಿ ನೋಡುವ ಆರೋಗ್ಯಪೂರ್ಣ ಧೋರಣೆ ರೂಪುಗೊಳ್ಳುತ್ತದೆ.

ಹತ್ತು ಹನ್ನೆರಡು ಸಾಲುಗಳಷ್ಟು ಪುಟ್ಟದಾಗಿ, ಹೆಚ್ಚೆಂದರೆ ಮೂವತ್ತು ನಲವತ್ತು ಸಾಲುಗಳಷ್ಟು ಮಾತ್ರ ದೀರ್ಘವಾಗಿರುವ 'ಮರೆಯುವ ಮುನ್ನ' ಬರಹಗಳು ನಮಗೆ ನೆರೆ- ಹೊರೆ, ದೇಶ-ವಿದೇಶಗಳ ಆಸಕ್ತಿದಾಯಕ ಅಂಶಗಳ ಕುರಿತು ಹೃದಯಸ್ಪರ್ಶಿ ವಿವರಗಳನ್ನು ನೀಡುತ್ತವೆ. ಇವುಗಳ ಜೊತೆಜೊತೆಯಲ್ಲೇ ವಿಶೇಷವಾಗಿ ಬೇರೆಯವರ ಗಮನವನ್ನು ಅಷ್ಟಾಗಿ ಸೆಳೆಯದ, ಆದರೆ ನಮ್ಮ ಅಂತರಾಳಕ್ಕೆ ತಾಕುವಂತಹ ವರ್ತಮಾನ ಬದುಕಿನ ಹಲವು ಸಂಗತಿಗಳನ್ನು ಇವು ಕಟ್ಟಿಕೊಡುತ್ತವೆ.

ಲಂಕೇಶರು ತಮ್ಮ ಓದುಗರಿಗೆ ಏನೇನನ್ನು ಹೇಳ ಬಯಸುತ್ತಿದ್ದರೆಂಬುದನ್ನು ಈ ಬರಹಗಳ ಹರಹು ವಿವರಿಸುತ್ತದೆ. ಕಕ್ಕುಲಾತಿಯುಳ್ಳ ಮನುಷ್ಯನಾಗಿ, ಕಾಳಜಿಯುಳ್ಳ ಲೇಖಕರಾಗಿ, ಒಂದು ಸಾಮಾಜಿಕ ಸಂದರ್ಭದ ಸಾಕ್ಷಿಪ್ರಜ್ಞೆಯಾಗಿ ಅವರು ತಮ್ಮ ಓದುಗರೊಂದಿಗೆ ಯಾವ ಬಗೆಯ ಸಂವಾದ ನಡೆಸಲು ಉತ್ಸುಕರಾಗಿದ್ದರೆಂಬುದನ್ನೂ ಇವು ನಿದರ್ಶಿಸುತ್ತಿವೆ. ಬೆಚ್ಚನೆ ಜೀವನ ಪ್ರೀತಿ, ಬದುಕನ್ನು ಕುರಿತ ವಿವೇಕಯುತ ನಿಲುವುಗಳು, ವ್ಯವಸ್ಥೆಯ ಕುರಿತ ಗ್ರಹಿಕೆ ಮತ್ತು ಅಸಮರ್ಪಕತೆಯ ಕುರಿತ ಸಿಟ್ಟು, ಇತರರನ್ನು ಮೆಚ್ಚಿಸಲಿಕ್ಕಾಗಿ ಸುಳ್ಳು ಸುಳ್ಳೇ ಹೊಗಳಿಕೆಯನ್ನು ಬಳಸದ ನೈತಿಕ ನಿಷ್ಠುರ, ಹೊಗಳುವವರು ಸಿಕ್ಕಾಗ ಉಂಟಾಗುವ ಸಹಜ ಉಲ್ಲಾಸ ಹಾಗೂ ಇದು ತಂತ್ರಗಾರಿಕೆಯ ಭಾಗವಾಗಿರಲಾರದೇ ಎಂಬ ಆತ್ಮನಿರೀಕ್ಷಣೆಯ ಎಚ್ಚರ ಮುಂತಾದ ಅತ್ಯಂತ ಸಹಜವಾದ, ಸಂಕೀರ್ಣವಾದ ಹಲವು ಅಂಶಗಳನ್ನು ಇಲ್ಲಿನ ಬರಹಗಳು ಬಿಂಬಿಸುತ್ತಾ, ಲಂಕೇಶರ ವ್ಯಕ್ತಿತ್ವ ಮತ್ತು ಬರವಣಿಗೆ ಒಟ್ಟಾರೆ ಸಾಮಾಜಿಕ ಸಂದರ್ಭಕ್ಕೆ ಕೊಟ್ಟ ಕೊಡುಗೆಯನ್ನು ಸೂಚಿಸುತ್ತವೆ.

ಇವು ಮನಸ್ಸನ್ನು ರೂಪಿಸುವ ಬರಹಗಳು. ಮನಸ್ಸಿನ ಒಳಹೊಕ್ಕು ನಮ್ಮನ್ನು ನಾವೇ ನೋಡಿಕೊಳ್ಳಲು ಕಲಿಸುವ ಬರಹಗಳು. ಹುಸಿ ಭಾವುಕತೆಯನ್ನು, ಅದೇ ಸಂದರ್ಭದಲ್ಲಿ ಭಾವನೆಗಳಿಲ್ಲದ ನಿರ್ವಿಕಾರ ಶಠತ್ವವನ್ನು ವಿರೋಧಿಸುವ ಬರಹಗಳು. ಮಹಾತ್ಮರು ಕೂಡ ಹಲವು ವಿಷಯಗಳಲ್ಲಿ ಹುಲುಮಾನವರೆಂಬುದನ್ನು, ಹಾಗೆಯೇ ಹುಲುಮಾನವರು ಕೂಡ ಹಲವು ವಿಷಯಗಳಲ್ಲಿ ಗಮನಕ್ಕೆ ಬಾರದ ರೀತಿಯಲ್ಲಿರುವ ಮಹಾತ್ಮರೆಂಬುದನ್ನು ಪರಿಗಣಿಸುವ ಈ ಬಗೆಯ ಬರಹಗಳ ಬಗ್ಗೆ ನನಗೆ ಇರುವ ಮೆಚ್ಚುಗೆಯನ್ನು ಸೂಚಿಸುವಾಗ ಸ್ವಲ್ಪಮಟ್ಟಿಗೆ ಉತ್ಕಂಠಿತ ಮಾತುಗಳನ್ನು ಬಳಸಿರಬಹುದೇನೋ ಎಂಬ ಅನುಮಾನವಿದೆ. ಲಂಕೇಶರ ಬರವಣಿಗೆಯಿಂದ ನಾನು ಪಡೆದ ರಂಜನೆ, ಬೋಧನೆ ಮತ್ತು ಪ್ರಚೋದನೆಗಳ ಹಿನ್ನೆಲೆಯಲ್ಲಿ ಹೀಗಾಗುವುದು ಸಹಜ. ಅಲ್ಲದೆ 'ಮರೆಯುವ ಮುನ್ನ' ಅಂಕಣದ ಈ ಪುಟ್ಟ ಪುಟ್ಟ ಬರಹಗಳ ಬಗ್ಗೆ ಸ್ವಲ್ಪ ದೀರ್ಘವಾಗಿಯೇ ಬರೆದಿದ್ದೇನೆ. ಯಾಕೆಂದರೆ ಮುಂಜಾನೆಯಲ್ಲಿ ಹಾದಿಬದಿಯ ಹುಲ್ಲಿನ ಎಸಳ ಮೇಲೆ ಕೂತ ಪುಟ್ಟ ಇಬ್ಬನಿ ಹನಿಯಲ್ಲಿ ಇಡೀ ಸೂರ್ಯಗೋಳವೆ ಪ್ರತಿಫಲಿತಗೊಳ್ಳುವುದನ್ನು ನೋಡಿ ಅಚ್ಚರಿ ಪಡುವವರಲ್ಲೊಬ್ಬ ನಾನು.

ಇಬ್ಬನಿ ಹನಿಗಳ ಪ್ರತಿಬಿಂಬವನ್ನು ಎಲ್ಲರಿಗೆ ತೋರಿಸಲು ಚಪ್ಪಾಳೆ ತಟ್ಟಿ ಸಂಭ್ರಮಿಸುವ ಪುಟ್ಟ ಹುಡುಗಿಯ ಹಾಗೆ, ಹೊಸ ತಲೆಮಾರಿನವರಿಗೂ ಈ ಬರಹಗಳು ತಲುಪಲೆಂದು 'ಮರೆಯುವ ಮುನ್ನ' ಕೃತಿ ಹೊರತರುತ್ತಿರುವ ಗೌರಿ ಮತ್ತವರ ಸಹೋದ್ಯೋಗಿಗಳ ಬಗ್ಗೆ ನನ್ನಲ್ಲಿ ಹುಟ್ಟಿದ ಮೆಚ್ಚುಗೆಯನ್ನು ಈ ಮಾತುಗಳು ಹೇಳುತ್ತಿವೆ ಅಂದುಕೊಂಡಿದ್ದೇನೆ.

● ಡಾ. ಬಂಜಗೆರೆ ಜಯಪ್ರಕಾಶ್

ರೈತರ ಮೇಲೆ ಜಪ್ತಿ ಎಂಬ ಬ್ರಹ್ಮಾಸ್ತ್ರ

982ನೇ ಇಸ್ವಿ. ಇಡೀ ರಾಜ್ಯದ ರೈತರೆಲ್ಲ ರೈತ ...ದ ಅಡಿ ಸಂಘಟಿತರಾಗಿ ಗುಂಡೂರಾಯರ ...ದ ರೈತ ವಿರೋಧಿ ನೀತಿಗಳನ್ನು ಒಗ್ಗಟ್ಟಿನಿಂದ ...ಧಿಸಿ ಜೈಲು ಸೇರಿದರೂ ಅಂಜದೆ, ಆಸ್ತಿ ...ಪ್ತಿಯಾದರೂ ಅಳುಕದೆ ಹೋರಾಟ ನಡೆಸುತ್ತಿದ್ದ ...ಜ್. ರೈತ ಸಂಘದ ನೇತೃತ್ವದಲ್ಲಿ ಅದಾಗಲೇ ...ದ ನವಲುಗುಂದ ಗೋಲಿಬಾರ್‌ನಲ್ಲಿ ಮಡಿದ ... ಹೆಸರಿನಲ್ಲಿ ವೀರಗಲ್ಲು ಸ್ಥಾಪಿಸಿ ಆ ಮೂಲಕ ಕರ್ನಾಟಕದಲ್ಲೂ ರೈತ ಚಳವಳಿಯನ್ನು ...ಳಿಸಿದ್ದೆವು. ಇನ್ನೊಂದು ಕಡೆ ರೈತ ಸಂಘದ ...ಬತ್ತು ಬೇಡಿಕೆಗಳಲ್ಲಿ ಹನ್ನೆರಡು ಬೇಡಿಕೆಗಳನ್ನು ...ಸುತ್ತೇವೆಂದು ಭರವಸೆ ನೀಡಿದ್ದ ಗುಂಡೂ... ಸರ್ಕಾರ ಒಂದೆರಡು ಬೇಡಿಕೆಗಳನ್ನಷ್ಟೇ ...ಸುವ ಮೂಲಕ ಕಣ್ಣೊರೆಸುವ ತಂತ್ರ ನಡೆಸಿತ್ತು. ...ಲ್ಲ ಬಹಳ ಮುಖ್ಯ ...ಕೃಷಿಗೆ ಕೊಟ್ಟ ಸಹಕಾರಿ ... ವಾಣಿಜ್ಯ ಬ್ಯಾಂಕ್‌ಗಳ ...ನ್ನು ಮನ್ನಾ ಮಾಡುವ ...ಭರವಸೆ ನೀಡಿದ್ದ ಸರ್ಕಾರ ... ಕಟ್ಟದ ರೈತರ ಆಸ್ತಿ ...ಜಪ್ತಿ, ಹರಾಜಿಗೆ ಮುಕ್ತ ...ನಗಿ ನೀಡಿತು. ರೈತ ... ರೈತ ಸಂಘದಡಿಯಲ್ಲಿ ...ಮದ ವಿರುದ್ಧ ತಿರುಗಿ ... ಅದೇನೇ ಆದರೂ ...ಕಟ್ಟಬಾರದು, ಜೊತೆಗೆ ...ಬನ್ನಾ ಇತ್ಯರ್ಥವಾಗು ...ಗೆ ಕಂದಾಯವನ್ನೂ ...ರದು ಎಂದು ನಿಶ್ಚಯಿಸಿ.

...ದಾಗ ರೈತಸಂಘ ಶಕ್ತಿ ...ವಾಗಿ ಬೆಳೆದು ಸರ್ಕಾರ ...ಎದುರು ಹಾಕಿಕೊಳ್ಳಲು ... ಹಿಂದೆಮುಂದೆ ...ದ ಪರಿಸ್ಥಿತಿ ಉದ್ಭವ ...ತೋ ಆಗ ರೈತ ಚಳ... ದಮನಕ್ಕೆ ಸರ್ಕಾರ ...ಕಸರತ್ತು ಮಾಡತೊಡಗಿತು. ರೈತ ಸಂಘದ ...ಬೇರಿರುವುದು ಶಿವಮೊಗ್ಗ ಜಿಲ್ಲೆಯಲ್ಲಾದ್ದರಿಂದ ...ರೈತ ಸಂಘದ ಹುಟ್ಟಡಗಿಸಿದರೆ ಮತ್ತೆಲ್ಲೂ ... ಧ್ವನಿ ಕೇಳಿಬರುವ ಪ್ರಶ್ನೆಯೇ ಇಲ್ಲ ಎಂದು ... ನಿಶ್ಚಯಿಸಿತು. ಅದರಲ್ಲೂ ಗುಂಡೂರಾಯರ ...ರದಲ್ಲಿ ಸಚಿವರಾಗಿದ್ದ ಕಾಗೋಡು ತಿಮ್ಮಪ್ಪನವರು ...ಘದ ಹುಟ್ಟಡಗಿಸಲು ಶತಾಯಗತಾಯ ಪ್ರಯತ್ನ ...ಡಗಿದರು. ತಾವು ಪ್ರತಿನಿಧಿಸುತ್ತಿದ್ದ ಕ್ಷೇತ್ರದಲ್ಲಿ ...ಪಕ್ಷಕ್ಕಿಂತ ರೈತ ಸಂಘ ಗಟ್ಟಿಯಾಗುತ್ತಿರುವುದು ...ದ ಸಹಿಸಲಾಗಲಿಲ್ಲ. ಸಾಲ ವಸೂಲಿಗೆ ತೀವ್ರ ... ತೆಗೆದುಕೊಂಡರೆ ರೈತರು ಹೆದರಿ ತಮಗೆ ...ಗುತ್ತಾರೆ ಎಂದು ಭಾವಿಸಿದ ನಮ್ಮ ಈ ಹಳೆಯ ...ಸವಾದಿ ಜೊತೆಗಾರರು ಇಡೀ ಶಿವಮೊಗ್ಗ ... ರೈತರ ಸಾಲ ವಸೂಲಿ ಮಾಡುವುದನ್ನು ... ಗುತ್ತಿಗೆಗೆ ಹಿಡಿದವರಂತೆ ಬೇರೆ ಸಚಿವರು, ...ದ್ದರೂ ಅವರನ್ನೆಲ್ಲ ನಿರ್ಲಕ್ಷಿಸಿ ಕಾರ್ಯಕ್ರಮ ...ಸರು. ಈ ಸಂಬಂಧ ರೈತರ ಪರವಾಗಿದ್ದ ...ರು ಅಧಿಕಾರಿಗಳ ವರ್ಗಾವಣೆಯು ನಡೆಯಿತು. ...ರಿ ಇಷ್ಟಿಷ್ಟು ಸಾಲ ವಸೂಲಿ ಮಾಡಲೇಬೇಕು, ...ಸ್ದರೆ ನೌಕರಿಗೆ ಸಂಚಕಾರ ತರಿಸಿಕೊಳ್ಳುತ್ತೀರಿ ಎಂದು ಸಚಿವರು ಅಧಿಕಾರಿಗಳಿಗೆ ಬೆದರಿಕೆ ಹಾಕುವ ಮಟ್ಟಕ್ಕೂ ತಲುಪಿತು.

ಅಧಿಕಾರಿಗಳು ಸಚಿವರ ಒತ್ತಡಕ್ಕೆ ಮಣಿದು ಕಾರ್ಯಗತರಾದರು. ಒಂಟಿ ಮನೆಗಳಿರುವ ತೀರ್ಥಹಳ್ಳಿ ತಾಲ್ಲೂಕಿನ ಕೆಂದಾಳುಬೈಲು ಸೂರ್ಯನಾರಾಯಣ ರಾವ್, ನಾಗಭೂಷಣ ಭಟ್ಟ ಮತ್ತು ತೀರ್ಥಮತ್ತೂರಿನ ಲೋಕಪ್ಪ ಮತ್ತಿತರರ ಮನೆಗಳು ಮೂರು ಮೂರು ಸರ್ತಿ ಜಪ್ತಿಗೊಳಗಾದವು. ಪೊಲೀಸರಿಗೆ ಹೆದರಿ ರೈತರು ಬಿದ್ರು ಬದ್ದು ಗಿಡಾ ಬೀಳಲಿಕ್ಕೆ ಶುರು ಮಾಡಿದರು. ಮಾನ ಮರ್ಯಾದೆಗೆ ಅಂಜಿ ರೈತ ಮಹಿಳೆಯರು ತವರು ಮನೆ ಸೇರಿದರು. ಅಧಿಕಾರಿಗಳು ಸಚಿವರ ಕುಮ್ಮಕ್ಕಿನಿಂದ ಯಾವ ಪರಿ ಕೊಬ್ಬಿದ್ದರೆಂದರೆ ಜಪ್ತಿ ನೆವದಲ್ಲಿ ಸ್ನಾನಕ್ಕೆ ಹೋಗುವಾಗ ಬಿಚ್ಚಿಟ್ಟ ರೈತ ಮಹಿಳೆಯರ ಬೆಂಡೋಲೆಗಳನ್ನು ಲಪಟಾಯಿಸಲಾಯಿತು. ಈ ವಿಚಾರದಲ್ಲಿ ಹೊನ್ನೇತಾಳು ಗ್ರಾಮದಲ್ಲಿ ರೈತರಿಗೂ ಪಿಎಲ್‌ಡಿ ಬ್ಯಾಂಕ್ ಅಧಿಕಾರಿಗಳಿಗೂ ಹೊಡೆದಾಟ ನಡೆಯಿತು.

ಹಳ್ಳಿಹಳ್ಳಿಗಳಲ್ಲಿ ರೈತರ ಮನೆ ಜಪ್ತಿ ಕುರಿತ ಸುದ್ದಿಗಳು ವಿಕಾರವಾಗಿ ಪ್ರಚಾರವಾಗುತ್ತಿತ್ತು. ಭಯಗ್ರಸ್ತರಾದ ರೈತಾಪಿ ವರ್ಗ ರೈತ ಸಂಘದ ಮುಖಂಡರನ್ನು ಏನು ಮಾಡುವುದೆಂದು ಕೇಳತೊಡಗಿದರು. ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲೂ ವಸೂಲಿ ಮಾಡಲು ಬರುವ ಅಧಿಕಾರಿಗಳಿಗೆ ರೈತರಿಂದ ಪ್ರತಿಭಟನೆ ನಡೆಯುತ್ತಲೇ ಇತ್ತು. ಕೋಡ್ಲು ವೆಂಕಟೇಶ ಮತ್ತು ಬಬ್ಬಿರಿ ಗಿರಿಯಪ್ಪ ಗೌಡ್ರು, ರೈತರ ಜಪ್ತಿಯಾದ ವಸ್ತುಗಳನ್ನು ಮರುಜಪ್ತಿ ಮಾಡಿ ಪೊಲೀಸರಿಂದ ದರೋಡೆ ಕೇಸು ಹಾಕಿಸಿಕೊಂಡು ತೀರ್ಥಹಳ್ಳಿಯ ಪೊಲೀಸ್ ಲಾಕಪ್ ಸೇರಿದರು.

ಈ ಮಧ್ಯೆ ರಾಜ್ಯ ರೈತ ಸಂಘದ ವತಿಯಿಂದ ನಂಜುಂಡಸ್ವಾಮಿಯವರ ಸಲಹೆ ಮೇರೆಗೆ ರೈತರ ಮನೆ ಜಪ್ತಿ ತಡೆಯಾಜ್ಞೆಗಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಯಿತು. ವಕೀಲರಾದ ಶಾಂತರಾಜ್, ರವಿವರ್ಮಕುಮಾರ್ ಮತ್ತು ಎಸ್. ಆರ್. ನಾಯಕ್ ಇವರ ಪ್ರಯತ್ನದಿಂದ ಹೈಕೋರ್ಟ್‌ನಿಂದ ಇಂಡಿವಿಜಿಯಲ್ ಸ್ಟೇ ಸಿಕ್ಕಿತು. ಅದು ಸಾಲದೆಂದು ಮತ್ತೆ ಪ್ರಯತ್ನಿಸಿ ಡಿವಿಜನಲ್ ಬೆಂಚಿನಲ್ಲಿ ಜನರಲ್ ಸ್ಟೇ ಪಡೆಯುವುದರಲ್ಲಿ ಯಶಸ್ವಿಯಾದೆವು. ಇದು ರೈತ ಸಮುದಾಯದಲ್ಲಿ ಹೊಸ ಆಶಾಕಿರಣವನ್ನು ಮೂಡಿಸಿತು. ಕಾನೂನು ಯಾವಾಗ ತಮ್ಮ ಪರವಾಗಿದೆ ಎಂದು ರೈತರಿಗೆ ಖಾತ್ರಿಯಾಯಿತೋ ಆಗ ಅವರು ಸಾಲ ವಸೂಲಿಗೆ ಬಂದ ಅಧಿಕಾರಿಗಳನ್ನು ವಾಪಸ್ ಕಳುಹಿಸಲು ಪ್ರಾರಂಭಿಸಿದರು. ಆದರೆ ಕಾಗೋಡರಿಗೆ ರೈತ ಸಂಘದವರು ತಮಗೆ ಚಾಲೆಂಜ್ ಮಾಡುತಿದ್ದಾರೆ ಎನ್ನಿಸಿತು. ಅಧಿಕಾರಿಗಳಿಗೆ ಪೊಲೀಸ್ ಬಲವನ್ನು ಬಳಸಿಕೊಂಡು ಹಳ್ಳಿಹಳ್ಳಿಗೂ ಸಾಲ ವಸೂಲಿಗೆ ನುಗ್ಗುವಂತೆ ಪ್ರಚೋದಿಸಿದರು.

ಅಧಿಕಾರಿಗಳು ಪೊಲೀಸ್ ವ್ಯಾನು, ಜೀಪುಗಳ ರಕ್ಷಣೆಯಲ್ಲಿ ತೆರಿಗೆ ಬಾಕಿ ವಸೂಲಿಗೆ ಹಳ್ಳಿಗಳ ಮೇಲೆ ದಾಳಿ ಮಾಡತೊಡಗಿದರು. ಹಳ್ಳಿಗರೂ ಒಗ್ಗಟ್ಟಾಗಿ ಪೊಲೀಸರ ಲಾಠಿಗೂ ಮಣಿಯದೆ ಅಧಿಕಾರಿಗಳು ಊರಿಗೆ ಪ್ರವೇಶಿಸದಂತೆ ತಡೆಯೊಡ್ಡತೊಡಗಿದರು. ಈ ಸುದ್ದಿ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ, ಇನ್ನೊಂದರಿಂದ ಮತ್ತೊಂದು ಹಳ್ಳಿಗೆ ಹಬ್ಬತೊಡಗಿತು. ಪ್ರತಿ ಹಳ್ಳಿಯಲ್ಲೂ ರೈತರು ವಸೂಲಿಗೆ ಬಂದ ಅಧಿಕಾರಿಗಳಿಗೆ ಛೀಮಾರಿ ಹಾಕಿ ಕಳುಹಿಸುವ ಕೆಲಸ ಮಾಮೂಲಾಯ್ತು. ರೈತರು ಮತ್ತು ರೈತ ಮಹಿಳೆಯರ ನಮನಮೂನೆಯ ಮಾತಿನ ಬಾಣಕ್ಕೆ ಸಿಲುಕಿ ಅಧಿಕಾರಿಗಳಿರಲಿ ವಸೂಲಿಗೆ ಬರಲು ಪೊಲೀಸರೂ ಹೆದರತೊಡಗಿದರು.

ತೀರ್ಥಹಳ್ಳಿಯ ರಂಜದಕಟ್ಟೆ ಕೈಮರ ಗ್ರಾಮಕ್ಕೆ ಜಪ್ತಿಗಾಗಿ ಡಿಸಿಸಿ ಬ್ಯಾಂಕ್ ಅಧಿಕಾರಿಗಳು ದಾಳಿ ಮಾಡುತ್ತಾರೆ ಎಂಬ ಸುದ್ದಿ ತಿಳಿಯಿತು. ನಾನು, ಕೋಡ್ಲು ಗಿರಿಯಪ್ಪ ಗೌಡ್ರು ಮತ್ತಿತರರು ಊರಿನ ಹಿರಿಯರಾದ ಕಟ್ಟಪ್ಪನವರ ಮುಖಂಡತ್ವದಲ್ಲಿ ರಾತ್ರೋರಾತ್ರಿ ಲಾಟೀನು ಬೆಳಕಿನಲ್ಲಿ ಕಾಡಿನ ಮನೆ ಮನೆಗೆ ಹೋಗಿ ವಿಷಯ ತಿಳಿಸಿದೆವು. ಬೆಳಿಗ್ಗೆ ಹೆಂಗಸರು ಗಂಡಸರು ಮಕ್ಕಳಾದಿಯಾಗಿ ಎಲ್ಲರೂ ಒಂದೆಡೆ ಸೇರಬೇಕೆಂದು ಹೇಳಿ ಮರುದಿನ ಬೆಳಿಗ್ಗೆಯೆ ಊರ ದಾರಿಯಲ್ಲಿ ಗಾಂಧಿ ಫೋಟೋ ಹಿಡಿದು ನಿಂತೆವು. ಆಗ ಜಪ್ತಿಗಾಗಿ ಪೊಲೀಸರೊಂದಿಗೆ ಅಧಿಕಾರಿಗಳ ಸೈನ್ಯ ಬಂದಾಗ ನಾವೆಲ್ಲ ಅದನ್ನು ತಡೆದೆವು. ಅಧಿಕಾರಿಗಳೊಂದಿಗೆ ಬಂದಿದ್ದ ಪೊಲೀಸ್ ಅಧಿಕಾರಿ ಭೀಮಣ್ಣನವರ ಕಾರಿಗೆ ಅಡ್ಡ ನಿಂತು ಹೈಕೋರ್ಟಿನ ಜಪ್ತಿ ತಡೆಯಾಜ್ಞೆ ಎತ್ತಿ ಹಿಡಿದು "ಇದರನ್ವಯ ಈ ದರೋಡೆಕೋರರಿಂದ ನಮ್ಮೂರ ರೈತರನ್ನು ರಕ್ಷಿಸಿ'' ಎಂದು ಪಟ್ಟು ಹಿಡಿದೆವು. ಭೀಮಣ್ಣ ಸಮಾಧಾನದ ಮಾತುಗಳನ್ನು ಹೇಳಿದರೂ ನಾವ್ಯಾರು ಮಣಿಯಲಿಲ್ಲ. ಊರೊಳಗೆ ಹೋಗಲು ಅವರಿಗೆ ಅವಕಾಶವನ್ನು ನೀಡಲಿಲ್ಲ. ಬರಿಗೈಯಲ್ಲಿ ಅಧಿಕಾರಿಗಳು ವಾಪಸಾಗಬೇಕಾಯಿತು. ಕಾಗೋಡು ತಿಮ್ಮಪ್ಪರ ಬೆದರಿಕೆ ಇಲ್ಲದಿದ್ದರೆ ಖಂಡಿತವಾಗಿಯೂ ತಾವು ರೈತರ ಮನೆ ಜಪ್ತಿ ಮಾಡುವ ಕ್ರಮಕ್ಕೆ ಮುಂದಾಗುತ್ತಿರಲಿಲ್ಲ, ಆದರೆ ತಾವು ಹೀಗೆ ಹೇಳಿದೆವೆಂದು ಪತ್ರಿಕೆಯಲ್ಲಿ ಬರೆಸಬೇಡಿ ಎಂದು ಅಧಿಕಾರಿಗಳು ಗೋಳಾಡತೊಡಗಿದರು.

ರೈತರ ತೀವ್ರ ಪ್ರತಿರೋಧದ ಮಧ್ಯೆಯೂ ಜಪ್ತಿ ಕಾರ್ಯ ತೀವ್ರವಾಯಿತು. ಹಲವಾರು ರೈತರ ಸ್ಕೂಟರ್, ಸೈಕಲ್, ಪಾತ್ರೆ, ಪಗಡಗಳು, ಮಂಚ, ಕುರ್ಚಿ, ಮೇಜು ಜಪ್ತಿಯಾದವು. ಹೆಚ್ಚು ಜಪ್ತಿ ಮಾಡಿದ ಅಧಿಕಾರಿಗಳ ಕಿರೀಟಕ್ಕೆ ಸರ್ಕಾರ ಪ್ರಶಸ್ತಿ, ಪ್ರಮೋಷನ್ - ಹೀಗೆ ಹಲವು ರೂಪದಲ್ಲಿ ಗರಿ ಇಡಲು ತೊಡಗಿತ್ತು. ಇದರಿಂದ ಅಧಿಕಾರಿಗಳಿಗೆ ತಾವು ಮಾಡಿದ್ದೆ ಆಟವಾಯಿತು. ರೈತಾಪಿ ಜನ ಕಂಗಾಲಾದರು. ರೈತ ಮುಖಂಡರು ಎ.ಸಿ, ಡಿ.ಸಿ, ತಹಶೀಲ್ದಾರ್ ಎಲ್ಲರನ್ನು ಕಂಡಾಯ್ತು. ಎಲ್ಲರೂ ತಮ್ಮ ಇಲಾಖಾ ಮುಖ್ಯಸ್ಥರ ಮತ್ತು ಸರ್ಕಾರದ ಆದೇಶದಂತೆ ನಡೆಯುತ್ತೇವೆ ಹೊರತು ಹೈಕೋರ್ಟ್ ಆಜ್ಞೆಯಂತಲ್ಲ ಎಂದು ಸ್ಪಷ್ಟವಾಗಿ ಹೇಳತೊಡಗಿದರು.



ಕಾಡ ತೊರೆಯ ಜಾಡು 14

ಕಡಿದಾಳು ಶಾಮಣ್ಣ



ಅಕ್ಷರ ರೂಪ: ಅಕ್ಷತಾ ಕೆ.

ನಮ್ಮ ಅಧ್ಯಕ್ಷರಾದ ರುದ್ರಪ್ಪನವರು ಈ ಸಂಬಂಧ ಕಾಗೋಡು ತಿಮ್ಮಪ್ಪನವರನ್ನು ಕರೆಸಿಕೊಂಡು ರೈತರ ಬಗ್ಗೆ, ರೈತ ಹೋರಾಟದ ಬಗ್ಗೆ ವಿನಾಕಾರಣ ದ್ವೇಷ ಸಾಧಿಸದಂತೆ, ದಮನ ನೀತಿಯನ್ನು ಮುಂದುವರೆಸದಂತೆ ಬುದ್ಧಿ ಮಾತು ಹೇಳಿದರೆ, ಕಾಗೋಡರು ಅದಕ್ಕೆ ಪ್ರತಿಯಾಗಿ 'ರೈತ ಸಂಘ ರುದ್ರಪ್ಪನವರ ಕೈಯಲ್ಲಿಲ್ಲ, ನಕ್ಸಲೈಟರ ಕೈಯಲ್ಲಿದೆ' ಎಂದು ಪತ್ರಿಕಾ ಹೇಳಿಕೆ ಕೊಡಲು ಪ್ರಾರಂಭಿಸಿದರು. ಅಂದು, ಇಂದು, ಯಾವತ್ತೂ ಅಷ್ಟೆ. ಯಾರದ್ದೇ ಸರ್ಕಾರ ಇದ್ದರೂ ಜನಪರವಾಗಿ ಹೋರಾಟ ಮಾಡುವವರನ್ನು, ಸತ್ಯ ಹೇಳುವವರನ್ನು ಗಲ್ಲಿಗೆ ಹಾಕಲಿಕ್ಕೆ ಗಡಿಪಾರು ಮಾಡಲಿಕ್ಕೆ ನೋಡ್ತದೆ. ಕಳೆದ ವರ್ಷ ನನ್ನ ಹೆಸರು ನಕ್ಸಲೈಟ್ ಬೆಂಬಲಿಗರ ಪಟ್ಟಿಯಲ್ಲಿ ಬಂದಾಗ ನನಗೆ ಇದೇ ನೆನಪಾಯಿತು. ಅವತ್ತು ಕಾಗೋಡು ತಿಮ್ಮಪ್ಪನವರು ಮಾಡಿದ ಆರೋಪವೇ ಇವತ್ತು ಮುಂದುವರಿದಿದೆ ಎನ್ನಿಸಿತು.

ಜಪ್ತಿ ನಿಲ್ಲದಿದ್ದಾಗ ರೈತ ಸಂಘ ಪಿಕೆಟಿಂಗ್ ಮಾಡಲು ಕರೆ ಕೊಟ್ಟಿತು. ರೈತರು ಬೀದಿಗಿಳಿದು ಹೋರಾಟ ಮಾಡತೊಡಗಿದರು. ಸರ್ಕಾರ ರೈತರನ್ನು ಜೈಲಿಗೆ ತಳ್ಳಲು ಕಂಕಣಬದ್ಧವಾಯಿತು. ಶಿವಮೊಗ್ಗ ಜಿಲ್ಲಾ ರೈತ ಸಂಘದ ನಾಯಕರ ಮನೆಯನ್ನೇ ಜಪ್ತಿ ಮಾಡಿದರೆ ಉಳಿದವರು ಹೆದರುತ್ತಾರೆಂದು ರೈತ ಸಂಘದ ಜಿಲ್ಲಾಧ್ಯಕ್ಷ ನಾಗರಾಜ್ ಅವರ ಮನೆಯನ್ನು ಬರೇ ಹೆಣ್ಣುಮಕ್ಕಳಿದ್ದ ಸಂದರ್ಭದಲ್ಲಿ ಅಕ್ರಮವಾಗಿ ಮನೆ ಬಾಗಿಲು ಮುರಿದು ಜಪ್ತಿ ಮಾಡಿದರು. ಈ ಹಂತದಲ್ಲಿ ಪೊಲೀಸರಿಗೆ ಸಚಿವರು ಮತ್ತು ಸರ್ಕಾರ ಕೊಟ್ಟ ಸಲಿಗೆ ಯಾವ ಹಂತ ತಲುಪಿತೆಂದರೆ ಪೊಲೀಸರೇ ದೇಶ ಉದ್ಧಾರ ಮಾಡುವವರಂತೆ ಸಾಲ ವಸೂಲಿಯ ಬಗ್ಗೆ ಸರ್ಕಾರ ನಡೆಸುವ ಬಗ್ಗೆ ದೊಡ್ಡ ದೊಡ್ಡ ಮಾತಾಡಲು ತೊಡಗಿದ್ದರು. "ನಮ್ಮ ದೇಶದ ರೈತರ ಗೋಧಿ ಯಾರಿಗೆ ಬೇಕು? ಅಮೆರಿಕದಿಂದ ಗೋಧಿ ತರಿಸಿ ತಿಂತೀವಿ", "ಹೋಗ್ರೋ ಜೈಲಿಗೆ ಸೂಳೆ ಮಕ್ಕಳಾ", "ನಿಮ್ಮ ಹೆಂಡತಿಯನ್ನು ಯಾರಿಗೆ ಕೊಟ್ಟು ಬಂದ್ರೊ?" ಇಂಥ ವಿವೇಕಶೂನ್ಯ ಮಾತುಗಳಿಂದ ರೈತ ಸತ್ಯಾಗ್ರಹಿಗಳನ್ನು ತಿವಿಯಲು ತೊಡಗಿದರು. ರೈತರನ್ನು ಜೈಲಿಗೆ ತುಂಬಿ ಅವರ ಮೇಲೆ ಲಾಠಿ ಪ್ರಹಾರ ಮುಂದುವರೆಸಿದರು. ಇಡೀ ರೈತ ಸಮೂಹ ಸರ್ಕಾರದ ಬಗ್ಗೆ, ಅಧಿಕಾರಿಗಳ ಬಗ್ಗೆ ರೊಚ್ಚಿಗೆದ್ದಿತು.

(ಮುಂದುವರೆಯುವುದು)

...ಅಂಕುರ ವಿಟ್ಠೊಡಂ ನೆನೆವುದೆನ್ನ ಮನ ಬೆಟಗೇರಿ ಕವಿಯಂ

...ರು ಅಂದರೇನೆಂದು ನಿಮಗೂ ಗೊತ್ತಿರುತ್ತದೆ ಬಿಡಿ. ...ಕ್ಷೇತ್ರದಲ್ಲಿ ಅದನ್ನು 'ಅಹಂ' ಅಂದುಕೊಳ್ಳಬಹುದು. ...ತ್ತೀಚೆಗೆ ಇಂಥದ್ದೊಂದು ಅಹಂ ಪ್ರಸಂಗ ನಡೆದಿದೆ. ...ತ್ರದುರ್ಗದಲ್ಲಿರುವ ಇಂಗ್ಲಿಷ್ ಲೆಕ್ಚರರ್ ತಾರಿಣಿ ...ಯವರ ಪುಸ್ತಕವೊಂದು ಕಳೆದ ವಾರ ...ರಿನಲ್ಲಿ ಬಿಡುಗಡೆಯಾಯಿತು. ಕವಿ ಜಯಂತ್ ... ಕೃತಿ ಬಿಡುಗಡೆ ಮಾಡಿದರೆ ಇನ್ನೊಬ್ಬ ಕವಿ ... ಜಯಪ್ರಕಾಶ್ ಪುಸ್ತಕ ಕುರಿತು ಮಾತನಾಡಿದ್ದರು. ...ದ ನಂತರ ಕವಿಗೋಷ್ಠಿ. ...ಜುನ ಹೊಸಹಾಳ್, ಅಂಕುರ ಬೆಟಗೇರಿ ...ದ ಯುವ ಕವಿಗಳೇ ಇದ್ದ ಕವಿಗೋಷ್ಠಿ ...ಗಿದೆ. ಮೊದಲ ಆರೆಂಟು ಕವಿಗಳು ತಮ್ಮ ಕವನ ...ಗಿಸಿ, ಕಳಿತಾಗ ವೇದಿಕೆಗೆ ಯುವ ಕವಿಯೊಬ್ಬನ ಆಗಮನವಾಯಿತು. ಹಿಪ್ಪಿಯಂತೆ ಜುಟ್ಟು ಬಿಟ್ಟುಕೊಂಡಿದ್ದ ಆತ ತಲೆ ಕುಣಿಸುತ್ತಾ "ಇದುವರೆಗೂ ಓದಿದ ಪದ್ಯಗಳೆಲ್ಲಾ ಕೆಲಸಕ್ಕೆ ಬಾರದವು, ವೇಸ್ಟು. ಇವತ್ತಿನ ನಿಮ್ಮ ಸಂಜೆಯನ್ನು ಅರ್ಥಪೂರ್ಣಗೊಳಿಸುವಂತ ಕವಿತೆನಾ ನಾನ್ ಓದುತ್ತೀನಿ. ನೀವೆಲ್ಲಾ ಕೇಳುವಂತರಾಗಿ" ಅಂತ ಅಪ್ಪಣೆ ಕೊಡಿಸಿಬಿಡಬೇಕೆ!

ಅಲ್ಲಿದ್ದ ಜನರೆಲ್ಲಾ stun ಆಗಿ ಕೂತರು. ಆದರೆ ಬೇರೆಲ್ಲಾ ಕವಿಗಳನ್ನು ಹೀಯಾಳಿಸಿ ತನ್ನ ಕವನ ಕಲಾಕೃತಿಯನ್ನು ಈ ಕವಿ ಮಂಡಿಸಿದನಾದರೂ ಅವು ಯಾರಲ್ಲೂ ಬೆರಗನ್ನೇನು ಹುಟ್ಟಿಸಲಿಲ್ಲ, ಅಂತಹ ಆರ್ಡಿನರಿ ಪದ್ಯಗಳವು.

ಹೀಗೆ ಅಂಗೈ ತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳುವ ಚಟ ಮತ್ತು ಅಹಂ ಈತನಿಗ್ಯಾಕೆ ಬಂತೋ ಗೊತ್ತಿಲ್ಲ, ಅಂದಹಾಗೆ ಈತ ಯಾರು ಗೊತ್ತೆ?

ಅವರ್‍ನ ಬಿಟ್, ಇವರ್‍ನ ಬಿಟ್ ಇನ್ಯಾರೆಂಬಂತೆ ಹೆಡ್ಡಿಂಗ್‌ನಲ್ಲೇ ಈ ಕುಕವಿಯ ಹೆಸರಿದೆ ಓದಿಕೊಳ್ಳಿ. ■



ಅಂಬುರೀಸೇನಾರ ಬಿಜೆಪಿ ಸೇರಿದ್ರೆ, ಅವುನ ಕತೆ ಮುಗದಂಗೆಯ!

"ಯೆಲ್ಲ ಬಿಜೆಪಿ ಕಡಿಕೆ ವಂಟವುರಂತಲ್ಲಾ?" ಎಂದ ಸೀರ.

"ಯಲ್ಲ ಯಾಕೋದರ್ಲ, ಯಾವೊ ಒಸಿ ಹೋಯ್ತವೆ. ಹಿಡಕಂಡು ಬಂದ ನಾಯಿ ಮಲ ಹಿಡದತೆ? ಅಂತವು ಇಲ್ಲಿದ್ದು ಮಾಡದು ಆಟರಲ್ಲೇ ಆದೆ, ಅಲ್ಲಿದ್ದು ಮಾಡದು ಆಟರಲ್ಲೆ ಅದೆ" ಎಂದ ಕಾಳಮಾವ ತಾತ್ಸಾರದಿಂದ.

ಬಯಲು ಸೀಮೆ
ಕಟ್ಟೆಪುರಾಣ
ಬಿ. ಚಂದ್ರೇಗೌಡ

"ಅಂಬುರೀಸನು ಯತ್ತಾಗಾರ ಹೋಗನ ಅಂತ ಹಾಕ್ಯಾಡತಾಯಿದ್ದನಂತೆ?"

"ಅವುನೇನಾರ ಕಾಂಗ್ರೆಸ್ ಬುಟ್ಟು ಹೋದ್ರೆ ಅವುನ ಕತೆ ಮುಗದಂಗೆಯ ಕಣ ಮಾವ" ಎಂದ ಉಗ್ರಿ.

"ಅದ್ಯಾಕ್ಲ ಅಂಗಂತಿ?" ಎಂದಳು ಜುಮ್ಮಿ.

"ಇನ್ನೇನೆ ಮತ್ತೆ? ಬಜೆಪಿಗೋದ್ರೆ, ಅದಾಗ್ಲೆ ಅರ್ದ ಹಾಳಾಗಿರೊ ಪಾರ್ಟಿ. ಅಲ್ಲಿ ಅಂಬರೀಸನ ಜನಪ್ರಿಯತೆ ಏನಾರ ಇದ್ರೆ ಅದ ಬಳಸಿಗಂಡು ಬಿಸಾಕ್ತವೆ. ಯಾವನೂ ಬಂದು ಮೂಸಿ ನೋಡದಿಲ್ಲ. ಇನ್ನ ಜೆಡಿಎಸ್‌ಗೋದ್ರೆ ಅಲ್ಲಿ ಅಪ್ಪ, ಮಕ್ಕಳು, ಸೊಸೆ ಇವುರಾದ ಮ್ಯಾಲೆ ಅಂಬುರೀಸ. ಅಲ್ಲಿ ಇವುನು ರೇವಣ್ಣನಿಗಿಂತ್ಲೂ ಕ್ಯಳಗಿನ ಸ್ಥಾನದಲ್ಲಿ ಇರಬೇಕಾಯ್ತದೆ. ಈಗಿರಂಗೆ ಇದ್ರೆ ಇರೋ ಮರಿಯಾದಿನಾರ ಉಳಿತದೆ. ಇಲ್ಲ ಅಂದ್ರೆ ಹಿಂದೊಂದ ಸತಿ ಮನೆ ಬಾಗಲಿಗೆ ನಾವು ನಿರಪರಾಧಿ ಅಂತ ಬೋರ್ಡಾಕಿದ್ನಲ್ಲ ಅಂಗಾಯ್ತಂಡಿರಬೇಕಾಯ್ತದೆ."

"ಕಾಂಗ್ರೆಸ್ಸಿನೋರು ನ್ಯಟ್ಟಗೆ ನ್ಯಡಿಸಿಗಂಡಿದ್ರೆ ಅವುನ್ಯಾಕಂಗಾಡೋನು?" ಎಂದಳು ಜುಮ್ಮಿ.

"ನೀನೊಳ್ಳೆ ಚನ್ನಾಗೇಳ್ತಿ ಕಣೆ. ಕಾಂಗ್ರೆಸ್ಸಿನಲ್ಲಿ ಯಾರು ನ್ಯಡಿಸಿಕೊಬೇಕು? ದಳದಲ್ಲೇನೊ ದ್ಯಾವೇಗೌಡ ಯಜಮಾನ, ಕುಮಾರಸ್ವಾಮಿ ಸಣ್ಣ ಯಜಮಾನ. ಪಾರ್ಟಿಲಿ ಯಾವನಾರ ಮುನಿಸಿಗಂಡವನೆ ಅಂದ್ರೆ ಕುಮಾರಸ್ವಾಮಿ ಹೋಗಿ ಇದ್ಯಾಕ್ ಬ್ರದರ್ ಅಂತ ಕ್ಯನ್ನೆಗೆ ಮುತ್ತು ಕೊಡ್ತನೆ."

"ಯಮ್ಮೆಕರ ಮುತ್ತು ಕೊಟ್ಟಂಗೆ" ಎಂದು ಜುಮ್ಮಿ ನಕ್ಕಳು.

"ಅಂಗೆ ತಿಳಕೊ. ಇನ್ನ ಬಿಜೆಪಿಲಿ ಯಾವನಾರ ತಿರುಗಿಬಿದ್ದ ಅಂದ್ರೆ ಎಡೂರಪ್ಪ ಮನಿಗೇ ಬಂದು ಮೆಟ್ಟಬುಟ್ಟು ಹೋಯ್ತನೆ. ಕಾಂಗ್ರೆಸ್ಸಲ್ಲಿ ಯಾರಂತ ಕ್ಯಲಸ ಮಾಡಬೇಕೂ? ಅದು ಯಾರೂ ಯಜಮಾನರಿಲ್ಲದ ಪಾರ್ಟಿ. ಸಿದ್ದರಾಮಯ್ಯ ತಿಂಗಳಾನುಗಟ್ಲೆ ಮುನಿಸಿಗಂಡ, ಯಾರಾರ ಸಮಾಧಾನ ಮಾಡಿದ್ರೆ? ಇಲ್ಲ, ಗಂಡಸಿ ಶಿವರಾಮು ಮುಕನೆ ಊದಿಸಿಗಂಡು ತಿರುಗಿದ. ಯಾರೂ ಇದ್ಯಾಕಪ್ಪ ಹಿಂಗಿದ್ದಿ ಅಂತ ಕೇಳ್ಳಿಲ್ಲ. ಅಂತದ್ರುಲ್ಲಿ ಅಂಬರೀಸನ್ನ ಯಾರು ಕೇಳಬೇಕೇಳು?"

"ಇರರೆ ಕೇಳಬೇಕು ಕಂಡ್ಯ."

"ತಿರಗ ಅದ್ನೆ ಹೇಳ್ತಿಯಲ್ಲೆ ನೀನು. ದೇಸಪಾಂಡೆ ಮಾತ ಯಾವನಾರ ಕೇಳ್ತನ? ಆ ಶಿವಕುಮಾರನ ಧಿಮಾಕು ನೋಡಿದ್ರೆ ಆ ಪಾರ್ಟಿಲಿ ಯಾರಾರ ಇರಕ್ಯಾದತೆ? ಅವುನ ಮಕ ನೋಡಿದ್ರೆ ಯಾವಾಗ್ಲು ಯಾರೊ ಹ್ಯಡದಾಟಕ್ಕೆ ಕಳಿಸಿ ಕಾಯ್ತಾಯಿರೋ ನಂಗೆ ಕಾಣ್ತನೆ. ಅಂಥೋರಿರೋ ಪಾರ್ಟಿಲಿ ಅಂಬುರೀಸನಂಥೋನು ಮುನಿಸಿಗಂಡ್ರೆ ಅವುನಿಗೇ ಅವುಮಾನ."

"ಮುನಿಸಿಗಳಕ್ಕೂ ಒಂದು ಕಾರಣ ಇರಬೇಕಲವೇನ್ಲ?" ಎಂದ ಸೀರ.

"ಬಲವಾದ ಕಾರಣ ಅದೆ ಚಿಗಪ್ಪ" ಎಂದು ವಾಟಿಸ್ಸೆ ಬಂದ.

"ಅದ್ಯಾವ ಕಾರಣನಪ್ಪ?"

"ಹಿಂದೆ ದ್ಯಾವೇಗೌಡ ಯಂಗೆ ಜನಾಂಗದ ಲೀಡ್ರು ಕಂಡ್ರೆ ಕರುಬುತಿದ್ನೊ, ಅದೇ ತರ ಶಿವಕುಮಾರ ಮಾಡಿರಬೇಕು ಅಥವ ಮಾಡ್ಯವುನೆ. ಅದು ಅಂಬುರೀಸನಿಗೆ ಗೊತ್ತಾಗ್ಯದೆ. ಅದ್ಕೆ ಕ್ವಂಟವುನೆ" ಎಂದ ವಾಟಿಸ್ಸೆ.

"ಅದ್ಯಾಕ್ಲ ಅವುನಿಗೆದರಬೇಕು? ಕೂರಿಗೆದ್ರಿಕಂಡು ಕಂಬ್ಳಿ ಯಸ್ತ ಅಣ್ಣಂಗೆ ಆ ಸಿವುಕುಮಾರನಿಗೆದ್ರಿಕಂಡು ಪಾರ್ಟಿ ಬುಟ್ರೆ ಗಂಡ್ಸು ಅಂದರ್ಲ?" ಎಂದು ಸೀರ ರೇಗಿದ.

"ಕರಟ್ ಚಿಗಪ್ಪ ನೀನೇಳಿದ್ದು, ಮಂಡ್ಯದ ಗಂಡು ಅಂದಮ್ಯಾಲೆ ಯಾರಿಗೂ ಅಂಜಬಾರದು. ಅದರಲ್ಲೂ ಶಿವಕುಮಾರ ಮಾಡಬಾರದ್ದ ಮಾಡಿ ಕಾಸುಗುಡ್ಡೆ ಹಾಯ್ಕಂಡವುನೆ. ಅವುನು ಬತ್ತನೆ ಅಂದ್ರೆ ಯಾರೂ ಬರದಿಲ್ಲ, ನಾವೇ ಹೋಗಿ ಲಾರಿಲಿ ಜನ ತರಬೇಕು. ಅದೇ ಅಂಬುರೀಸ್ ಬತ್ತನೆ ಅಂದ್ರೆ ಬೇಕಾದೋಟು ಜನ ಬತ್ತರೆ. ಅಂತದ್ರುಲ್ಲಿ ಆಫ್ಟರಾಲ್ ಶಿವಕುಮಾರನಿಗೆದ್ರಿ ಪಾರ್ಟಿ ಬುಡೋದು ಫೂಲಿಸ್" ಎಂದ ವಾಟಿಸ್ಸೆ.

"ಅವುಳ್ಯಾರೊ ಇನ್ನಬ್ಬಳು ಬಿಜೆಪಿ ಕಡಿಗೆ ವಂಟಿದ್ದಳಂತಲ್ಲಾ?" ಎಂದ ಸೀರ.

"ಯಾರು ಚಿಗಪ್ಪ?"

"ಅದೇ ದ್ಯಾವೇಗೌಡುನ್ನ ಸೋಲಿಸಿದ್ಲಲ್ಲ ಅವುಳು."

"ಓಹೊ, ನಮ್ಮ ತೇಜುಸ್ವಿನಿ. ಅವುಳು ಬಿಜ ಬಾಗಿಲಿಗೆ ಹೋಗಿದ್ಲಂತೆ. ಶೋಭಾ ಕರಂದ್ಲಾಜೆ ಯಾವ ಕಾರಣಕ್ಕೂ ಅವುಳ ಹತ್ರ ಬುಟಗಬ್ಯಾಡಿ ಅಂತ ಎಡೂರಪ್ಪನಿಗೇಳಿದ್ಲಂತೆ. ಅದ್ಕೆ ತೇಜಮ್ಮ ವಾಪಸುಬಂದು ಕಾಂಗ್ರೆಸ್ಸಲ್ಲಿದ್ದೇ ಹೋರಾಡ್ತಿನಿ ಅಂದವುಳೆ."

"ಯಾಕೋರಾಡ್ತಳಂತೆ?"

"ಇರಕ್ಕೆ."

"ಕಾಂಗ್ರೆಸ್ಸಲಿರಕ್ಕೆ ಹೋರಾಡೊ ಅಗತ್ಯಯಿಲ್ಲ ಕಣೊ ವಾಟಿಸ್ಸೆ. ಹಿಂದೂ ಧರಮದಲ್ಲಿ ನೀವು ಯಂಗಿರತಿರೋ ಅದೇ ತರ ಇದ್ರಾಯ್ತು. ಯಲ್ಲಾ ಯಾವಾಗ್ಲು ಬಾಯಿಗೆ ಬಂದಂಗೆ ಮಾತಾಡಿಕೊಂಡು ಚಟುವಟಿಕ್ಯಾಗಿರಕ್ಕೆ ಅದೇನು ಬಿಜೆಪಿನೆ?" ಎಂದ ಉಗ್ರಿ.

"ಅದು ನಿಜಕಣೊ ಉಗ್ರಿ. ಕಾಂಗ್ರೆಸ್ಸಲಿ ನಿಮ್ಮ ನಿಮ್ಮ ಕ್ಯಲಸ ನೀವು ಮಾಡಿಕಂಡು ಆರಾಮಾಗಿರಬವುದು. ಹೈಕಮಾಂಡು ಅಂತ ಅದೆಲ್ಲೊ ಒಂದು ಕಮಿಟಿ ಅದಂತೆ. ಅದರ



ಲಜ್ಜೆಗೇಡಿಗಳ ಗಡಿಪಾರು ನಿರ್ಣಯ

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನಲ್ಲಿ ರಿಪ್ಪನ್‌ಪೇಟೆ ಎಂಬ ಊರಿದೆ. ಇದು ಶಿವಮೊಗ್ಗ - ತೀರ್ಥಹಳ್ಳಿ -ಹೊಸನಗರ -ಸಾಗರಗಳಿಗೆ ಸಂಪರ್ಕ ಕಲ್ಪಿಸುವ ಊರು. ಜನಪರ ಅಧಿಕಾರಿಯಾಗಿದ್ದ ಬ್ರಿಟಿಷ್ ವೈಸರಾಯ್ ರಿಪ್ಪನ್ ಎನ್ನುವವನ ಸ್ಮರಣೆಗೆ ಊರಿಗೆ ಈ ಹೆಸರಿಡಲಾಗಿದೆ. ಇಲ್ಲಿನ ಗ್ರಾಮ ಪಂಚಾಯತಿಯ ಹೆಗ್ಗಳಿಕೆ ಏನೆಂದರೆ ಇದು ತಾಲ್ಲೂಕಿನಲ್ಲಿಯೇ ಅತ್ಯಧಿಕ ಆದಾಯ ಹೊಂದಿರುವುದು. ಹಾಗೆಯೇ ಇದರ ಇನ್ನೊಂದು ಹೆಗ್ಗಳಿಕೆಯೆಂದರೆ ರಾಜ್ಯದಲ್ಲಿಯೆ ಭ್ರಷ್ಟಗೊಂಡಿರುವ ಗ್ರಾಮ ಪಂಚಾಯತಿಗಳಲ್ಲಿ ಇದೂ ಒಂದು ಎಂಬುದು. ಇತ್ತೀಚೆಗೆ ಇದು ಇನ್ನೂ ಒಂದು ದಾಖಲೆಯನ್ನು ನಿರ್ಮಿಸಿದೆ.

ಗ್ರಾಮ ಪಂಚಾಯತಿಯು ವಿವಿಧ ಕಾಮಗಾರಿಗಳಲ್ಲಿ, ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆಯಲ್ಲಿ ಭ್ರಷ್ಟಾಚಾರವೆಸಗಿರುವುದನ್ನು ದಾಖಲೆ ಸಮೇತ ಬಹಿರಂಗಪಡಿಸಿ ತನಿಖೆಗೆ ಆಗ್ರಹಿಸಿದ ಹೋರಾಟಗಾರನೊಬ್ಬನನ್ನು ಗಡಿಪಾರು ಮಾಡುವಂತೆ 17 ಸದಸ್ಯರ ಪಂಚಾಯತಿ ಸರ್ವಾನುಮತದ ನಿರ್ಣಯ ತೆಗೆದುಕೊಂಡಿದೆ. ಒಬ್ಬ ಸದಸ್ಯರು ಮಾತ್ರ ಇದಕ್ಕೆ ತನ್ನ ಸಮ್ಮತಿ ಇರದಿದ್ದರೂ ಸರ್ವಾನುಮತ ಎಂದು ಬಿಂಬಿಸಿದ್ದಾರೆಂದು ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಗಡಿಪಾರಿಗೆ ಒಳಪಟ್ಟ ಹೋರಾಟಗಾರ ಟಿ.ಆರ್. ಕೃಷ್ಣಪ್ಪ ರಾಜ್ಯಕ್ಕೇ ಮಾದರಿಯಾಗುವಂತಹವರು. ಯಾವ ನಿಟ್ಟಿನಲ್ಲೂ ಒಂದಿಷ್ಟೂ ಕುಂದಿಲ್ಲದ ಹೋರಾಟಗಾರ ಇವರು. ಇವರ ಬಗ್ಗೆ ಪ್ರಪ್ರಥಮವಾಗಿ ನಾನು ನಮ್ಮ ಈ ಪತ್ರಿಕೆಯಲ್ಲಿಯೇ ಬರೆದಿದ್ದೆ. 'ಹೀಗೊಬ್ಬ ಪ್ರಾಮಾಣಿಕ ಹೋರಾಟಗಾರ' ಎನ್ನುವ ಶಿರೋನಾಮೆಯಲ್ಲಿ ಅದು ಪ್ರಕಟವಾಗಿತ್ತು.

ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿದ್ದಾಗ ಹೊಸನಗರ ತಾಲ್ಲೂಕಿನಿಂದ ಜೈಲು ಶಿಕ್ಷೆಗೆ ಗುರಿಯಾದ ಏಕೈಕ ವ್ಯಕ್ತಿ ಈ ಕೃಷ್ಣಪ್ಪ. ಇವರ ಹೋರಾಟದ ಫಲದಿಂದಾಗಿಯೇ ರಿಪ್ಪನ್‌ಪೇಟೆಗೆ ಹೆರಿಗೆ ಆಸ್ಪತ್ರೆ, ಪ್ರಥಮ ದರ್ಜೆ ಕಾಲೇಜ್, ಪೊಲೀಸ್ ಕ್ವಾಟ್ರಸ್, ಕೆ.ಇ.ಬಿ. ಸೆಕ್ಷನ್ ಆಫೀಸ್‌ಗಳು ಬಂದಿವೆ. ದಲಿತ ದಂಪತಿಗಳಿಗೆ ಸೇರಿದ ಜಮೀನಿನಲ್ಲಿ ಜಿಲ್ಲಾ ಪರಿಷತ್ ರಸ್ತೆ ನಿರ್ಮಿಸಲು ಹೊರಟಾಗ ಬುಲ್ಡೋಜರ್‌ಗೆ ಎದೆಯೊಡ್ಡಿ ನಿಂತು ಅದನ್ನು ತಡೆದದ್ದು, ಸುಮಾರು 40 ದಲಿತ ಕುಟುಂಬಗಳಿಗೆ ಅವರ ಜಮೀನಿನ ಹಕ್ಕುಪತ್ರ ನೀಡದೇ ಹತ್ತಾರು ವರ್ಷಗಳಿಂದ ಅಲೆಸುತ್ತಿದ್ದಾಗ ಹೋರಾಟ ಮಾಡಿ ಪಟ್ಟು ಹಿಡಿದು ಅದನ್ನು ಅವರಿಗೆ ದೊರಕಿಸಿಕೊಟ್ಟಿದ್ದು ಕೃಷ್ಣಪ್ಪನವರ ಹೋರಾಟದ ಫಲಗಳ ಕುರಿತು ಸಣ್ಣ ಉದಾಹರಣೆಗಳು. ಕೃಷ್ಣಪ್ಪನವರಿಂದ ಹೀಗೆ ಪರಿಹಾರ ಕಂಡ ನೂರಾರು ಸಮಸ್ಯೆಗಳಿವೆ. ನೂರಾರು ಬಡಜನ ಕೃಷ್ಣಪ್ಪನವರ ಹೋರಾಟದಿಂದ ನ್ಯಾಯ ಪಡೆದಿದ್ದಾರೆ.

ಹಿಂದೊಮ್ಮೆ ಸಾರ್ವಜನಿಕ ಸಭೆಯಲ್ಲಿ ಉದ್ಧಟತನದ ಮಾತನಾಡಿದ ಜಿಲ್ಲಾಧಿಕಾರಿಯ ಕಾಲರ್ ಹಿಡಿದು ಕೃಷ್ಣಪ್ಪ ಪ್ರಶ್ನಿಸಿದ್ದರು. ತನ್ನ ತಪ್ಪು ಅರಿತ ಜಿಲ್ಲಾಧಿಕಾರಿ ಕೃಷ್ಣಪ್ಪನವರನ್ನು ಬಂಧಿಸಲು ಹೊರಟ


ಟಿ.ಆರ್. ಕೃಷ್ಣಪ್ಪ

ಪೊಲೀಸರನ್ನು ತಡೆದಿದ್ದರು.

ಗ್ರಾಮ ಪಂಚಾಯತಿಯ ಪ್ರಸ್ತುತ ದುಂಡಾವರ್ತಿಯ ನಿರ್ಣಯದ ಹಿಂದೆ ಸಚಿವ ಹರತಾಳು ಹಾಲಪ್ಪ ಹಾಗೂ ಶಾಸಕ ಗೋಪಾಲಕೃಷ್ಣ ಬೇಳೂರವರ ಕೈವಾಡ ಇರುವುದು ನಿಚ್ಚಳವಾಗಿದೆ. ಗೋಪಾಲಕೃಷ್ಣ ಬೇಳೂರು ಗಂಗಾ ಕಲ್ಯಾಣ ಯೋಜನೆಗೆ ಎಲ್ಲಾ ಫಲಾನುಭವಿಗಳನ್ನು ತನ್ನ ಜಾತಿಯ ತನ್ನ ಹಿಂಬಾಲಕರನ್ನೇ ಆಯ್ಕೆ ಮಾಡಿದ್ದನ್ನು ಟಿ.ಆರ್.ಕೃಷ್ಣಪ್ಪ ದಾಖಲೆ ಸಮೇತ ಬಹಿರಂಗಪಡಿಸಿದ್ದರು. ಅದನ್ನು ಸಹಿಸಲಾಗದೇ ಗ್ರಾಮ ಪಂಚಾಯತಿ ಅವರ ವಿರುದ್ಧ ಗಡಿಪಾ ಆದೇಶ ಹೊರಡಿಸಿದೆ.

ಈಗ ಪಟ್ಟಭದ್ರ ಹಿತಾಸಕ್ತಿಗಳು, ಭ್ರಷ್ಟರು ಕೃಷ್ಣಪ್ಪನವರ ವಿರುದ್ಧ ತಿರುಗಿಬಿದ್ದಿದ್ದರೆ ರಿಪ್ಪನ್ ಪೇಟೆ ಗ್ರಾಮ ಪಂಚಾಯತಿಯ ಅವಿವೇಕದ, ಸಂವಿಧಾನ

...ಥೋರ ಚೆನ್ನಾಗಿ ನೋಡಿಕಂಡ್ರೆ, ತಿಕೇಟು ...ಸಿಗದೇನೂ ಇರಬವುದು. ಅಂತೂ ...ಜವಾಬ್ದಾರಿ, ಒತ್ತಡ, ಟೆನ್‌ಷನ್ನ ಏನೂ ...ಬವಾಗಿರೋ ಪಾರ್ಟಿ ಹಾಳಾಯ್ತು ಅದೆ" ...ಸ್ಸಿ.

...ಗಾಳಾವತ್ಲ? ಹಿಂದೆ ಯುಗಡೆ ಕಾಲ್ದಲ್ಲಿ ...ಥ ಪಾರ್ಟಿ ಅನ್ನಂಗಾಗಿತ್ತು, ಹೋಯ್ತು ...ಬಂದ ಕಾಳಮಾವ.

...ನಿಜ ದ್ವಡಪ್ಪ, ಆದ್ರು ಇವತ್ತು ಆ ...ಪಿ ಕ್ಯಾಂಡೇಟ್‌ಗಳಿಗೆ ಟಿಕೆಟ್ ...ದ ನೋಡಿದ್ರೆ ಭಾಳ ಕಷ್ಟ ಪಡಬೇಕು ...ತ್ತಾ ಅದೆ."

...ಕಷ್ಟ ಪಡಬೇಕೂ?"

...ಎಪಿ ಸಂಖ್ಯೆ ಜಾಸ್ತಿಯಾಗ್ಯದೆ."

...ಗಳು ಅಂದ್ರೇನೊ?"

...ಊ ಉಗ್ರಿ ವಸದಾಗಿ ಕೇಳ್ತೀ? ಓಲ್ಡ್ ...ನರ್ ಅಂತ. ಖರ್ಗೆ, ಧರಮಸಿಂಗ, ... ಬಂಗಾರಪ್ಪ ಇನ್ನು ಕೆಲವು ಜನ ...ಕಾಂಗ್ರೆಸ್ ಕ್ಯಾಂಡೇಟಾದ್ರೆ, ಯಾರಿಗೆ ಓಟ ... ಉಗ್ರಿ? ಅವ್ರೆಲ್ಲ ಓಡಿ, ಓಡಿ ...ಬ ಗಾಡಿಗಳು. ಅವ ಶೆಡ್ಡಿಗೆ ವಡದು, ...ಪಾಲಿಗೆ ನಿಲ್ಸಿ, ಒಂದು ನಿಮಿಷ ಮೌನ ...ರವ ಸೂಚಿಸಬೇಕಾದ ಕ್ಯಾಂಡೇಟ್‌ಗಳು

...ನುಭವ ವಸಬರಿಗಿದ್ದತ್ತೇನೊ?"

...ಬಗೆ ಅವುಕಾಶ ಕೊಡಿ, ಅನುಭವ ...ಶಿವಮೊಗ್ಗದಲ್ಲಿ ಎಡೂರಪ್ಪನ ಮಗನೆದ್ರಿಗೆ ...ಬಗ ಕುಮಾರ್ ಬಂಗಾರಿ ನಿಲ್ಸಿದ್ರೆ ... ಚುನಾವಣೆ? ಅಮೃತಮಹಲ್ ತಳಿನೂ ... ತಳಿನೂ ಗುದ್ದಾಟಕೆ ಬುಟ್ಟಂಗಾಗದು."

... ಗುರು ಬಂಗಾರಪ್ಪನಿಗೆ ನೀನೆ ...ತ್ತು ಕಣೊ."

...ಲ್ಲ ನಮ್ಮಂಥೋರ ಮಾತ ಕೇಳೊ ...ೀರಿ ಹೋಗ್ಯವುರೆ. ಜನಕ್ಕೆ ...ಗೂ ಹಟ ಜಾಸ್ತಿ ಕಣೊ ಉಗ್ರಿ. ಇದೇ ...ದೊಡಪ್ಪ ಮನೆಲಿ ಎಷ್ಟು ಹಟ ...ಜಾತ್ತ? ನಮ್ಮ ದ್ವಡವ್ವ ಆಗೋವತ್ತಿಗೆ ...ವುಳಿ."

...ಂಡೋಗ್ಲ ಕಂಡಿದ್ದಿನಿ. ಹಂದಿಮರಿ ...ದಕೆ ಹಾಳುಗ್ಬಾಡೆ ಜರಿತು ಅಂತ ... ನೋಡಕ್ಕೆ ಬರಬ್ಯಾಡ."

...ದ್ವಡಪ್ಪ, ಯೂ ಆರೆಯೆ ಗುಡ್ಡು ■

...ನಿರ್ಣಯದ ವಿರುದ್ಧ ರಿಪ್ಪನ್ ಪೇಟೆಯ ...ಸುತ್ತಿದ್ದಾರೆ. ಶಿವಮೊಗ್ಗದ ಪ್ರಗತಿಪರ ...ಳು ಮೊನ್ನೆ ರಿಪ್ಪನ್‌ಪೇಟೆಯಲ್ಲಿ ...ನಡೆಸಿ ಜನರ ಆಕ್ರೋಶಕ್ಕೆ ದನಿ

...ವಾಣಿ ದಿನಪತ್ರಿಕೆ ಕೂಡ ರಿಪ್ಪನ್‌ಪೇಟೆ ...ಚಾಯತಿಯ ಕಾನೂನುಬಾಹಿರ ... ವಿರುದ್ಧ ಅಪರೂಪದ ಸಂಪಾದಕೀಯ ...ಹೋರಾಟಗಾರರಿಗೆ ನೈತಿಕ ಬೆಂಬಲ


... ಪಂಚಾಯತಿಗೆ ಯಾರನ್ನೇ ಆದರೂ ...ಮಾಡುವ ಅಧಿಕಾರವಿಲ್ಲ ಎಂದು ಎಲ್ಲ ... ವಾದಿಸುತ್ತಿದ್ದಾರೆ. ಲೋಕಾಯುಕ್ತ ...ಪ್ಪನ್‌ಪೇಟೆ ಗ್ರಾಮ ಪಂಚಾಯತಿಯ ...ಗಳ ಸಮಗ್ರ ತನಿಖೆ ನಡೆಸಬೇಕಿದೆ. ... ಮಾನವ ಹಕ್ಕು ಆಯೋಗವೂ ...ರ ಕೃಷ್ಣಪ್ಪನವರ ಘನತೆಗೆ ಧಕ್ಕೆ ತಂದ ...ರು ಪಂಚಾಯತಿಯ ಅಧ್ಯಕ್ಷರು, ...ಹಾಗೂ ಕಾರ್ಯದರ್ಶಿಯ ವಿರುದ್ಧ ...ಕ್ರಮ ತೆಗೆದುಕೊಳ್ಳಬೇಕು ಎಂಬುದು ...ಸಂಘಟನೆಗಳ ಆಗ್ರಹವಾಗಿದೆ.


... ಬೆಂಬಲಿಸಲಿ, ಬೆಂಬಲಿಸದಿರಲಿ ... ಹೋರಾಟವನ್ನು ನಿಲ್ಲಿಸಲು ...ೂ ಸಾಧ್ಯವಿಲ್ಲ. ಹಾಗೆಂದು ಅವರ ...ು ವರ್ಷಗಳ ಹೋರಾಟದ ಚರಿತ್ರೆಯೇ

...ಕೃಷ್ಣಪ್ಪನವರ ದೂರವಾಣಿ ಸಂಖ್ಯೆ 9902172407)

-ಸರ್ಜಾಶಂಕರ್ ಹರಳಿಮಠ

ಹೊಣೆಯರಿತ ಶ್ರೀಮಂತ





ಮೇಲಿನ ತರಹದ ನೂರಾರು ವಿಷಯಗಳು ಬರ್ಕ್-ವೈಟ್ ಪುಸ್ತಕದಲ್ಲಿವೆ. ಜನಸಾಮಾನ್ಯರು ಗಾಂಧೀಜಿಯ 'ಟ್ರಸ್ಟೀಶಿಪ್' ಬಗ್ಗೆ ಗೇಲಿ ಮಾಡುತ್ತಾರೆ; ಹಾಗೆಯೇ ಎಲ್ಲ ಶ್ರೀಮಂತರೂ ಒಂದೇ ರೀತಿ ಎಂದು ತಿಳಿಬಿರುತ್ತಾರೆ. ಬರ್ಕ್-ವೈಟ್ ಟಾಟಾ ಬಗ್ಗೆ ಸಂಶೋಧನೆ ನಡೆಸಿ ಟಾಟಾ ಹೇಗೆ ಬಿರ್ಲಾರಿಂದ ಭಿನ್ನ ಎಂದು ವಿವರಿಸುತ್ತಾರೆ. ಬಿರ್ಲಾ ಮಾರ್ವಾಡಿ; ಟಾಟಾ ಪಾರ್ಸಿ. ಈ ಪಾರ್ಸಿಗಳು ಹಣ ಮಾಡುವುದರಲ್ಲಿ ಮಾರ್ವಾಡಿಗಳಷ್ಟೇ ನಿಷ್ಣಾತರಾದರೂ ವಿಚಿತ್ರ ರೀತಿಯಲ್ಲಿ ನ್ಯಾಯವಂತರು, ಮಾನವೀಯರು. ಬೆಂಗಳೂರಿನ ಟಾಟಾ ವಿಜ್ಞಾನ ಸಂಸ್ಥೆ ಹತ್ತೊಂಬತ್ತನೆ ಶತಮಾನದ ಟಾಟಾ ಮೂಲಪುರುಷ ಜೆಮ್‌ಶೆಡ್‌ಜೀ ನಸರ್‌ವಾನ್‌ಜಿ ಟಾಟಾ ಕಟ್ಟಿಸಿದ್ದು; ಇವತ್ತು ಜೆಮ್‌ಶೆಡ್‌ಪುರದ ಟಾಟಾ ಉಕ್ಕಿನ ಕಾರ್ಖಾನೆಯ ಕಾರ್ಮಿಕರು ಆದರ್ಶ ಕಾರ್ಮಿಕರು; ಜೆಮ್‌ಶೆಡ್‌ಪುರ ಬಂಡವಾಳಶಾಹಿಗಳ ಹೆಮ್ಮೆಯ ಸೃಷ್ಟಿ. ಹಾಗೆಯೇ ಈ ಜೆಮ್‌ಶೆಡ್‌ಜೀಯ ಮೊಮ್ಮಗ ಜೆ.ಆರ್.ಡಿ. ಟಾಟಾ ಬಗ್ಗೆ ಅನೇಕರಿಗೆ ಗೊತ್ತಿಲ್ಲ. ಈತ ಭಾರತದ ವಿಮಾನ ಸಂಸ್ಥೆಗೆ ಒಂದು ಶಿಸ್ತು, ಹೊಣೆಗಾರಿಕೆ ತಂದವರು. ಈ ಜೆಆರ್‌ಡಿ ಟಾಟಾ ಕುರಿತ ಒಂದು ಘಟನೆ ಹೇಳುವ ಮುನ್ನ ಈ ಪಾರ್ಸಿಗಳ ಬಗ್ಗೆ ಇನ್ನೊಂದು ಮಾತು ಹೇಳುತ್ತೇನೆ. ಮುಂಬಯ ನ್ಯಾಯಾಲಯಗಳು ನ್ಯಾಯವಂತಿಕೆಗೆ ಪ್ರಸಿದ್ಧವಾಗಿವೆ. ಈ ಮುಂಬಯಿಯ ನ್ಯಾಯಾಲಯಗಳಲ್ಲಿ ಬಹುಪಾಲು ಜನ ಪಾರ್ಸಿಗಳು ನ್ಯಾಯಾಧೀಶರಾಗಿದ್ದು ಅವುಗಳಿಗೆ ಹೆಸರು ತಂದರು.

ಜೆಆರ್‌ಡಿ ಟಾಟಾ ಯೌವನದಲ್ಲಿದ್ದಾಗ ಒಮ್ಮೆ ದಕ್ಷಿಣ ಆಫ್ರಿಕಾದಲ್ಲಿ ಉದ್ಯಮಿಗಳ ಒಂದು ಬೃಹತ್ ಸಭೆಗೆ ಹೋಗಿದ್ದರು. ಅಲ್ಲಿ ಊಟಕ್ಕೆ ಮುನ್ನ ಕೈ ತೊಳೆದುಕೊಳ್ಳುವಾಗ ನಲ್ಲಿಗಳನ್ನು ತೋರಿಸಿ, "ಈ ಕಡೆಯ ನಲ್ಲಿಗಳು ಬಿಳಿಯರಿಗೆ, ಆ ಕಡೆಯ ನಲ್ಲಿಗಳು ವರ್ಣೀಯರಿಗೆ" ಅಂದರು.

ಇದನ್ನು ಕೇಳಿದ ಜೆಆರ್‌ಡಿ ಟಾಟಾ ದುಗುಡಗೊಂಡರು. ಅವರು ತಣ್ಣಗೆ ಹೇಳಿದರು, "ನಾನು ವರ್ಣೀಯರ ನಲ್ಲಿ ಬಳಸುತ್ತೇನೆ, ಹಾಗೆಯೇ ವರ್ಣೀಯರ ಜೊತೆ ಊಟ ಮಾಡುತ್ತೇನೆ."

ಜಿನ್ನಾ ಕುರಿತು ಒಂದು ಘಟನೆ......

ಜಿನ್ನಾ ಬಗ್ಗೆ ಬರ್ಕ್-ವೈಟ್ ಒಂದೆರಡು ಅಧ್ಯಾಯ ಬರೆದಿದ್ದಾಳೆ. ತುಂಬ ಚೆನ್ನಾಗಿ, ಮನಮುಟ್ಟುವಂತೆ ಬರೆದಿದ್ದಾಳೆ. ಜಿನ್ನಾ ಪೂರ್ತಿ ಆಂಗ್ಲೀಯ ಎಂಬುದು ಅನೇಕರಿಗೆ ಗೊತ್ತಿರಲಾರದು. ಸಿಲ್ಕ್ ಸೂಟ್ ಹಾಕಿ ಟ್ರಿಮ್ಮಾಗಿರುತ್ತಿದ್ದರು. ಅವರಿಗೆ ಮತ್ತು ಅವರ ತಂಗಿ ಫಾತಿಮಾಗೆ ಉರ್ದು ಬರುತ್ತಿರಲಿಲ್ಲ. ಜಿನ್ನಾ ಮತ್ತು ಫಾತಿಮಾ ಯಾವುದೇ ಮುಸ್ಲಿಂ ಸಂಪ್ರದಾಯ ಅನುಸರಿಸುತ್ತಿರಲಿಲ್ಲ. ಒಮ್ಮೆ ಒಂದು ಬೃಹತ್ ಸಭೆಯಲ್ಲಿ ಫಾತಿಮಾ ಬುರ್ಖಾ ಧರಿಸದೆ ಜಿನ್ನಾ ಜೊತೆಗೆ ವೇದಿಕೆ ಮೇಲೆ ಕೂತಿದ್ದರು. ಮುಸ್ಲಿಂ ಸಂಪ್ರದಾಯಸ್ಥನೊಬ್ಬ ಉರ್ದುವಿನಲ್ಲಿ ಭಾಷಣ ಶುರು ಮಾಡಿ ಫಾತಿಮಾಳ ಮತ್ತು ಜಿನ್ನಾರ ಧರ್ಮವಿರೋಧಿ ಬದುಕಿನ ಬಗ್ಗೆ ಟೀಕಿಸತೊಡಗಿದ. ಜನ ಚಪ್ಪಾಳೆ ತಟ್ಟತೊಡಗಿದರು. ಆತ ತಮ್ಮನ್ನು ಹೊಗಳುತ್ತಿರುವುದಾಗಿ ತಪ್ಪು ತಿಳಿದ ಜಿನ್ನಾ, ಫಾತಿಮಾ ಮುಗುಳ್ನಗುತ್ತಾ ತಲೆಬಾಗುತ್ತಾ ಖುಷಿಯಾಗಿದ್ದರು!

-ಜೂನ್ 2, 1991

sms ಜೋಕ್ಸ್

ಇನ್ನು ಮುಂದೆ ಮಹಾತ್ಮಾಗಾಂಧಿಯವರ ಜನ್ಮ ದಿನವಾದ ಅಕ್ಟೋಬರ್ 2 ರಂದು ಮದ್ಯ ಮಾರಾಟವನ್ನು ರದ್ದು ಮಾಡುವುದಿಲ್ಲ. ಯಾಕೆಂದರೆ ಹೆಂಡದೊಡೆಯ ವಿಜಯ್ ಮಲ್ಯ ಅವರು ಗಾಂಧಿಯವರ ವಸ್ತುಗಳನ್ನು ಖರೀದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆ ಮೂಲಕ ಇವತ್ತು ವಿಜಯ್ ಮಲ್ಯರವರೇ 'ಸ್ಪಿರಿಟ್ ಆಫ್ ಇಂಡಿಯಾ'ದ ಪ್ರತೀಕವಾಗಿದ್ದಾರೆ!

'ಹೇ ರಮ್'!



* * * * * *

ಮೇಡಂ: ಹಸುವಿಗ ನಾಲ್ಕು ಇರುತ್ತೆ, ಆದರೆ ನನಗೆ ಎರಡೇ ಇದೆ. ಅದೇನು?

ಗೋಪಿ: ಕಾಲು.

ಮೇಡಂ: ನಿನ್ನ ಪ್ಯಾಂಟ್ ಒಳಗೆ ಏನೋ ಇದೆ. ಆದರೆ ನನ್ನ ಹತ್ತಿರ ಇಲ್ಲ, ಅದೇನು?


ಗೋಪಿ: ಹಣ.

ಮೇಡಂ: ನೀನು ನಿಂತು ಮಾಡ್ತಿಯಾ, ಆದರೆ ನಾಯಿ ಅದನ್ನೇ ಒಂದು ಕಾಲು ಎತ್ತಿ ಮಾಡುತ್ತೆ, ಅದೇನು?

ಗೋಪಿ: ಶೇಕ್ ಹ್ಯಾಂಡ್.

ನೀತಿ: ಏನೇನೋ ಯೋಚನೆ ಮಾಡಿದ್ದು ಸಾಕು. ನೀವೂ ಕೂಡ ಗೋಪಿ ತರಹ ಜಾಣರಾಗಿ!

ದೈವ ರಕ್ಷಕರಿಗೆ



ನೆತ್ತರಲಿ ಬೆರಳನದ್ದಿರುವಿರಿ,
ತೆಗೆದು ಬಾಯಿಗಿಟ್ಟುಕೊಳ್ಳಿ
ಸಾವಿನ ಬಳಿ ಅಳುತಿದ್ದಾರೆ ಜನ
ಕಣ್ಣೀರಲ್ಲಿ
ಕೈತೊಳೆದು ಕೊಳ್ಳಿ

ಕತ್ತಲಿಗೆಂದು
ನೀವೇ ಹಚ್ಚಿಕೊಂಡಿರುವ
ಬೆಂಕಿಯಲ್ಲಿ
ಬನ್ನಿ, ಚಳಿ ಕಾಯಿಸಿಕೊಳ್ಳಿ
ಒಳಗೆ ಅಮಾಯಕರ
ತಲೆ ಸುಡುತ
ಲಟಪಟನೆ ಸಿಡಿದು
ಸಂಗೀತವಾಗುತಿದೆ, ಕುಣಿಯಿರಿ


ಬದುಕುಳಿದವರಿಗೆಲ್ಲ
ತಪ್ಪದೇ ಬಂದೂಕು ತಂದುಕೊಡಿ
ಎದೆಯನ್ನು ಬಾಂಬಾಗಿಸಿ
ನಿಜ, ನೀವಿಲ್ಲದಿದ್ದರೆ
ಸತ್ತೇ ಹೋಗುತ್ತಾನೆ
ದೇವರನ್ನು ರಕ್ಷಿಸಿ

ಪಾಪಿಗಳೆಲ್ಲ ನಾಶವಾಗಬೇಕು
ನನ್ನನ್ನು ಕೊಂದುಬಿಡಿ
ನಿಮ್ಮನೊಪ್ಪದ ಮನುಷ್ಯರನ್ನೆಲ್ಲ
ಹುಡುಹುಡುಕಿ ಕೊಲ್ಲಿ
ಯಾವ ಗರ್ಭದಲ್ಲೂ
ಉಳಿಯದಿರಲಿ ನಿಮ್ಮ ವೈರಿ

ಕೊನೆಗಾದರೂ
ನೀವು ರಕ್ಷಿಸಿದ ದೇವರಿಗೆ
ಮರೆಯದೇ ಹೇಳಿಬಿಡಿ
ಭೂಮಿಯಲಿ ಮೊದಲು
ಮನುಷ್ಯರೂ ಇದ್ದರೆಂಬ ಸತ್ಯವನ್ನು.

● ಗಣೇಶ ಹೊಸ್ಮನೆ

ಯಾರ ಹೃದಯದಲ್ಲೂ ಯಾರೂ ಇರಲ್ಲವಾ?



ಪಾರ್ವತೀಶ

ಅವತ್ತು ಮಾರ್ಚ್ 8. 'ಲಂಕೇಶ್' ಬಳಗದ ವಾರ್ಷಿಕೋತ್ಸವದ ಸಂಭ್ರಮ. ಲಂಕೇಶ್‌ರಿಗೆ 74. ಲಂಕೇಶ್ ವಾರಪತ್ರಿಕೆಗೆ ಐದನೇ ವರ್ಷ, ಗ್ರೈಡ್‌ಗೆ ಮೂರು ತುಂಬಿ ನಾಲ್ಕು, ಲಂಕೇಶ್ ಪ್ರಕಾಶನಕ್ಕೆ ಎರಡು, ಗ್ರೈಡ್ ಪ್ರಕಾಶನಕ್ಕೆ ಒಂದನೇ ಮಹಂತ ಕಾಲ ದಾಟಿ ಬಂದ ಸಮಾರಂಭ ಅದು. ಈ ಪುಟ್ಟ ಕೂಸುಗಳ ಗಾರ್ಡಿಯನ್‌ಗಳಿಂದ ರವೀಂದ್ರ ಕಲಾಕ್ಷೇತ್ರ ಎಂದಿನಂತೆ ಹೌಸ್‌ಫುಲ್ ಆಗಿತ್ತು. ವೇದಿಕೆಯಲ್ಲಿನ ವಿಶೇಷ ಸಂಯೋಜನೆಯಾಗಿ ಕ್ಯಾಪ್ಟನ್ ಗೌರಿ, ಕಿ.ರಂ. ನಾಗರಾಜ್, ಚಂಪಾ, ಇಂದೂಧರ, ಡಾ. ಪ್ರಭುದೇವ, ಶಿವಸುಂದರ್ ಮತ್ತು ಕುಮಾರ ಸಮತಳ ಕುಳಿತಿದ್ದರೆ ಅವರ ಬೆನ್ನಿಗೆ ಜನರತ್ತ ಮುಖ ಮಾಡಿ ನಗುತ್ತಿದ್ದ ಲಂಕೇಶರ ಚಿತ್ರ. ನಮಗೆ ನೆನಪಿರುವ ಮಟ್ಟಿಗೆ 'ಲಂಕೇಶ್' ಹೆಸರಿರುವ ಮುಖ್ಯ ಸಮಾರಂಭವೊಂದರಲ್ಲಿ ಎರಡು ದಶಕಗಳ ನಂತರ ಚಂಪಾ ಭಾಗವಹಿಸುತ್ತಿದ್ದರು ಮತ್ತು ಎಲ್ಲರೂ move ಆಗುವಂತ ಮಾಗಿದ ಅಲ್ಲಲ್ಲಿ ತಮಾಷೆಯ ಹೃದಯಸ್ಪರ್ಶಿ ಭಾಷಣ ಮಾಡಿದರು ಚಂಪಾ.

'ಮರೆಯುವ ಮುನ್ನ' ಬಿಡುಗಡೆ ಮಾಡಿದ ಕಿರಂ ಅದರೊಂದಿಗೆ ನೀಲು ಪದ್ಯಗಳ ಎರಡನೇ ಸಂಪುಟದಲ್ಲಿ ವಿಹರಿಸುತ್ತಾ ಚಂದನೆ ಲಹರಿಯ ಮಾತನಾಡಿದರು.

ಅದಕ್ಕೂ ಮುನ್ನ ಅಂಕಣಕಾರ ಶಿವಸುಂದರ್ 'ಸಮಕಾಲೀನ ಕರ್ನಾಟಕ'ದ ರಾಜಕೀಯಾರ್ಥಿಕ ದುಃಸ್ಥಿತಿಯ ಬಗ್ಗೆ ಹಾಗೂ ಕೋಮುವಾದಿಗಳು ಸೃಷ್ಟಿಸುತ್ತಿರುವ ಸಾಮಾಜಿಕ ಕೆಡುಕುಗಳ ಕುರಿತು ವಿಶ್ಲೇಷಿಸಿದ್ದರು.





ಚಿಂತಕ ಇಂದೂಧರ ಹೊನ್ನಾಪುರ ಕೋಮುವಾದಿ ಸರ್ಕಾರದೊಂದಿಗೆ ವಿಲೀನವಾಗುತ್ತಿರುವ ಕೆಲ ಪ್ರಗತಿಪರರ ಬಗ್ಗೆ ಆಕ್ಷೇಪಿಸಿದರು.

ನಂತರ ಬಂದದ್ದೇ ಈ ಹೃದಯದ ವಿಚಾರ.

ಲಂಕೇಶರ ದೀರ್ಘಕಾಲದ ಮಿತ್ರ, ಈಗಿನ ಬೆಂಗಳೂರು ವಿವಿಯ ನೂತನ ಉಪಕುಲಪತಿ ಡಾ. ಪ್ರಭುದೇವ ಹಳೆಯ ನೆನಪುಗಳ ಬುತ್ತಿಯನ್ನೇ ಹೊತ್ತು ತಂದಿದ್ದರು. 'ನನಗೆ ಭಾಷಣ ಕಲೆ ಗೊತ್ತಿಲ್ಲ' ಅನ್ನುತ್ತಲೇ ಲಂಕೇಶರೊಂದಿಗಿನ ಅವರ ಒಡನಾಟದ ಅನೇಕ ಸಂದರ್ಭಗಳನ್ನು ನವಿರಾಗಿ ನಿರೂಪಿಸುತ್ತಲೇ 'ಲಂಕೇಶ್ ವಿಪರೀತ ಭಾವುಕತೆಯ ಆದರೆ practicality ಇದ್ದ ಗೆಳೆಯ' ಅಂದರು. ಹಾಗೆನ್ನುತ್ತಲೇ ನೀಲು ಪದ್ಯವೊಂದನ್ನು ಕೋಟ್ ಮಾಡುತ್ತಾ

"ಯಾರ ಹೃದಯದಲ್ಲಿ ಯಾರೂ ಇರಲ್ಲ ಅಂತ ನೀಲು ಹೇಳಿದ್ದು ಸರಿನೇ ಇರಬಹುದು. ಯಾಕೆಂದರೆ ನಾನು ಇದುವರೆಗೂ ಹತ್ತು ಸಾವಿರ ಹೃದಯಗಳನ್ನು ಬಗೆದು ಚೆಕ್ ಮಾಡಿ ನೋಡಿದೀನಿ, ಅಲ್ಲೆಲ್ಲಾ ಯಾರ ಹೃದಯದಲ್ಲೂ ನನಗೆ ಯಾರೂ ಕಾಣಿಸಲಿಲ್ಲ" ಎಂದು ಮಾತು ಮುಗಿಸಿದರು ಡಾ. ಪ್ರಭುದೇವ್.

ಬಹುಶಃ ಲಂಕೇಶರ ಯಾವುದೋ ವಿಷಾದದ ಗಳಿಗೆಯಲ್ಲಿ ದಾಖಲಾಗಿರುವ ಈ ನೋವಿನ ಮಾತುಗಳು ವೈದ್ಯ ವಿಜ್ಞಾನದ ಪ್ರಕಾರ ಸರಿಯೇ ಇರಬಹುದು

ಆದರೆ

ಮನುಷ್ಯನ ಭಾವನೆ, ಕಲ್ಪನೆ, ಅನಿಸಿಕೆಗಳು ಎಕ್ಸ್‌ರೆ, ಸ್ಕ್ಯಾನಿಂಗ್, ಇಸಿಜಿಗಳಿಗೆ ಸಿಕ್ಕಿಬೀಳುವಂತದ್ದಲ್ಲವಲ್ಲ.

ಹಾಗಂತಲೇ ಮಾತು ಶುರು ಮಾಡಿದ ನಾನು ಪರಸ್ಪರರ ಹೃದಯ-ಮನಸ್ಸುಗಳಲ್ಲಿ ನಾವೆಲ್ಲಾ ಇರುವುದರಿಂದಲೇ ಇವತ್ತು ರವೀಂದ್ರ ಕಲಾಕ್ಷೇತ್ರದಲ್ಲಿ ಸೇರಿದ್ದೇವಲ್ಲ ಎಂದು ತಮಾಷೆ ಮಾಡಿದೆ. ತಮಾಷೆಯಾಚೆಗಿನ ಮಾತೇನೆಂದರೆ ನಮ್ಮೊಳಗೆ ಈಗಲೂ ತಿದಿ ಒತ್ತಿದಂತೆ ಲಂಕೇಶ್, ರಾಮದಾಸ್, ತೇಜಸ್ವಿ, ಸಾಕೇತ್, ಪ್ರೊ. ಕೃಷ್ಣಪ್ಪ ನಂಜುಂಡಸ್ವಾಮಿ ಇವರೆಲ್ಲರೂ ಪ್ರತಿಭಟಿಸುವ ಕಾವನ್ನು ಆರದಂತೆ ಉಳಿಸುತ್ತಿದ್ದಾರೆ.

ಈ ನಾಲ್ಕು ವರ್ಷಗಳ ನಮ್ಮ ಕೆಲಸ ಹಾಗೂ ಜನರೊಂದಿಗಿನ ಒಡನಾಟದಲ್ಲಿ ನಾವರಿತುಕೊಂಡಿರುವ ಸತ್ಯ ಇದು. ಈ ಕರ್ನಾಟಕ ಕುರಿತಂತೆ ನಮ್ಮ ಗ್ರಹಿಕೆ ತಿಳಿವಳಿಕೆಗಳನ್ನು ಮತ್ತೆಮತ್ತೆ ಚೆಕ್ ಮಾಡಿಕೊಳ್ಳುತ್ತಾ, ಸಾಮಾಜಿಕ ನ್ಯಾಯದ ನಮ್ಮ ಬದ್ಧತೆಯನ್ನು ಇನ್ನಷ್ಟು ಗಟ್ಟಿಗೊಳಿಸಿಕೊಂಡು ನಾವು ಈ ನಾಲ್ಕು ವರ್ಷಗಳನ್ನು ಕಳೆದಿದ್ದೇವೆ.

ಲಂಕೇಶ್ ತಮ್ಮಿಡೀ ಜೀವನವನ್ನು ಇದೇ ಕಾಳಜಿಗಳಿಗಾಗಿ ನೀಡಿದರು. ಕಿರಂ, ಚಂಪಾ ಮತ್ತು ಅನೇಕ ಜೊತೆಗಾರರ ಕಾಳಜಿಗಳೂ ಇದೇ ಆಗಿವೆ. ನಂಜುಂಡಸ್ವಾಮಿ, ರಾಮದಾಸ್ ಆಶಿಸಿದ್ದು, ಬದುಕಿದ್ದೂ ಇದಕ್ಕೆ ತಾನೆ. ಅವತ್ತು ವೇದಿಕೆಯ ಮೇಲಿದ್ದ ಅತೀ ಕಿರಿಯನೆಂದರೆ ಕುಮಾರ್ ಸಮತಳ. ಈತ ತನ್ನ ಬದುಕಿನ ಮೂರ್ನಾಲ್ಕು ವರ್ಷಗಳನ್ನು ಜೈಲುವಾಸಕ್ಕೆ ನೀಡಿದ. ಸಾಕೇತ್ ತನ್ನ ಪ್ರಾಣವನ್ನೇ ಬಲಿಕೊಟ್ಟ.

ಇವೆಲ್ಲಾ ನಮ್ಮ ಕರ್ನಾಟಕವನ್ನು ಸರಿಯಾದ ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವ, ಇಲ್ಲಿನ ಬದುಕನ್ನು ಇನ್ನಷ್ಟು ಸಹನೀಯಗೊಳಿಸುವಂತೆ ಬದಲಾಯಿಸುವ ಪ್ರಯತ್ನದ ಭಾಗಗಳಾಗಿವೆ.

ನೀವೊಮ್ಮೆ ಸಮತಳನ 'ಜೈಲೆಂಬ ಲೋಕದಲ್ಲಿ' ಓದಿ ನೋಡಿ. ಅಲ್ಲಿ ನಾವು ಇದುವರೆಗೂ ಕಂಡಿರದ ಕೇಳಿರದ ಕರ್ನಾಟಕದ ಬದುಕಿನ ಚಿತ್ರಣವಿದೆ. ಮಲೆನಾಡೆಂದರೆ ತಣ್ಣನೆಯ, ಸಮೃದ್ಧಿಯ, ನೆಮ್ಮದಿಯ ಪ್ರಾಂತ್ಯವೆಂಬ ನಮ್ಮ ತೆಳು ಗ್ರಹಿಕೆಯನ್ನು ಸಾಕೇತ್ ಮತ್ತವರ ಜೊತೆಗಾರರು ಸುಳ್ಳೆಂದು ನಿರೂಪಿಸಿದ ರೀತಿಯೇ ಕುಮಾರ್ ಜೈಲಿನೊಳಗೆ ಇರುವ ಮಿನಿ ಕರ್ನಾಟಕದ ಒಂದು ಭಯಾನಕ ಜಗತ್ತನ್ನು ನಮಗೆ ತೋರಿಸುತ್ತಾರೆ.

ಮೊದಲೇ ಹೇಳಿದಂತೆ ನಮಗೆ ನಮ್ಮದೇ ಕರ್ನಾಟಕದ ಸ್ಪಷ್ಟ ಚಿತ್ರಣ ಗ್ರಹಿಕೆ ಇನ್ನೂ ಸಿಗಬೇಕಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರ ಅನುಭವ, ತಿಳಿವಳಿಕೆಗಳನ್ನು ಒಂದೆಡೆ ತಂದುಕೊಂಡು ನಮ್ಮ ರಾಜಕೀಯ ಗ್ರಹಿಕೆಯನ್ನು ಇನ್ನಷ್ಟು ಹರಿತ ಮಾಡಿಕೊಳ್ಳಬೇಕಿದೆ. ಜೊತೆಗೆ ಕೋಮುವಾದಿ ಫ್ಯಾಸಿಸ್ಟರ ವಶದಲ್ಲಿರುವ ವಿವೇಕಾನಂದ, ಭಗತ್ ಸಿಂಗ್‌ರನ್ನು ಅವರಿಂದ ಬಿಡಿಸಿಕೊಂಡು, ಮಾಫಿಯಾ ಗುಂಪುಗಳ ಒತ್ತೆಸೆರೆಯಲ್ಲಿರುವ ಕುವೆಂಪು ಮತ್ತು ಕನ್ನಡತನವನ್ನು ವಿಮೋಚನೆಗೊಳಿಸಿ ಮತ್ತೆ ಜನಸಾಮಾನ್ಯರ ಕೈಗೆ ಹೋರಾಟ ಪ್ರತಿಭಟನೆಗಳ ಅಸ್ತ್ರವಾಗಿ ತಲುಪಿಸಬೇಕಿದೆ.

ನಿಸ್ಸಂಶಯವಾಗಿ ನಿಮಗೆಲ್ಲರಿಗೂ ಹಾಗೂ 'ಲಂಕೇಶ್' ಬಳಗಕ್ಕೆ ಇದರಲ್ಲಿ ಒಂದು ಪಾತ್ರವಿದೆ.

ಅಲ್ಲವೆ?

ಮಾರ್ಚ್ 8 ರ ಸಮಾರಂಭದ spirit ನೋಡಿ ನಮಗೆಲ್ಲಾ ಹೀಗನ್ನಿಸಿದೆ.

■


ರೈತನಾಯಕ ನೀರ್ಥಡಿ ರಾಜಣ್ಣರ ಕುಟುಂಬಕ್ಕೆ ನೆರವಾಗೋಣ

ಇದು ನಮ್ಮ ಕರ್ತವ್ಯ ಮತ್ತು ಕಾಳಜಿಗಳ ಭಾಗವಾಗಿರಬೇಕು ಎಂಬ ಕಾರಣಕ್ಕೆ ಈ ಮನವಿ ಮಾಡುತ್ತಿದ್ದೇವೆ.

ದಾವಣಗೆರೆಯ ರೈತ ನಾಯಕ ನೀರ್ಥಡಿ ರಾಜಣ್ಣ ಕಳೆದ ಫೆಬ್ರವರಿ 23 ರಂದು ತೀರಿಕೊಂಡರು. ಈ ಬಗ್ಗೆ 'ಲಂಕೇಶ್' ಲೇಖನವನ್ನು ಪ್ರಕಟಿಸಿತ್ತು. ಕೇವಲ ನಲವತ್ತೆರಡು ವರ್ಷದವರಾಗಿದ್ದ ರಾಜಣ್ಣ ಕರ್ನಾಟಕ ಕಂಡ ಅಪ್ರತಿಮ ಪ್ರಾಮಾಣಿಕ ಹೋರಾಟಗಾರರಲ್ಲಿ ಒಬ್ಬರಾಗಿದ್ದರು. ಸಾಧಾರಣ ಬಡರೈತರಾಗಿದ್ದ ರಾಜಣ್ಣನವರ ಅಕಾಲಿಕ ನಿಧನದಿಂದ ಅವರ ಕುಟುಂಬ ಈಗ ಸಂಕಷ್ಟಕ್ಕೆ ಸಿಲುಕಿದೆ. ನಾವು ನೀವೆಲ್ಲಾ ಈಗ ಕೈಲಾದಷ್ಟು ಮಟ್ಟಿಗೆ ಅವರಿಗೆ ನೆರವಾಗುವುದು ಈ ಸಂದರ್ಭದ ಅಗತ್ಯವಾಗಿದೆ.

ದಯವಿಟ್ಟು ನಿಮಗೆ ಸಾಧ್ಯವಿರುವಷ್ಟು ನೆರವನ್ನು ರಾಜಣ್ಣನವರ ಪತ್ನಿ ಶ್ರೀಮತಿ ಶಾರದಮ್ಮನವರಿಗೆ ನೇರವಾಗಿ ಕಳುಹಿಸಿ.

ಅವರ ಎಸ್‌ಬಿ ಅಕೌಂಟ್ ನಂ. 30714071558 ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ಶಾಖೆ



ಲಂಕೇಶ್ ಆಲೋಚನೆಗಳ ಅಕ್ಷರ ಲೋಕ


ಖಾವಿಧಾರಿ ಸ್ವಾಮಿ ಸನ್ಯಾಸಿಗಳೆಲ್ಲ ದೈವಾಂಶ ಸಂಭೂತರೆಂಬ ಮುಗ್ಧ ಜನತೆಯ ನಂಬಿಕೆಯ ದುರ್ಲಾಭ ಪಡೆದುಕೊಂಡು ತಮ್ಮನ್ನು ಪೊಲೀಸ್, ಕಾನೂನು, ರಾಜ ಕಾರಣಿಗಳಾರೂ ಮುಟ್ಟಲು ಸಾಧ್ಯವಿಲ್ಲವೆಂಬ ಹುಂಬತನದಿಂದ ತಮ್ಮ ಧರ್ಮಾಂಧತೆಯ ಹಿಡನ್ ಅಜೆಂಡವನ್ನ ರಾಜಾರೋಷವಾಗಿ ಹಿಂದೂ ಸಮಾಜೋತ್ಸವ ಹೆಸರಲ್ಲಿ ಅಸಾಂವಿಧಾನಿಕವಾಗಿ ಬಿತ್ತರಿಸಲು ಯತ್ನಿಸುತ್ತಾ ಆ ಮೂಲಕ ಧರ್ಮ ಧರ್ಮಗಳೊಳಗೆ ಮುಗ್ಧ ಜನತೆಯನ್ನು ಎತ್ತಿಕಟ್ಟಲು ಪ್ರಚೋದಿಸುತ್ತಿರುವ ಪೇಜಾವರರಂತವರ ನೀಚತನಕ್ಕೆ ಕಡಿವಾಣ ಬೀಳಬೇಕಿದೆ.

ಜಿ.ರಾಜಶೇಖರರ ಲೇಖನದಲ್ಲಿರುವ ಫೋಟೋ (ಸಮಾಜೋತ್ಸವದ ಪೂರ್ವಭಾವಿ ಸಭೆಯ ಚಿತ್ರ)ದಲ್ಲಿ ಒಂದು ಬದಿ ಕಲ್ಲಡ್ಕದ ಬ್ರಾಹ್ಮಣ don ಇದ್ದರೆ ಇನ್ನೊಂದು ಬದಿಯಲ್ಲಿ ಇನ್ನೊಬ್ಬ ಬ್ರಾಹ್ಮಣ ಅಭಿನವ ಚಾಣಕ್ಯ ಪೇಜಾವರ. ಇವರ ನಡುವೆ ಮೂವರು ಶೂದ್ರ ಸ್ವಾಮೀಜಿಗಳು ವ್ಹಾ! ಈ ಚಿತ್ರ ದಕ್ಷಿಣ ಕನ್ನಡ ಜಿಲ್ಲೆಯ ಸದ್ಯದ ಸ್ಥಿತಿಗೆ ಕೈಗನ್ನಡಿ ಹಿಡಿಯುವಂತಿದೆ. ಅಂದರೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಪೇಜಾವರರಂಥ ಬ್ರಾಹ್ಮಣ ಮನಸ್ಸುಗಳು ಯಾವ ರೀತಿಯಲ್ಲಿ ಶೂದ್ರರನ್ನು ಬಳಸಿ ಕೊಳ್ಳುತ್ತಿವೆ ಅಂತ!! ಇದೇ ಪೇಜಾವರ ಸ್ವಾಮಿ ಮತಾಂತರ ತಡೆಗೆ ಪೂರಕವಿರಲಿ ಎಂದು ಹಮ್ಮಿಕೊಂಡ 'ಗೀತಾ ಅಭಿಯಾನ'ವನ್ನು ದ.ಕ. ಜಿಲ್ಲೆಯಲ್ಲಿ ನಡೆಸಿ ಕೊಟ್ಟದ್ದು ಇದೇ ಮೇಲಿನ ಶೂದ್ರ ಸ್ವಾಮೀಜಿಗಳು. ಇದೇ ಒಡಿಯೂರು, ಕೊಲ್ಯ ಸ್ವಾಮಿಗಳು ಪೇಜಾವರರಿಂದ ಪ್ರೇರಿತರಾಗಿ ದಲಿತರ ಮನೆಗೆ ತೆರಳಿ ಭಗವದ್ಗೀತೆಯನ್ನು ಹಂಚಿದ್ದು. ಆದರೆ ದಲಿತರಿಗೆ ಬೇಕಿರುವುದು ಸಾಮಾಜಿಕ ಪ್ರೀತಿಯೇ ವಿನಃ ಈ ದರಿದ್ರ ಗೀತೆ ಅಲ್ಲವೆಂದು ಇವರಿಗೆಲ್ಲ ಹೇಳುವವರು ಯಾರು?

ಮೊನ್ನೆಯ ಸಮಾವೇಶದಲ್ಲೂ ಈ ಪೇಜಾವರ ಸ್ವಾಮಿ ತನ್ನ ಮಾಮೂಲಿನ- "ಎಲ್ಲರೂ ಅಸ್ಪೃಶ್ಯತೆ ನಿವಾರಣೆಗೆ ಪಣ ತೊಡಿರಿ" ಎಂದು ಕರೆಕೊಟ್ಟಿದ್ದರು. ಆದರೆ ಈತನಿಗೆ ಇತ್ತೀಚೆಗೆ ಮಾದಿಗರು ಪ್ರೀತಿಯಿಂದ ಕರೆದ ಭೋಜನಕ್ಕೆ ಮಾತ್ರ ಬರಲು ಬ್ರಾಹ್ಮಣಿಕೆಯೇ ಅಡ್ಡಿಯಾಯಿತಂತೆ.

ಸದಾನಂದ ಗೌಡರ ಪರಮವೈರಿ ಪುತ್ತೂರು ಶನಿಪೂಜೆ ಖ್ಯಾತಿಯ ಅರುಣಕುಮಾರ್ ಪುತ್ತಿಲರ ರಾಮಸೇನೆಯನ್ನು ಬಾಯ್ಮುಚ್ಚಿಸಲು ರಾಮಸೇನೆಯ ಮುತಾಲಿಕ್ ಪ್ರಚೋದನಾಕಾರಿ ಹೇಳಿಕೆ ಕೊಟ್ಟನೆಂಬ ನೆಪದಲ್ಲಿ ಆತ ಮಂಗಳೂರಿಗೆ ಒಂದು ವರ್ಷ ಬಾರದಂತೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿದೆ. ಆದರೆ ಮುತಾಲಿಕ್‌ಗಿಂತಲೂ ಖತರ್‌ನಾಕ್ ಆಗಿರುವ ಪೇಜಾವರ ಸ್ವಾಮಿಯ ಮೇಲೆ ನಿರ್ಬಂಧ ಬೀಳುವುದು ಯಾವಾಗ?

-ಶಶಿ ಪುತ್ತೂರು, ದಕ್ಷಿಣ ಕನ್ನಡ



ಸಾಬು ಎಂಬ ಜಗತ್ತು ಕಂಡ ಅದ್ಭುತ ಮಾವುತ, ಕಲಾವಿದ ಮತ್ತು ಯೋಧ ಭಾರತೀಯ ಮೂಲದವನೇ ಆಗಿದ್ದ ಎಂಬುದನ್ನು ಓದಿ ರೋಮಾಂಚನ ವಾಯಿತು. ಗೌರಿಯವರ ಬರಹದ ಆಪ್ತತೆ ಬಲು ಸೊಗಸು.

-ಟಿ. ಯಲ್ಲಪ್ಪ, ಬೆಂಗಳೂರು

ನಮ್ಮ ನೆಚ್ಚಿನ 'ಲಂಕೇಶ್ ವಾರ್ಷಿಕೋತ್ಸವ'ದಲ್ಲಿ ಈ ಸಾರಿ ಭಾಗವಹಿಸಲಾಗಲಿಲ್ಲ. ನಾಡಿನಲ್ಲಿ ಅದೆಷ್ಟೋ ಪತ್ರಿಕೆಗಳು ಹುಟ್ಟಿ 'ನೀರ ಮೇಲಿನ ಗುಳ್ಳೆ' ಆದವು. ಆದರೆ 'ಲಂಕೇಶ್' ಅದಕ್ಕೆ ವಿರುದ್ಧವಾಗಿ ಐದನೇ ವರ್ಷಕ್ಕೆ ಕಾಲಿಟ್ಟು ನಾಡಿನ ಆಗು-ಹೋಗುಗಳಿಗೆ ಸ್ಪಂದಿಸುತ್ತಿರುವುದು ಸಂತಸ! ನನಗನಿಸುತ್ತಿದೆ, ಪಿ.ಲಂಕೇಶ್‌ರು ಇದ್ದಿದ್ದರೆ ಇಂದು ರಾಜ್ಯದಲ್ಲಿ ಕೋಮುವಾದಿ ಸರ್ಕಾರ ಬರುತ್ತಿರಲಿಲ್ಲವೇನೋ? ಈ ಅವಿವೇಕಿಗಳು ಕೋಮು ಸೌಹಾರ್ದ ಕಲಕಿ ಅಟ್ಟಹಾಸ ಮೆರೆಯುತ್ತಿದ್ದರೆ ಅದಕ್ಕೆ ಬಲಿಯಾಗುತ್ತಿರುವವರು ಮುಸ್ಲಿಂರು, ಕ್ರಿಶ್ಚಿಯನ್ನರು, ದಲಿತರು ಹಾಗೂ ಅಬಲೆಯರು. ಕೋಮುವಾದಿಗಳ ವಿರುದ್ಧ ಇರುವವರಿಗೆ ನಕ್ಸಲರು-ದೇಶದ್ರೋಹಿಗಳ ಪಟ್ಟ ಜೊತೆಗೆ ಕೇಸು, ಪೊಲೀಸ್ ಹಿಂಸೆ, ಕೋರ್ಟ್ ಕಟ್ಟೆಟ್ಟೆ ಬುತ್ತಿ. ಹೀಗಾಗಿ ಪ್ರಗತಿಪರ, ಸೌಹಾರ್ದ, ಪ್ರಜಾಪ್ರಭುತ್ವ ಮನಸ್ಸುಗಳ ಶಾಂತಿಯುತ ಹೋರಾಟಗಳ ಕೈಕಟ್ಟುತ್ತಿವೆ.

'ಲಂಕೇಶ್'ನಲ್ಲಿ ಕೋಮುವಾದಿಗಳ ವಿರುದ್ಧದ ಲೇಖನಗಳು, ವರದಿಗಳು ಸ್ವಲ್ಪ ಜಾಸ್ತಿಯಾದವೇನೋ ಎಂಬ ಭಾವನೆಯನ್ನು ಸರ್ಜಾಶಂಕರ್ ಹರಳಿಮಠ (ಶಿವಮೊಗ್ಗ) ಅವರು (ಮಾರ್ಚ್ 18 ರ ಸಂಚಿಕೆ) ವ್ಯಕ್ತಪಡಿಸಿದ್ದಾರೆ. ನನಗೂ ಕೆಲವು ವೇಳೆ ಹಾಗೆ ಅನಿಸಿದ್ದುಂಟು. ಆದರೆ ಯೋಚಿಸಿದರೆ ಪ್ರಸ್ತುತ ವಿದ್ಯಮಾನಗಳಿಂದಾಗಿ ಕೋಮುದಾದಿಗಳ ಬಗ್ಗೆ ಬರೆಯುವುದು ಅವಶ್ಯಕವಾಗಿದೆ. 'ಕಂಡಹಾಗೆ'ಯಲ್ಲಿ ಎಷ್ಟೋ ಬಾರಿ ಗೌರಿ ಮೇಡಂರವರು ಕೋಮುವಾದದ ಬಗ್ಗೆ ಮತ್ತೆ ಬರೆಯಲೇಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ಬೇಸರದಿಂದಲೇ ಬರೆದಿರುವುದನ್ನು ನೀವೂ ಗಮನಿಸಿರಬಹುದು.

ಲಂಕೇಶ್ ಪತ್ರಿಕೆಯಲ್ಲಿ ಚಳವಳಿ; ಲಂಕೇಶ್ ಆಲೋಚನೆಗಳ ಅಕ್ಷರ ಲೋಕ; ಲಂಕೇಶ್ ಸಮರ್ಥ ವಿರೋಧಪಕ್ಷ; ಜನಪರ ಹೋರಾಟಗಳ ಮಾರ್ಗದರ್ಶಿ; ಜೀವಪರ ಚಿಂತನೆಯ ಗಟ್ಟಿಶಕ್ತಿ; ಸಮಾಜವಾದಿ, ಪ್ರಗತಿಪರ ಪತ್ರಿಕೆ; ದಲಿತರ ಮತ್ತು ಅಲ್ಪಸಂಖ್ಯಾಂತರ ಒಡನಾಡಿ - ಹೀಗೆ ನಾನಾ ರೀತಿ ಹೆಮ್ಮೆಯಿಂದ ಪತ್ರಿಕೆಯನ್ನು ಕರೆದಿರುವ ನೀವು ಮತ್ತು ನಿಮ್ಮಂತಹ ನಾಡಿನ ಹಲವಾರು ಜನರಿಗೆ ಕೋಮುವಾದದ ಬಗ್ಗೆ ಸ್ವಲ್ಪ ಜಾಸ್ತಿ ಅನ್ನಿಸಿದರೂ ಯಾವ ಧಕ್ಕೆ ಇಲ್ಲ ಅಲ್ಲವೇ?

ಅಂದಹಾಗೆ ನೀವೇ ಹೇಳಿದ ಹಾಗೆ ನಿರುಪಣಾ ಶೈಲಿ, ವರದಿಗಾರಿಕೆಯ ಪ್ರಸೆಂಟೇಷನ್ ಕುರಿತು ಹೊಸದಾಗಿ ಚಿಂತಿಸುವುದು ಸೂಕ್ತವೇ. ಆದರೆ ಕೋಮುವಾದಿಗಳ ಬಗ್ಗೆ ಬರೆಯುವಾಗ ಸ್ವಲ್ಪ ಜಾಸ್ತಿ ಆದರೂ ಪರವಾಗಿಲ್ಲ, ಆದರೆ ಅದರಿಂದ ಪಲಾಯನ ಮಾಡುವುದಂತೂ ಎಂದಿಗೂ ಬೇಡ.

- ದಿ.ಎಲ್. ಮಂಜು, ಹೈದ್ರಾಬಾದ್

ಆಕೆ ಸತ್ತಾಗಲೂ ನಾನು ಬಣ್ಣ ಯುವುದಿಲ್ಲ!



ಮೃತಮಹೋತ್ಸವ ಸಂದರ್ಭದಲ್ಲಿ ತನ್ನ ತಂದೆ ತೂಗುದೀಪ್ ಶ್ರೀನಿವಾಸ್ ಸ್ತಕವನ್ನು ಹೊರತರದ ಬಗ್ಗೆ ದರ್ಶನ್ ಅಸಮಾಧಾನಗೊಂಡಿದ್ದಾರೆ. ಆದ್ದರಿಂದ ದರ್ಶನ್ ಒಂದು ದೊಡ್ಡ ಬೆಟಾಲಿಯನ್ ಕಟ್ಟಿಕೊಂಡು ಪತ್ರಿಕಾಗೋಷ್ಠಿ ಜಯಮಾಲಾ ಮೇಲೆ ಕೆಂಡಕಾರಿದರು. ಅಂದು ಅಸಮಾಧಾನ ಮತ್ತು ದಿಂದ ಕೂಡಿದ್ದ ದರ್ಶನ್ "ಜಯಮಾಲಾ ನಿಧನ ಹೊಂದಿದಾಗ ಮುಖಕ್ಕೆ ಬಣ್ಣ ತೆಗೆಯುವುದಿಲ್ಲ'' ಎಂದು ಅತಿರೇಕದ ಮಾತುಗಳನ್ನಾಡಿದರು. ಖಂಡಿತವಾಗಿಯೂ ದರ್ಶನ್ ವ್ಯಕ್ತಿತ್ವಕ್ಕೆ ಶೋಭೆ ಕೊಡುವಂತಹದ್ದಲ್ಲ.

ದಿನ ಗೋಷ್ಠಿಯಲ್ಲಿ ದರ್ಶನ್‌ಗೆ ಬೆಂಬಲ ಸಾರಲು ಪ್ರೇಮ್, ನಾಗೇಂದ್ರ ಅಜಿತ್, ತರುಣ್ ಸುಧೀರ್, ನಾಗಕಿರಣ್, ದಿನಕರ್ ತೂಗುದೀಪ್, ಶ್‌ರಾವ್, ಗಿರಿದಿನೇಶ್, ನವೀನ್ ಕೃಷ್ಣ ತರಹದ ನಟರ ದೊಡ್ಡ ದಂಡೇ ತ್ತು. ಮುಖ್ಯವಾಗಿ ಖಳನಾಯಕರುಗಳ ಮಕ್ಕಳಾದ ಇವರೆಲ್ಲ ತಮ್ಮ ಅಪ್ಪಂದಿರ ೇಂಬರ್ ಪುಸ್ತಕವನ್ನು ತರದಿರುವ ಬಗ್ಗೆ ಅಸಮಾಧಾನಗೊಂಡಿದ್ದರು.

ಬಗ್ಗೆ ಕೇಳಲು ದರ್ಶನ್ ಮತ್ತವರ ಸ್ನೇಹಿತರು ಚೇಂಬರ್ ಹೋದಾಗ ಜಯಮಾಲಾ ತುಂಬಾ ಉಡಾಫೆಯಿಂದ ಉತ್ತರಿಸಿದರು ಎಂಬುದು ಅವರ ನೆ. ಅವರ ಪ್ರಕಾರ ಜಯಮಾಲಾ ಸರ್ವಾಧಿಕಾರದ ಧ್ವನಿಯಲ್ಲಿ ಮಾತನಾಡುತ್ತಾ ಏನು ಬೇಕಾದರೂ ಮಾಡಿಕೊಳ್ಳಿ, ಈಗ ನಾವೇನೂ ಮಾಡಕ್ಕಾಗುವುದಿಲ್ಲ'' ಹೇಳಿದರಂತೆ.

ಆದರೆ ಜಯಮಾಲಾ ಅವರು "ಮೈಸೂರಿನಲ್ಲಿ ನಡೆಯಲಿರುವ ಅಮೃತ ಮಹೋತ್ಸವ ಸಮಾರಂಭದಲ್ಲಿ ನಾವು ಇನ್ನು ಕೆಲವರ ಪುಸ್ತಕವನ್ನು ಸ್ಮರಣ ಸಂಚಿಕೆ ರೂಪದಲ್ಲಿ ತರುತ್ತೇವೆ, ಮೊನ್ನೆ ಸಮಾರಂಭದಲ್ಲಿ 75 ಸಾಧಕರ ಬಗ್ಗೆ ಮಾತ್ರ ತರಲು ಸಾಧ್ಯವಾಯಿತು. ಅದರರ್ಥ ಉಳಿದವರನ್ನು ನಾವು ಅವಮಾನ ಮಾಡಿದ್ದೇವೆಂದಲ್ಲ..." ಎಂದು ಸ್ಪಷ್ಟೀಕರಣ ನೀಡಿದರು.

ಹಾಗೆಯೇ ದರ್ಶನ್ ಆಡಿದ್ದ ಮಾತುಗಳಿಗೆ ಪ್ರತ್ಯುತ್ತರವಾಗಿ "ಈ ಹುಡುಗರ ತಂದೆಯಂದಿರು ಬೆಳ್ಳಿ ಪರದೆಯ ಮೇಲೆ ಖಳನಾಯಕರಾಗಿದ್ದರೂ, ನಿಜಜೀವನದಲ್ಲಿ ಸಜ್ಜನಿಕೆ ಮೆರೆದು ನಾಯಕರಂತೆ ಬಾಳಿದವರು. ಅವರ ಮಕ್ಕಳು ಬೆಳ್ಳಿ ಪರದೆ ಮೇಲೆ ಹೀರೋಗಳಾದರೂ ನಿಜಜೀವನದಲ್ಲಿ ಖಳನಾಯಕರಂತೆ ವರ್ತಿಸುತ್ತಿದ್ದಾರೆ. ಅವರಿಗೆ ಅಪ್ಪಂದಿರ ಸಜ್ಜನಿಕೆ ಬರಲಿ ಅಂತ ಇವರಿಗೆಲ್ಲಾ ತಾಯಿಯ ಸ್ಥಾನದಲ್ಲಿರುವ ನಾನು ಶುಭ ಹಾರೈಸುತ್ತೇನೆ. ಮಕ್ಕಳು ತಾಯಿಗೆ ಕೆಟ್ಟದ್ದನ್ನು ಬಯಸಿದರೂ ತಾಯಿ ಮಾತ್ರ ಮಕ್ಕಳಿಗೆ ಎಂದೂ ಕೆಟ್ಟದ್ದನ್ನು ಬಯಸುವುದಿಲ್ಲ, ಇದು ನಮ್ಮ ಸಂಪ್ರದಾಯ" ಎಂದು ಹೇಳಿದರು.

ಅಂತೂ ಒಂದು ಸಣ್ಣ ವಿಷಯ ಅಮೃತಮಹೋತ್ಸವದ ನಂತರ ಇದೀಗ ದೊಡ್ಡ ವಿವಾದವಾಗಿ ಬೆಳೆಯುತ್ತಿದೆ. "ನಾವೆಲ್ಲಾ ಒಂದೇ ಕುಟುಂಬದವರು" ಎಂದು ಬುರುಡೆ ಬಿಡುತ್ತಿದ್ದ ಸಿನಿಮಾದವರು ಬೀದಿಯಲ್ಲಿ ಪರಸ್ಪರ ಕೆಸರೆರಚಾಡುತ್ತಿದ್ದಾರೆ. ಇದನ್ನು ಹಿರಿಯರು ನಿಂತು ಬಗೆಹರಿಸದಿದ್ದರೆ ಈ ಗಲಾಟೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಸೂರಪ್ಪನ ಹೊಸ ವರಸೆ!

ನಿರ್ಮಾಪಕ ಸೂರಪ್ಪ ಬಾಬು ಈಗ ಹೊಸ ವರಸೆ ಆರಂಭಿಸಿದ್ದಾರೆ. ಅದೇನೆಂದರೆ ಸಿನಿಮಾ ವಿತರಣೆ ಮಾಡುವ ಕಾಂಟ್ರ್ಯಾಕ್ಟನ್ನು ಪಡೆದುಕೊಳ್ಳುವುದು. ಈ ರೀತಿ ಇವರು ಪಡೆದುಕೊಂಡಿರುವ ಮೊದಲ ಕಾಂಟ್ರ್ಯಾಕ್ಟೇ 'ಗೌತಮ್' ಚಿತ್ರ. ಪ್ರೇಮ್ ಅಭಿನಯಿಸಿರುವ ಈ ಚಿತ್ರವನ್ನು ಬಾಬು ಬಿಡುಗಡೆ ಮಾಡಲು ಓಡಾಡುತ್ತಿರುವುದು ಸಂತೋಷದ ವಿಷಯ.

ಆದರೆ ದುಃಖದ ವಿಷಯವೆಂದರೆ ಇಷ್ಟು ಅದ್ದೂರಿಯಾಗಿ ನಿರ್ಮಿಸಿದ ಈ ಚಿತ್ರವನ್ನು ಅವರು ಕೈಲಾಸ್ ಮಿನಿ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಲು ಹೊರಟಿರುವುದು. "ದೊಡ್ಡ ಥಿಯೇಟರ್‌ನಲ್ಲಿ ರಿಲೀಸ್ ಮಾಡಿದರೆ ಜನ ಬರುವುದಿಲ್ಲ. ಆ ಕಾರಣಕ್ಕಾಗಿ ಹೀಗೆ ಮಾಡುತ್ತಿದ್ದೇವೆ" ಎಂದು ಬಾಬು ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ ಕೋಟ್ಯಂತರ ರೂಪಾಯಿ ಸುರಿದು ನಿರ್ಮಿಸಿದ ಚಿತ್ರವನ್ನು ಬೆಂಕಿಪೊಟ್ಟಣದಂತಿರುವ ಮಿನಿ ಥಿಯೇಟರ್‌ನಲ್ಲಿ ಬಿಡುಗಡೆ ಮಾಡಿದರೆ ಯಾರು ತಾನೇ ನೋಡುತ್ತಾರೆ?

ನಾಳೆ ಬಾಬು ಅವರ ಸ್ವಂತ ನಿರ್ಮಾಣದ ಚಿತ್ರವನ್ನೂ ಇದೇ ರೀತಿ ಬೆಂಕಿಪೊಟ್ಟಣದಲ್ಲಿ ಬಿಡುಗಡೆ ಮಾಡಿದಾಗ ಅವರನ್ನು ಅಭಿನಂದಿಸಬಹುದು. ಆದರೆ ಹಾಗೆ ಅಭಿನಂದಿಸಲು ಬಾಬು ಅವಕಾಶ ಕೊಡುತ್ತಾರೋ? ಯಾರದೋ ದುಡ್ಡು ಯಲ್ಲಮನ ಜಾತ್ರೆ ಎನ್ನುವುದು ಇದಕ್ಕೆ ತಾನೆ?

ಇನ್ನು ಮುಂದೆ ಬಾಬುಗೆ ತಮ್ಮ ಚಿತ್ರಗಳ ವಿತರಣಾ ಕಾಂಟ್ರ್ಯಾಕ್ಟ್ ನೀಡುವವರು ಹುಷಾರಾಗಿದ್ದರೆ ಬಚಾವ್!






ಈ ವರ್ಷ ಬಿಡುಗಡೆಯಾದ ಬಹುತೇಕ ಚಿತ್ರಗಳು ನೆಲಕಚ್ಚಿವೆ. ಇದ್ದುದರಲ್ಲಿ ಸ್ವಲ್ಪಮಟ್ಟಿಗೆ ಯೋಗೇಶ್ ನಟಿಸಿದ 'ಅಂಬಾರಿ' ಮತ್ತು ವಿಜಯ್ ಅಭಿನಯದ 'ಜಂಗ್ಲಿ' ಲಾಭ ಮಾಡದಿದ್ದರೂ ನಷ್ಟವನ್ನು ಅನುಭವಿಸಲಿಲ್ಲ. ಈ ಮಧ್ಯೆ ರಮೇಶ್ ನಿರ್ದೇಶಿಸಿ ಅಭಿನಯಿಸಿದ 'ವೆಂಕಟ ಇನ್ ಸಂಕಟ' ಕೂಡ ಪ್ರೇಕ್ಷಕರಿಗೆ ಪ್ರಾಣ ಸಂಕಟ ನೀಡಿತ್ತು.

ಕಳೆದ ವಾರದ ಕತೆಯಂತೂ ಈ ವರ್ಷದ ಕೆಟ್ಟ ಕನಸಿನಂತಿತ್ತು. ಆ ವಾರ ತೆರೆಕಂಡ ಮೂರು ಚಿತ್ರಗಳಲ್ಲಿ 'ಅಂಜದಿರು' ಎಂಬ ಚಿತ್ರದ ಬಗ್ಗೆ ಪ್ರೇಕ್ಷಕರು ಎಷ್ಟು ಅಂಜಿದರು ಎಂದರೆ ಆ ಚಿತ್ರ ಒಂದೇ ವಾರದಲ್ಲಿ ಥಿಯೇಟರ್‌ನಿಂದ ಎತ್ತಂಗಡಿಯಾಗಿದೆ. ಹಾಗೆಯೇ ಜೂನಿಯರ್ ಕಾಶೀನಾಥ್ ಅರ್ಥಾತ್ ಅವರ ಮಗ ಅಲೋಕ್ ನಟಿಸಿದ 'ಬಾಜಿ' ಚಿತ್ರದತ್ತಲೂ ಪ್ರೇಕ್ಷಕ ಬರಲೇ ಇಲ್ಲ. ಆದರೂ ಚಿತ್ರದ ನಿರ್ಮಾಪಕ ಎರಡನೇ ವಾರಕ್ಕೆ ಬಾಜಿ ಕಟ್ಟಿ ಅದು ಹೇಗೋ ಅದನ್ನು ಮುಂದುವರೆಸಿದ್ದಾರೆ. ಇದರಿಂದಾಗಿ ಅವರಿಗೆ ನಷ್ಟ ಹೆಚ್ಚಾಗಲಿದೆಯೇ ಹೊರತು ಯಾವ ಲಾಭವೂ ಆಗುವುದಿಲ್ಲ.

ಇವೆರಡರ ಮಧ್ಯೆ 'ಶಂಕರ ಪುಣ್ಯಕೋಟಿ' ಎಂಬ ಕಲಾತ್ಮಕ ಚಿತ್ರ ಕೂಡಾ ತೆರೆಕಂಡಿತು. ಈ ಸಿನಿಮಾ ನೋಡಿ 'ಪುಣ್ಯ' ಕಟ್ಟಿಕೊಳ್ಳುವುದು ಬೇಡವೇ ಬೇಡ ಎಂದು ಪ್ರೇಕ್ಷಕರು ತೀರ್ಮಾನಿಸಿದಂತಿದೆ. ಇಡೀ ಒಂದು ವಾರದಲ್ಲಿ ಒಂದೇ ಒಂದು ಷೋ ಕೂಡಾ ಇದು ಹೌಸ್‌ಫುಲ್ ಆಗಿಲ್ಲ ಎಂಬ (ಕು)ಖ್ಯಾತಿ ಒಳಗಾಗಿದೆ. 'ಶಂಕರ'ನೂ ಒಂದು ವಾರಕ್ಕೆ ಔಟ್ ಆಗಿದ್ದಾನೆ.



ಇವೆಲ್ಲವುಗಳ ನಡುವೆ ಸುಮಾರು ಹದಿನಾಲ್ಕು ತಿಂಗಳುಗಳ ಗ್ಯಾಪ್‌ನ ನಂತರ ಬಿಡುಗಡೆಯಾದ ವಿಷ್ಣು ಅಭಿನಯದ 'ನಂ ಯಜಮಾನ್ರು' ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆಲ್ಲಬಹುದು ಎಂದು ಗಾಂಧಿನಗರದವರು ಬಾಜಿ ಕಟ್ಟಿದ್ದರು. ಆದರೆ ವಿಷ್ಣು ವೃತ್ತಿ ಜೀವನದಲ್ಲಿ ಇದೇ ಮೊದಲ ಬಾರಿ ಎಂತಹ ಅವಮಾನವನ್ನು ಅನುಭವಿಸಿದ್ದಾರೆಂದರೆ ಆ ಚಿತ್ರ ರಾಜ್ಯಾದ್ಯಂತ ಮೊದಲ ಮೂರು ದಿನಗಳಲ್ಲಿ ಗಳಿಸಿದ್ದು ಕೇವಲ ಹತ್ತು ಲಕ್ಷ ರೂಪಾಯಿಗಳು ಎಂಬ ಸುದ್ದಿ ಬಂದಿದೆ.

ಈ ಸನ್ನಿವೇಶದಲ್ಲೇ ಸುದೀಪ್ ಅಭಿನಯದ 'ವೀರಮದಕರಿ' ಈ ವಾರ ಬಿಡುಗಡೆಗೊಳ್ಳುತ್ತಿದೆ. ಅದಾದ ನಂತರ ಮುಂದಿನ ವಾರ ಮಾಲಾಶ್ರೀ ಅಭಿನಯದ 'ಕಿರಣ್ ಬೇಡಿ' ಬರುತ್ತಿದ್ದಾಳೆ. ವಿಶೇಷವೆಂದರೆ ಇವೆರಡು ಚಿತ್ರಗಳಲ್ಲಿ ಸುದೀಪ್ ಮತ್ತು ಮಾಲಾಶ್ರೀ ಪೊಲೀಸ್ ಆಫೀಸರ್ ಪಾತ್ರಗಳನ್ನು ನಿರ್ವಹಿಸಿರುವುದು. ಲೇಡಿ ಪೊಲೀಸ್ ಮತ್ತು ಮೇಲ್ ಪೊಲೀಸ್ ನಡುವೆ ಯಾರು ಗೆಲ್ಲುತ್ತಾರೆ ಎಂದು ಈಗಲೇ ಹೇಳುವುದು ಕಷ್ಟ.



ಮಾಲಾಶ್ರೀ ಅಂತೂ ಹಿಂದಿನ ತರಹ ಥಳುಕು ಬಳುಕಿನ ವೈಯಾರಿಯ ಬದಲು ಡಬಲ್‌ಡಕ್ಕರ್ ತರಹ ಊದಿಕೊಂಡಿದ್ದಾರೆ. ಆದರೂ 'ಕಿರಣ್ ಬೇಡಿ' ಚಿತ್ರದ ಫೈಟಿಂಗ್ ದೃಶ್ಯಗಳಲ್ಲಿ ಅದ್ಭುತವಾಗಿ ಕಾಣಿಸಿಕೊಂಡಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಕಳೆದ ಹಲವಾರು ವರ್ಷಗಳಿಂದ ಬರೀ ಸೋಲನ್ನೇ ಉಣ್ಣುತ್ತಿರುವ ಅವರ ಪತಿ ನಿರ್ಮಾಪಕ ರಾಮು ಪಾಲಿಗೂ ಈ ಚಿತ್ರ ಗೆಲ್ಲಬೇಕಿದೆ.

ಆಕಸ್ಮಾತ್ ಈ ಎರಡು ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಗೆದ್ದರೆ ಕನ್ನಡ ಚಿತ್ರರಂಗದಲ್ಲಿ ಮತ್ತೆ ಸ್ವಲ್ಪಮಟ್ಟಿಗಾದರೂ ಉತ್ಸಾಹದ ವಾತಾವರಣವನ್ನು ಕಾಣಬಹುದು. ಇಲ್ಲದಿದ್ದರೆ ಸ್ಮಶಾನ ಮೌನ ಗಾಂಧಿನಗರವನ್ನು ಆವರಿಸುವುದರಲ್ಲಿ ಡೌಟೇ ಇಲ್ಲ.

LANKESH, Kannada Weekly Price Rs. 12/- 1-04-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಪ್ರಜ್ವಲ್ ಪ್ರಾಯಶ್ಚಿತ್ತ!

"ತಪ್ಪು ಮಾಡೋದು ಸಹಜ ಕಣೋ.... ತಿದ್ದಿ ನಡೆಯೋನು ಮನುಜಾ ಕಣೋ...." ಎಂದು ಪ್ರಜ್ವಲ್ ದೇವರಾಜ್ ಕಡೆ ತಿರುಗಿ ಹಾಡಿದರೆ ಉಚಿತವೆನಿಸುತ್ತದೆ.

ಕಳೆದ ಕೆಲ ದಿನಗಳಿಂದ ಪ್ರಜ್ವಲ್‌ನ ಹೆಸರು ವಿವಿಧ ಆರೋಪಗಳಿಂದಾಗಿ ಪ್ರಜ್ವಲಿಸುತ್ತಿದೆ. ಲೀಲಾ ಪ್ಯಾಲೇಸ್‌ನಂಥ ಹೋಟೇಲಿನಲ್ಲಿ ಪ್ರಜ್ವಲ್ ಹುಡುಗಿಯರೊಂದಿಗೆ ಉರುಳುಸೇವೆ ಮಾಡುತ್ತಿದ್ದಾನಂತೆ... ಇತ್ತೀಚೆಗೆ ಪ್ರಜ್ವಲ್‌ಗೆ ಟೈಮ್ ಸೆನ್ಸೇ ಇಲ್ಲ... ಶಿವರಾಜ್ ಕುಮಾರ್‌ರಂಥ ಸೀನಿಯರ್ ಹೀರೋ ಮುಂದೇನೇ ಧಂ ಹೊಡೀತಾನಂತೆ.... ಹೀಗೆ ಒಂದರ ಹಿಂದೆ ಒಂದು ಆರೋಪಗಳು ಆತನನ್ನು ಬಿಟ್ಟೂಬಿಡದೆ ಕಾಡುತ್ತಿವೆ.

ಇವೆಲ್ಲದರ ಜೊತೆಗೆ 'ಗುಲಾಮ' ಸೋತಾಗ "ಪತ್ರಕರ್ತರು ಬಾಯಿಗೆ ಬಂದಂತೆ ವಿಮರ್ಶೆ ಬರೆದು ನನ್ನ ಭವಿಷ್ಯಾನ ಹಾಳು ಮಾಡುತ್ತಿದ್ದಾರೆ" ಎಂದು ಹೇಳಿಕೆ ನೀಡಿದ್ದ. ಪ್ರಜ್ವಲ್‌ನ ಈ ಮಾತಿನಿಂದಾಗಿ ಆತನ ವಿರುದ್ಧ ಜಿದ್ದಿಗೆ ಬಿದ್ದ ಪತ್ರಕರ್ತರು 'ಕೆಂಚ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಈತನ ಮಾತಿನ ಸರದಿ ಬಂದಾಗ ಎಲ್ಲರೂ ಸೇರಿ 'ಧಿಕ್ಕಾರ' ಕೂಗಿ ಈತನನ್ನು ಗಾಬರಿಗೀಡುಮಾಡಿದ್ದರು.

ಮಾಧ್ಯಮದವರೊಂದಿಗೆ ದ್ವೇಷ ಕಟ್ಟಿಕೊಂಡು ಬದುಕಿ, ಬಾಳುವುದು ಕಷ್ಟಸಾಧ್ಯ ಎಂದು ಅರಿತಿರುವ ಪ್ರಜ್ವಲ್ ಮೊನ್ನೆ ಎಲ್ಲ ಪತ್ರಕರ್ತರಿಗೂ ಎಸ್ಸೆಮ್ಮೆಸ್ ಕಳಿಸಿ "I read the write up for 'SUPERMAN'... Its very supportive... thanks to all my well-wishers... Hope your blessing and support continues this way" ಎಂದು ತನ್ನ ಚಿತ್ರದ ಬಗ್ಗೆ ಬರೆದ-ಬರೆಯದ ಎಲ್ಲರಿಗೂ ಹೋಲ್‌ಸೇಲಾಗಿ ಎಸ್ಸೆಮ್ಮೆಸ್ ಬಿಟ್ಟು ಧನ್ಯನಾಗಿದ್ದಾನೆ.

ಹೀಗಾಗಿ ಪ್ರಜ್ವಲ್ in corrected way ಎಂದರೂ ತಪ್ಪಿಲ್ಲ.





ಪೊಲೀಸ್ in ಕ್ವಾಟರ್ಸ್

'ಸಯನೈಡ್' ಖ್ಯಾತಿಯ ಮತ್ತು 'ಮಿಂಚಿನ ಓಟ'ದ ಅಪಖ್ಯಾತಿಯ ರಮೇಶ್ ಸುಮಾರು ಒಂದು ವರ್ಷದ ನಂತರ ಮತ್ತೆ ಸಿನಿಮಾ ನಿರ್ದೇಶನಕ್ಕೆ ಕೈ ಹಾಕಿದ್ದಾರೆ. ಅವರ ಹೊಸ ಸಿನಿಮಾದ ಹೆಸರು 'ಪೊಲೀಸ್ ಕ್ವಾಟರ್ಸ್'.

ಈ ಚಿತ್ರದಲ್ಲಿ ಬಹುತೇಕ ಹೊಸ ಕಲಾವಿದರು ಪಾತ್ರ ನಿರ್ವಹಿಸಲಿದ್ದಾರೆ. ಮೊನ್ನೆ ಮೊನ್ನೆ ಬಿ.ಸಿ.ಪಾಟೀಲ್ 'ಸೆಲ್ಯೂಟ್' ಎಂಬ ಪೊಲೀಸ್ ಚಿತ್ರವನ್ನು ಆರಂಭಿಸಿದ ಬೆನ್ನಲ್ಲೇ ಈಗ ರಮೇಶ್ 'ಪೊಲೀಸ್ ಕ್ವಾಟರ್ಸ್' ಪ್ರಾರಂಭಿಸುತ್ತಿರುವುದು ಕಾಕತಾಳೀಯ.

ಯಾವುದು 200?

'ಆಪ್ತರಕ್ಷಕ' ವಿಷ್ಣುವರ್ಧನ್ ಅಭಿನಯದ 200ನೇ ಚಿತ್ರ ಎಂದು ಭಾರೀ ಪ್ರಚಾರ ಪಡೆದಿತ್ತು. ಆದರೆ ಇದು 200ನೇ ಚಿತ್ರ ಅಲ್ಲವೆಂದು ಸ್ವತಃ ವಿಷ್ಣುವರ್ಧನ್ ಅವರೇ ಹೇಳಿದ್ದಾರೆ.

ವಿಷ್ಣು ಅಭಿಮಾನಿಗಳ ಪ್ರಕಾರ ವಿಷ್ಣು ಅತಿಥಿ ನಟನಾಗಿ ಕಾಣಿಸಿಕೊಂಡ ಚಿತ್ರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದಂತೆ. ಈ ಕಾರಣಕ್ಕಾಗಿ ಈಗ ವಿಷ್ಣು ಎರಡು ಸಮಿತಿಗಳನ್ನು ರಚಿಸಿದ್ದಾರಂತೆ. ಆ ಸಮಿತಿಗಳು ವಿಷ್ಣು ಅವರ ಇನ್ನೂರನೇ ಚಿತ್ರ ಯಾವುದೆಂದು ಘೋಷಿಸಲಿವೆಯಂತೆ.


ಇದೂ ಒಂದು ಸುದ್ದಿ!



ಗುಂಡ್ರಗೋವಿ
ನವ್ಯಾ

ನಾನೇನಾದರೂ ಮುಖ್ಯಮಂತ್ರಿಯಾದರೆ?

ಮಾತು-ಮಂಥನದಲ್ಲಿ ವಿಷ್ಣು



"ನನ್ನ ಮತ್ತು ಡಾ. ರಾಜ್‌ಕುಮಾರ್ ನಡುವೆ ದ್ವೇಷವಿರಲು ಹೇಗೆ ಸಾಧ್ಯ? ನಾನು ಏಳು ವರ್ಷದವನಾಗಿದ್ದಾಗಲೇ ಅವರ ಸಿನಿಮಾ ನೋಡಿ ಅಣ್ಣಾವ್ರ ಅಭಿಮಾನಿಯಾದವನು. ನನಗೆ ಅವರು ಹೇಗೆ ತಾನೇ ಪ್ರತಿಸ್ಪರ್ಧಿಯಾಗಲು ಸಾಧ್ಯ?"

"ನನ್ನ ಮೊದಲ ಚಿತ್ರ ಬಿಡುಗಡೆಯಾದಾಗ ಬಸವನಗುಡಿಯ ಫುಟ್‌ಪಾತ್‌ನಲ್ಲಿ ಓಡಾಡುತ್ತಿದ್ದೆ. ಯಾರಾದರು ಹೆಣ್ಣುಮಕ್ಕಳು ನನ್ನನ್ನು ಗುರುತಿಸಲಿ ಎಂಬುದಷ್ಟೇ ನನ್ನ ಆಸೆಯಾಗಿತ್ತು, ಅವರು ನನ್ನನ್ನು ಗುರುತಿಸಿದರೆ ಸಂತೋಷಪಡುತ್ತಿದ್ದೆ. ಒಂದು ವೇಳೆ ಗುರುತಿಸದಿದ್ದರೆ ಮತ್ತೆ ಅವರ ಮುಂದೆ ಓಡಾಡುತ್ತಾ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದೆ. ನಟನಾದ ನಂತರ ಇದಷ್ಟೇ ಸಂತೋಷ ನೀಡುತ್ತಿದ್ದ ವಿಷಯ.... "

ಹೀಗೆ ತನ್ನ ಮನದಾಳದ ಆತಂಕ, ನೋವು-ನಲಿವು, ಅವಮಾನಗಳನ್ನೆಲ್ಲಾ ಅಪರೂಪಕ್ಕೆಂಬಂತೆ ಮೊನ್ನೆ ವಿಷ್ಣುವರ್ಧನ್ ಪತ್ರಕರ್ತರೊಂದಿಗೆ ಅಮೃತ-ಮಾತು-ಮಂಥನ ಕಾರ್ಯಕ್ರಮದಲ್ಲಿ ಹಂಚಿಕೊಂಡರು.

ಅಂದಿನ ಕಾರ್ಯಕ್ರಮದಲ್ಲಿ ವಿಷ್ಣು ಟಿಪಿಕಲ್ ರಾಜಕಾರಣಿಯ ಶೈಲಿಯಲ್ಲಿ "ನಾನೇನಾದರೂ ಮುಖ್ಯಮಂತ್ರಿಯಾದರೆ ಕರ್ನಾಟಕದಲ್ಲಿರುವ ಪ್ರತಿಯೊಬ್ಬನೂ ಕನ್ನಡ ಮಾತನಾಡಲೇಬೇಕು, ಕಲಿಯಲೇ ಬೇಕು ಎಂಬ ಕಟ್ಟಾಜ್ಞೆ ಹೊರಡಿಸುತ್ತೇನೆ. ಜನ ನನ್ನನ್ನು ಭಾಷಾಂಧನೆಂದು ಹೇಳಿದರೂ ಪರವಾಗಿಲ್ಲ, ಇದು ಈಗಿನ ಸಂದರ್ಭಕ್ಕೆ ತೀರಾ ಅಗತ್ಯ" ಎಂದು ಘೋಷಿಸಿದರು.

"ಚುನಾವಣೆಯಲ್ಲಿ ಮತಹಾಕುವ ಬದಲು, ನಮಗೆ ಬೇಕಾದ ಅಭ್ಯರ್ಥಿಗಳನ್ನು ನಾವೇ ಆಯ್ಕೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು" ಎಂಬ ವಿಚಿತ್ರ ಚಿಂತನೆಯನ್ನು ಸಹ ವಿಷ್ಣು ವ್ಯಕ್ತಪಡಿಸಿದರು. "ಇದು ಪ್ರಜಾಪ್ರಭುತ್ವ ವಿರೋಧಿ ಎಂದು ಅನಿಸುವುದಿಲ್ಲವೇ?" ಎಂಬ ಪ್ರಶ್ನೆಯಿಂದ ನುಣುಚಿಕೊಂಡ ವಿಷ್ಣು "ಪ್ರಜಾಪ್ರಭುತ್ವದಿಂದ ದೇಶ ಉದ್ಧಾರವಾಗಿದೆಯೇ?" ಎಂದು ಮರುಪ್ರಶ್ನೆ ಹಾಕಿದರು. ಹಿಂದೊಮ್ಮೆ ಇದೇ ವಿಷ್ಣು ತಾನು ಶಿವಸೇನೆಯ ಭಾಳಾಠಾಕ್ರೆಯ ಅಭಿಮಾನಿ ಎಂದು ಹೇಳಿ ವಿವಾದಕ್ಕೊಳಗಾಗಿದ್ದರು.

"ಜಾಗತಿಕ ಆರ್ಥಿಕ ಕುಸಿತ ಚಿತ್ರರಂಗವನ್ನೂ ಬಾಧಿಸುತ್ತಿರುವ ಈ ಸಂದರ್ಭದಲ್ಲಿ ಹಿಂದಿ ನಟರುಗಳಂತೆ ನೀವೆಲ್ಲಾ ಸಂಭಾವನೆಯಲ್ಲಿ ಕೊಂಚ ರಿಯಾಯಿತಿ ಯಾಕೆ ತೋರಿಸಬಾರದು?" ಎಂಬ ಪ್ರಶ್ನೆಗೂ ವಿಷ್ಣು ಜಾಣತನದಿಂದ "ಯಾವುದೇ ನಿರ್ಮಾಪಕ ಸಂಭಾವನೆ ನೀಡುವುದು ಯಶಸ್ಸಿಗೆ ವಿನಹ ನಟನಿಗಲ್ಲ" ಎಂದು ಹೇಳಿ ಉತ್ತರ ನೀಡದೆ ತಪ್ಪಿಸಿಕೊಂಡರು. "ಹಾಗಾದರೆ ನಿಮ್ಮ ಚಿತ್ರ ಸೋತಾಗ ನಿರ್ಮಾಪಕನಿಗೆ ಕಾಲ್‌ಶೀಟ್ ನೀಡಿ ಸಹಾಯ ಮಾಡಿದ್ದೀರಾ?" ಎಂದು ಕೇಳಿದರೆ ಏಳೆಂಟು ನಿರ್ಮಾಪಕರ ಹೆಸರನ್ನು ಹೇಳಿದರು.

ಇದೇ ಮಾತು-ಮಂಥನ ಕಾರ್ಯಕ್ರಮದಲ್ಲಿ ಅನಂತ್‌ನಾಗ್ ಮಾತನಾಡಿದ್ದನ್ನು ಪತ್ರಿಕೆಯಲ್ಲಿ ಓದಿ ವಿಷ್ಣುಗೂ ಸ್ಫೂರ್ತಿ ಬಂತಂತೆ. ಅಷ್ಟೇ ಅಲ್ಲ, ಅನಂತ್ ಮಾತನಾಡುವಾಗ ಅವಕಾಶ ಸಿಕ್ಕಿದರೆ ತಾನೂ ಅವರ ಮುಂದೆ ಕುಳಿತುಕೊಂಡು ಕೇಳುತ್ತಿದ್ದೆ ಎಂದರು! ಹೀಗೆ ತನ್ನ ಸಹನಟನೊಬ್ಬನನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44